ಶನಿವಾರ, ಜುಲೈ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 196 | ಪುಟ 20

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ಬೆಳ್ಳಿತೆರೆಯ ತಾರೆಯರ ಮಳೆಯೊಂದಿಗಿನ ನೆನಪುಗಳು

ಚರ್ಚೆ
ರೂಪಾಯಿ ಮೌಲ್ಯ ಕುಸಿಯಲು ಸರ್ಕಾರ, ಆರ್‌ಬಿಐ ನೀತಿಯಲ್ಲಿನ ವೈಫಲ್ಯ ಕಾರಣವೇ?

ಬಾಲಕಿ ಅಪಹರಿಸಿ ಸಾಮೂಹಿಕ ಅತ್ಯಾಚಾರ 10

ಜೆಎಂಎಂ ಮೇಲೆ ಕಾಂಗ್ರೆಸ್ ಅಸಮಾಧಾನ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
53,760 ▲	16,049 ▲	₹52,100 (ಬೆಂಗಳೂರು)	₹56,100 (ಬೆಂಗಳೂರು)	79.82 ▲

ಸರ್ಕಾರಿ ಕಚೇರಿ: ಕ್ಯಾಮೆರಾ ನಿಷೇಧ

ಸಾರ್ವಜನಿಕರು ಫೋಟೊ, ವಿಡಿಯೊ ಚಿತ್ರೀಕರಿಸುವಂತಿಲ್ಲ: ಆದೇಶಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ಕಚೇರಿಗಳಲ್ಲಿ ಕಾರ್ಯ ನಿರ್ವಹಣೆ ವೇಳೆಯಲ್ಲಿ ಸಾರ್ವಜನಿಕರು ಅನುಮತಿ ಇಲ್ಲದೆ ಫೋಟೊ ತೆಗೆಯುವುದು ಮತ್ತು ವಿಡಿಯೊ ಚಿತ್ರೀಕರಿಸುವುದನ್ನು ನಿಷೇಧಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

'ಶೇ 40ರ ಲಂಚದ ಆಪಾದನೆಗೆ ಗುರಿಯಾಗಿದ್ದ ಸರ್ಕಾರ, ಭ್ರಷ್ಟಾಚಾರ ಅನಿರ್ಬಂಧಿತವಾಗಿ ನಡೆಯಲು ಅನುಕೂಲ ಮಾಡಿಕೊಡುವುದಕ್ಕಾಗಿ ಈ ನಿಷೇಧ ಹೇರಿದೆ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಸಚಿವಾಲಯದ ಕಚೇರಿಗಳನ್ನು ಬಿಟ್ಟು ಉಳಿದೆಲ್ಲ ಕಚೇರಿಗಳಲ್ಲಿ ಸಿ.ಸಿ ಟಿ.ವಿ ಕ್ಯಾಮೆರಾ ಅಳವಡಿಸಲಾಗಿತ್ತು. ಕಚೇರಿಯ ಮುಖ್ಯಸ್ಥರು ತಮ್ಮ ವ್ಯಾಪ್ತಿಯ ಕೊಠಡಿಗಳ ಚಲನ-ವಲನಗಳನ್ನು ವೀಕ್ಷಿಸಲು ಕೇಂದ್ರೀಕೃತ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಅದನ್ನು ಇನ್ನಷ್ಟು ಸುಧಾರಣೆ ಮಾಡಬೇಕು ಎಂಬ ಆಗ್ರಹ ಇರುವಾಗಲೇ, ಫೋಟೊ, ವಿಡಿಯೊ ಚಿತ್ರೀಕರಣನ್ನೂ ನಿಷೇಧ ಹೇರಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ವಿಧಾನಸೌಧ ಮತ್ತು ವಿಕಾಸಸೌಧದಲ್ಲಿನ ಸಚಿವರು ಮತ್ತು ಅಧಿಕಾರಿಗಳ ಕಚೇರಿಗೆ ಮಾಧ್ಯಮ ಪ್ರತಿನಿಧಿಗಳು ಭೇಟಿ ನೀಡುವುದನ್ನು ನಿರ್ಬಂಧಿಸಿ 2021ರ ಜುಲೈ ತಿಂಗಳಲ್ಲಿ ಆದೇಶ ಹೊರಡಿಸಲಾಗಿತ್ತು. ತೀವ್ರ ವಿರೋಧ ವ್ಯಕ್ತವಾದ ಬಳಿಕ ಆಗಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಆದೇಶ ಹಿಂಪಡೆದಿದ್ದರು. ಈಗ ಕೂಡ ಸರ್ಕಾರಿ ಕಚೇರಿಗಳಲ್ಲಿ ಫೋಟೊ ತೆಗೆಯುವುದು ಮತ್ತು ವಿಡಿಯೊ ಚಿತ್ರೀಕರಣ ನಿಷೇಧಿಸಿರುವುದಕ್ಕೆ ಸಾರ್ವಜನಿಕ ವಲಯ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಹೊಸ ಆದೇಶವನ್ನು ತೀವ್ರವಾಗಿ ವಿರೋಧಿಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ರಾಜ್ಯ ಸರ್ಕಾರವು ಸರ್ಕಾರಿ ನೌಕರರ ಹಿತ-ರಕ್ಷಣೆಗಾಗಿ ಈ ಆದೇಶ ಹೊರಡಿಸಿಲ್ಲ. ಸರ್ಕಾರದಲ್ಲಿನ ಭ್ರಷ್ಟಾಚಾರ ಮುಚ್ಚಿಕೊಳ್ಳಲು ಈ ಕ್ರಮ ಕೈಗೊಂಡಿದೆ' ಎಂದು ಆರೋಪಿಸಿದ್ದಾರೆ.

4ನೇ ಪುಟ ನೋಡಿ

'ಸಂಸತ್ ಆವರಣದಲ್ಲಿ ಧರಣಿಗೆ ಅವಕಾಶ ಇಲ್ಲ'

ನವದೆಹಲಿ: ಸಂಸತ್ ಭವನದ ಆವರಣದಲ್ಲಿ ಪ್ರತಿಭಟನೆ, ಧರಣಿ ನಡೆಸುವಂತಿಲ್ಲ ಎಂದು ರಾಜ್ಯಸಭಾ ಕಾರ್ಯಾಲಯವು ನೀಡಿದ ನಿರ್ದೇಶನಕ್ಕೆ ವಿರೋಧ ಪಕ್ಷಗಳು ಶುಕ್ರವಾರ ಆಕ್ಷೇಪ ವ್ಯಕ್ತಪಡಿಸಿವೆ. 'ಸಾಮಾನ್ಯ ಬಳಕೆ'ಯ ಹಲವು ಪದಗಳನ್ನು 'ಅಸಂಸದೀಯ ಅಭಿವ್ಯಕ್ತಿ'ಯ ಪಟ್ಟಿಗೆ ಸೇರಿಸಿದ್ದ ಕ್ರಮವನ್ನು ವಿರೋಧ ಪಕ್ಷಗಳು ಗುರುವಾರವಷ್ಟೇ ಟೀಕಿಸಿದ್ದವು.

'ಸಂಸತ್ ಭವನದ ಆವರಣವನ್ನು ಪ್ರತಿಭಟನೆ, ಧರಣಿ, ಮುಷ್ಕರ, ಸತ್ಯಾಗ್ರಹ ಅಥವಾ ಧಾರ್ಮಿಕ ಕಾರ್ಯಕ್ರಮಗಳಿಗೆ ಸಂಸತ್ ಸದಸ್ಯರು ಬಳಸಬಾರದು' ಎಂದು ರಾಜ್ಯಸಭಾ ಕಾರ್ಯಾಲಯವು ನೀಡಿದ ನಿರ್ದೇಶನದಲ್ಲಿ ಇದೆ.

'ವಿಶ್ವಗುರು ಅವರ ಇತ್ತೀಚಿನ ಹೊಡೆತ–ಧರಣಿಗೂ ಇಲ್ಲ ಅವಕಾಶ' ಎಂದು ಸಂಸದ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡುವುದರೊಂದಿಗೆ ಈ ವಿಚಾರ ಬಹಿರಂಗವಾಯಿತು. ಬಳಿಕ, ವಿರೋಧ ಪಕ್ಷಗಳ ಹಲವು ಮುಖಂಡರು ಈ ಕ್ರಮವನ್ನು ಖಂಡಿಸಿ ಟ್ವೀಟ್ ಮಾಡಿದ್ದಾರೆ.

'ಇದೊಂದು ಸಾಮಾನ್ಯ ಕ್ರಮ. ಪ್ರತಿ ಅಧಿವೇಶನಕ್ಕೆ ಮುನ್ನವೂ ಇಂತಹ ಸುತ್ತೋಲೆ ಹೊರಡಿಸಲಾಗುತ್ತದೆ. ಇಂತಹ ರೂಢಿಗತ ವಿಚಾರಗಳನ್ನು ಸುದ್ದಿ ಮಾಡಲು ಸಂಸದರು ಬಳಸಿಕೊಳ್ಳಬಾರದು' ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ. ಇದು ಹೊಸ ನಿರ್ದೇಶನ ಅಲ್ಲ, ಇಂತಹ ನಿರ್ದೇಶನಗಳನ್ನು ಆಗಾಗ ಹೊರಡಿಸಲಾಗುತ್ತದೆ ಎಂದು ಸಂಸತ್ತಿನ ಮೂಲಗಳು ತಿಳಿಸಿವೆ.



ಡಿಜಿಟಲ್ ಸುದ್ದಿ ಮಾಧ್ಯಮಕ್ಕೆ ಮೂಗುದಾರ?

ಡಿಜಿಟಲ್ ಸುದ್ದಿ ಮಾಧ್ಯಮವನ್ನು ನಿಯಂತ್ರಿಸುವ ಚಿಂತನೆಯಲ್ಲಿ ಕೇಂದ್ರ ಸರ್ಕಾರ ಇದೆ. ಅದಕ್ಕಾಗಿ ಪತ್ರಿಕೆ ಮತ್ತು ನಿಯತಕಾಲಿಕ ನೋಂದಣಿ ಮಸೂದೆ ಎಂಬ ಹೊಸ ಕಾಯ್ದೆ ತರಲು ಮುಂದಾಗಿದೆ.

ಈಗ, ಪತ್ರಿಕೆ ಮತ್ತು ಪುಸ್ತಕಗಳ ನೋಂದಣಿ ಕಾಯ್ದೆ 1867 ಜಾರಿಯಲ್ಲಿದೆ. ಇದು ಪತ್ರಿಕೆಗಳ ನಿಯಂತ್ರಣಕ್ಕೆ ಬಳಕೆ ಆಗುತ್ತಿದೆ.

'ಡಿಜಿಟಲ್ ಸುದ್ದಿ ಪೋರ್ಟಲ್‌ಗಳನ್ನು ಕೂಡ ಪತ್ರಿಕೆಗಳ ರೀತಿಯಲ್ಲಿಯೇ ನಿಯಂತ್ರಿಸುವುದಕ್ಕಾಗಿ ಹೊಸ ಕಾಯ್ದೆ ತರಲು ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಚಿಂತಿಸುತ್ತಿದೆ. ಈ ಬಗೆಗಿನ ಸಮಾಲೋಚನೆ ಪೂರ್ಣಗೊಂಡಿದೆ. ಕೇಂದ್ರ ಸಚಿವ ಸಂಪುಟದ ಮುಂದೆ ಸದ್ಯವೇ ಮಸೂದೆ ಬರಲಿದೆ' ಎಂದು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಸೂದೆಯು ಕಾಯ್ದೆಯ ರೂಪಕ್ಕೆ ಬಂದರೆ, ಸುದ್ದಿ ಪೋರ್ಟಲ್‌ಗಳು ಕೂಡ ನೋಂದಣಿ ಮಾಡಿಕೊಳ್ಳಬೇಕಾಗುತ್ತವೆ. ಸುದ್ದಿ ಪೋರ್ಟಲ್‌ಗಳು ನಿಯಮಗಳನ್ನು ಉಲ್ಲಂಘಿಸಿದರೆ ಅವುಗಳ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವು ರಿಜಿಸ್ಟ್ರಾರ್ ಜನರಲ್ ಅವರಿಗೆ ದೊರೆಯುತ್ತದೆ.

ತನಿಖೆ ಮೇಲೆ ಈಶ್ವರಪ್ಪ ಪ್ರಭಾವ: ರಾಜ್ಯಪಾಲರಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಗುತ್ತಿಗೆದಾರರಾಗಿದ್ದ ನನ್ನ ಪತಿ ಸಂತೋಷ ಪಾಟೀಲ ಅವರು ಉಡುಪಿಯ ಲಾಡ್ಜ್‌ವೊಂದರಲ್ಲಿ ಮೃತಪಟ್ಟ ಪ್ರಕರಣದ ತನಿಖೆಯ ದಾರಿ ತಪ್ಪಿಸಲಾಗುತ್ತಿದೆ. ಪ್ರಕರಣ ಕುರಿತು ಪಾರದರ್ಶಕ ತನಿಖೆ ನಡೆಸಲು ಕ್ರಮ ವಹಿಸಬೇಕು' ಎಂದು ಕೋರಿ ಪತ್ನಿ ರೇಣುಕಾ (ಜಯಶ್ರೀ) ಅವರು ರಾಜ್ಯಪಾಲರಿಗೆ ಶುಕ್ರವಾರ ಪತ್ರ ಬರೆದು ಮನವಿ ಮಾಡಿದ್ದಾರೆ.



ರೇಣುಕಾ ಪಾಟೀಲ

'ಕಳೆದ ಏಪ್ರಿಲ್ 12ರಂದು ನನ್ನ ಪತಿ ಸಾವು ಸಂಭವಿಸಿದೆ. ಈ ಸಾವು ಅನುಮಾನಾಸ್ಪದ ಆಗಿದ್ದರಿಂದ ಶಾಸಕ ಕೆ.ಎಸ್. ಈಶ್ವರಪ್ಪ ವಿರುದ್ಧ ಏಪ್ರಿಲ್ 13ರಂದು ಉಡುಪಿ ಪೊಲೀಸರಿಗೆ ದೂರು ನೀಡಿದ್ದೇನೆ. ಅದಕ್ಕೆ ಮೂಲ ಕಾರಣವೇನು, ಯಾರು ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸಿದ್ದಾರೆ. ಆದರೆ, ತನಿಖೆ ಪಾರದರ್ಶಕವಾಗಿ ನಡೆಯುತ್ತಿಲ್ಲ ಎಂದು ನಮ್ಮ ಕುಟುಂಬಕ್ಕೆ ಆತಂಕ ಉಂಟಾಗಿದೆ. ಇದರಲ್ಲಿ ಪ್ರಮುಖ ಆರೋಪಿ ಕೆ.ಎಸ್.ಈಶ್ವರಪ್ಪ ಅವರು ಪ್ರಭಾವಿ ನಾಯಕರಾಗಿದ್ದಾರೆ. ಅವರ ನಿರ್ದೇಶನದಂತೆಯೇ ತನಿಖೆ ನಡೆಯುತ್ತಿದೆ' ಎಂದು ಅವರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಬರೆದ ಪತ್ರದಲ್ಲಿ ಆರೋಪಿಸಿದ್ದಾರೆ.

5A ಪುಟ ನೋಡಿ

ಪಿಎಸ್‌ಐ ಅಕ್ರಮ: ತಂದೆ ಹೆಸರಿನಲ್ಲಿ ಆಸ್ತಿ ನೋಂದಣಿ
ಜಮೀನು ಖರೀದಿಸಿದ್ದ ಪೌಲ್

• ಸಂತೋಷ ಜಿಗಳಿಕೊಪ್ಪ/ ಡಿ.ಎಂ.ಕುರ್ಕೆ ಪ್ರಶಾಂತ್

ಬೆಂಗಳೂರು/ಚಿಕ್ಕಬಳ್ಳಾಪುರ: ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ಎಸಗಿದ್ದ ಆರೋಪದಡಿ ಬಂಧಿಸಲಾಗಿರುವ ಎಡಿಜಿಪಿ ಅಮ್ರಿತ್ ಪೌಲ್ (56) ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ಹಣದ ಪಾಲಿನಲ್ಲಿ ತೋಟ ಹಾಗೂ ಜಮೀನು ಖರೀದಿ ಮಾಡಿರುವ ಸಂಗತಿ ಸಿಐಡಿ ಅಧಿಕಾರಿಗಳ ತನಿಖೆಯಿಂದ ಹೊರಬಿದ್ದಿದೆ.

ಪೊಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಅಮ್ರಿತ್ ಪೌಲ್, ಕೆಲ ರಿಯಲ್ ಎಸ್ಟೇಟ್ ಉದ್ಯಮಿಗಳು ಹಾಗೂ ಕೆಲ ರಾಜಕೀಯ ಮುಖಂಡರ ಜೊತೆ ಒಡನಾಟ ಹೊಂದಿದ್ದರು. ಅವರ ಮಧ್ಯಸ್ಥಿಕೆಯಲ್ಲಿ ನೂರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿ ಖರೀದಿಸಿರುವ ದಾಖಲೆಗಳು ಸಿಐಡಿಗೆ ಲಭ್ಯವಾಗಿವೆ.

'ಪೊಲೀಸ್ ವೃತ್ತಿ ಆರಂಭಿಸಿದ ದಿನದಿಂದಲೂ ಅಮ್ರಿತ್ ಪೌಲ್, ಹಲವೆಡೆ ಆಸ್ತಿ ಮಾಡಿಕೊಂಡು ಬಂದಿದ್ದಾರೆ. ಕೇಂದ್ರ ವಲಯದ ಐಜಿಪಿ ಆಗಿದ್ದ ಸಂದರ್ಭದಲ್ಲೂ ಆಸ್ತಿ ಖರೀದಿಸಿದ್ದಾರೆ. 545 ಪಿಎಸ್‌ಐ ನೇಮಕಾತಿ ಪ್ರಕ್ರಿಯೆ ಆರಂಭವಾದ ನಂತರ ಮತ್ತಷ್ಟು ಆಸ್ತಿಗಳನ್ನು ಖರೀದಿ ಮಾಡಿರುವ ಮಾಹಿತಿ ಸಿಕ್ಕಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ಪ್ರಜಾವಾಣಿ ವಿಶೇಷ

ತಂದೆ ಹೆಸರಿನಲ್ಲಿ ನೋಂದಣಿ: 'ಫಾರ್ಮ್‌ಹೌಸ್', ಮಾವಿನ ತೋಟ, ರಾಗಿ ಬೆಳೆಯುವ ಕೃಷಿ ಭೂಮಿ... ಹೀಗೆ ಹಲವು ಆಸ್ತಿಗಳನ್ನು ಪೌಲ್ ಖರೀದಿ ಮಾಡಿದ್ದಾರೆ. ತಮ್ಮ ತಂದೆ ನೇತರಾಮ್ ಬನ್ಸಾಲ್ ಹೆಸರಿನಲ್ಲೇ ಆಸ್ತಿಗಳನ್ನು ನೋಂದಣಿ ಮಾಡಿಸಿದ್ದಾರೆ. ಇವುಗಳ ಪಹಣಿ ಪತ್ರಗಳನ್ನೂ ಈಗಾಗಲೇ ಜಪ್ತಿ ಮಾಡಲಾಗಿದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

'ಹರಿಯಾಣದಲ್ಲೂ ಜಮೀನು ಖರೀದಿ'

'ಪೌಲ್ ಅವರು ಹರಿಯಾಣದಲ್ಲೂ ಜಮೀನು ಖರೀದಿ ಮಾಡಿರುವ ಮಾಹಿತಿ ಇದೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳಿಗಾಗಿ ಹುಡುಕಾಟ ನಡೆಯುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಕೆಲ ಬಿಲ್ಡರ್‌ಗಳ ಜೊತೆ ಪಾಲುದಾರಿಕೆ ಹೊಂದಿದ್ದಾರೆ ಎನ್ನಲಾದ ಪೌಲ್, ಅವರ ಜೊತೆ ಸೇರಿ ಸುಮಾರು 40 ಎಕರೆ ಖರೀದಿ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆದರೆ, ಸದ್ಯಕ್ಕೆ ಪುರಾವೆ ಲಭ್ಯವಾಗಿಲ್ಲ. ಬಿಲ್ಡರ್‌ಗಳನ್ನೂ ವಿಚಾರಣೆ ನಡೆಸಬೇಕಿದೆ' ಎಂದೂ ತಿಳಿಸಿವೆ.



ಚಿಕ್ಕಬಳ್ಳಾಪುರದ ಹೊಸ ಹುಡ್ಯ ಗ್ರಾಮದಲ್ಲಿ ಅಮ್ರಿತ್ ಪೌಲ್ ಅವರ ತಂದೆ ಹೆಸರಿನಲ್ಲಿ ನೋಂದಣಿ ಆಗಿರುವ ಫಾರ್ಮ್‌ಹೌಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು
ಐಐಟಿ ಮದ್ರಾಸ್‌ಗೆ ಮೊದಲ ರ‍್ಯಾಂಕ್

ನವದೆಹಲಿ (ಪಿಟಿಐ): ಮದ್ರಾಸ್ ಐಐಟಿಯು ಸತತ ನಾಲ್ಕನೇ ಬಾರಿ ದೇಶದ ಅತ್ಯುನ್ನತ ಶೈಕ್ಷಣಿಕ ಸಂಸ್ಥೆಗಳ ಪಟ್ಟಿಯಲ್ಲಿ ಮೊದಲ ರ‍್ಯಾಂಕ್ ಪಡೆದಿದೆ. ಕೇಂದ್ರ ಶಿಕ್ಷಣ ಸಚಿವಾಲಯವು ಶುಕ್ರವಾರ 2022ನೇ ಸಾಲಿನ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು (ಎನ್‌ಐಆರ್‌ಎಫ್) ರ‍್ಯಾಂಕಿಂಗ್ ಅನ್ನು ಬಿಡುಗಡೆ ಮಾಡಿದೆ.

ಬೆಂಗಳೂರಿನ ಐಐಎಸ್‌ಸಿ ಅತ್ಯುನ್ನತ ಸಂಶೋಧನಾ ಸಂಸ್ಥೆಯ ವಿಭಾಗದಲ್ಲಿ ಮೊದಲ ರ‍್ಯಾಂಕ್ ಪಡೆದಿದೆ. ಅತ್ಯುತ್ತಮ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ದೆಹಲಿಯ ಜವಾಹರ್ ಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ಮತ್ತು ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯಗಳು ಕ್ರಮವಾಗಿ ಎರಡು ಮತ್ತು ಮೂರನೇ ರ‍್ಯಾಂಕ್ ಪಡೆದಿವೆ. 2021ರ ಸಾಲಿನಲ್ಲಿ ಇದೇ ವರ್ಗದಲ್ಲಿ ಮೂರನೇ ರ‍್ಯಾಂಕ್‌ನಲ್ಲಿದ್ದ ಬನಾರಸ್ ಹಿಂದೂ ವಿಶ್ವವಿದ್ಯಾಲಯವು, ಈ ಸಾಲಿನಲ್ಲಿ ಆರನೇ ರ‍್ಯಾಂಕ್‌ಗೆ ಕುಸಿದಿದೆ.

ಮುಂದಿನ ಸಾಲಿನಿಂದ ಆವಿಷ್ಕಾರ ಮತ್ತು ಉದ್ಯಮಶೀಲತೆ ವಿಭಾಗದಲ್ಲಿ ಕೂಡ ಶ್ರೇಯಾಂಕ ನೀಡಲಾಗುವುದು. ಶಾಲೆಗಳಿಗೆ ಕೂಡ ಶ್ರೇಯಾಂಕ ನೀಡುವ ಪದ್ಧತಿಯನ್ನು ಸದ್ಯವೇ ಆರಂಭಿಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ.



ಸಮಗ್ರ ಶ್ರೇಯಾಂಕ

ರ‍್ಯಾಂಕ್	ಸಂಸ್ಥೆ
1	ಐಐಟಿ, ಮದ್ರಾಸ್
2	ಐಐಎಸ್‌ಸಿ, ಬೆಂಗಳೂರು
3	ಐಐಟಿ, ಬಾಂಬೆ
4	ಐಐಟಿ, ದೆಹಲಿ
5	ಐಐಟಿ, ಕಾನ್ಪುರ

ಉತ್ತಮ ವಿಶ್ವವಿದ್ಯಾಲಯ

ರ‍್ಯಾಂಕ್	ಸಂಸ್ಥೆ
1	ಐಐಎಸ್‌ಸಿ, ಬೆಂಗಳೂರು
2	ಜೆಎನ್‌ಯು, ದೆಹಲಿ
3	ಜಾಮಿಯಾ ಮಿಲಿಯಾ ಇಸ್ಲಾಮಿಯಾ, ದೆಹಲಿ
4	ಜಾದವಪುರ ವಿಶ್ವವಿದ್ಯಾಲಯ, ಕೋಲ್ಕತ್ತ
5	ಅಮೃತ ವಿಶ್ವ ವಿದ್ಯಾಪೀಠಂ, ಕೊಯಮತ್ತೂರು

ಮೊದಲ ಹತ್ತರಲ್ಲಿ ರ‍್ಯಾಂಕ್ ಪಡೆದ ರಾಜ್ಯದ ಸಂಸ್ಥೆಗಳು

ವಿಭಾಗ	ಸಂಸ್ಥೆ	ರ‍್ಯಾಂಕ್
ಸಂಶೋಧನೆ	ಐಐಎಸ್‌ಸಿ, ಬೆಂಗಳೂರು	1
ಉತ್ತಮ ವಿ.ವಿ.	ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್, ಮಣಿಪಾಲ	7
ಎಂಜಿನಿಯರಿಂಗ್	ಎನ್‌ಐಟಿ, ಸುರತ್ಕಲ್	10
ಮ್ಯಾನೇಜ್‌ಮೆಂಟ್	ಐಐಎಂ, ಬೆಂಗಳೂರು	2
ಫಾರ್ಮಸಿ	ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿ, ಮೈಸೂರು	8
ಫಾರ್ಮಸಿ	ಮಣಿಪಾಲ್ ಫಾರ್ಮಾಸುಟಿಕಲ್ ಸೈನ್ಸಸ್ ಕಾಲೇಜು, ಮಣಿಪಾಲ	9
ವೈದ್ಯಕೀಯ	ನಿಮಾನ್ಸ್, ಬೆಂಗಳೂರು	4
ವೈದ್ಯಕೀಯ	ಕಸ್ತೂರ ಬಾ ಮೆಡಿಕಲ್ ಕಾಲೇಜ್, ಮಣಿಪಾಲ	10
ದಂತ ವೈದ್ಯಕೀಯ	ಮಣಿಪಾಲ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್, ಮಣಿಪಾಲ	2
ದಂತ ವೈದ್ಯಕೀಯ	ಎ.ಬಿ.ಶೆಟ್ಟಿ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್, ಮಂಗಳೂರು	6
ದಂತ ವೈದ್ಯಕೀಯ	ಮಣಿಪಾಲ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್, ಮಂಗಳೂರು	7
ಕಾನೂನು	ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು	1

ಮಳಲಿ ಮಸೀದಿ: ಅರ್ಜಿ ವಜಾ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಳಲಿ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯವು ದಾವೆಯ ಸಿಂಧುತ್ವದ ಕುರಿತು ವಿಚಾರಣೆ ನಡೆಸುತ್ತಿರುವುದನ್ನು ಆಕ್ಷೇಪಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಮಂಗಳೂರಿನ ತೆಂಕ ಎಡಪಾಡಿಯ ಧನಂಜಯ್ ಹಾಗೂ ಬಡಗು ಎಡಪಾಡಿಯ ಮನೋಜ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ, ಶುಕ್ರವಾರ ಪ್ರಕಟಿಸಿತು.

ಇದರಿಂದಾಗಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ಅಸಲು ದಾವೆಯ ಸಿಂಧುತ್ವದ ಕುರಿತು ವಾದ-ಪ್ರತಿವಾದ ಆಲಿಸಿದರೂ, ಯಾವುದೇ ಆದೇಶ ಹೊರಡಿಸಬಾರದು ಎಂದು ಮಂಗಳೂರಿನ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯಕ್ಕೆ ಜೂನ್ 13ರಂದು ನೀಡಿದ್ದ ಮಧ್ಯಂತರ ಆದೇಶವೂ ತೆರವುಗೊಂಡಂತಾಗಿದೆ.

ನಗರದಲ್ಲಿ ಇಂದು

ಅಂತರ ಕಾಲೇಜು ಸಾಂಸ್ಕೃತಿಕ ಹಬ್ಬ 'ಸಂಸ್ಕೃಷ್ಟಿ-2022': ಅತಿಥಿಗಳು: ಕೆ. ಮಾದೇಶ, ಭಾವನಾ ರಾಮಣ್ಣ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಕೆ.ಪಿ. ನರಸಿಂಹಮೂರ್ತಿ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ಬೆಳಿಗ್ಗೆ 10

ಗೀತಾ ವಸಂತ ಅವರ 'ಅವಳ ಅರಿವು' ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಸ್.ಎನ್. ನಾಗರಾಜ ರೆಡ್ಡಿ, ಅತಿಥಿಗಳು: ಎಚ್. ಎಲ್. ಪುಷ್ಪ, ಆರತಿ ಎಚ್.ಎನ್., ಸತೀಶ್ ಎಂ. ಕಾರಂತ್, ಆಯೋಜನೆ: ಜನ ಪ್ರಕಾಶನ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11



ಬರಗೂರು ರಾಮಚಂದ್ರಪ್ಪ

ರುದ್ರಪ್ಪ ಹನಗವಾಡಿ ಅವರ ಆತ್ಮಕಥೆ 'ಋಣದ ಗಣಿ' ಪುಸ್ತಕ ಲೋಕಾರ್ಪಣೆ: ಕೃತಿ ಬಿಡುಗಡೆ: ವಿಪಕ್ಷ ನಾಯಕ ಸಿದ್ದರಾಮಯ್ಯ, ಅಧ್ಯಕ್ಷತೆ: ಇಂದಿರಾ ಕೃಷ್ಣಪ್ಪ, ಅತಿಥಿಗಳು: ಎಸ್.ಜಿ. ಸಿದ್ಧರಾಮಯ್ಯ, ಎಚ್.ಸಿ. ಮಹದೇವಪ್ಪ, ಕೆ. ಮರುಳಸಿದ್ದಪ್ಪ, ಕೆ.ವೈ. ನಾರಾಯಣಸ್ವಾಮಿ, ಆಯೋಜನೆ: ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 11

ಜನಪದ ಗೀತೆ ರಸಗ್ರಹಣ ಶಿಬಿರ: ಉದ್ಘಾಟನೆ: ಅಪ್ಪಗೆರೆ ತಿಮ್ಮರಾಜು, ಜಯರಾಮ್, ಟಿ.ತಿಮ್ಮೇಶ್, ಎನ್. ಪುಟ್ಟಸ್ವಾಮಿ, ಟಿ.ರಾಜಾರಾಮ್, ಆಯೋಜನೆ: ವಿಜಯನಗರ ಸಾಂಸ್ಕೃತಿಕ ಕಲಾಕೇಂದ್ರ, ಸವಿಗಾನಲಹರಿ ಸುಗಮ ಸಂಗೀತ ಶಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಊರ್ವ ಸಭಾಂಗಣ, ಉಪಕಾರ್ ಬಡಾವಣೆ, ಉಲ್ಲಾಳು, ಮಧ್ಯಾಹ್ನ 3

'ಇಲ್ಲಿರುವುದು ಸುಮ್ಮನೆ' ನಾಟಕ ಪ್ರದರ್ಶನ: ವಿನ್ಯಾಸ ಮತ್ತು ನಿರ್ದೇಶನ: ಸಾಲಿಯಾನ್ ಉಮೇಶ್ ನಾರಾಯಣ, ಸಂಗೀತ: ಗಿರಿಜಾ ಸಿದ್ದಿ ಮತ್ತು ತಂಡ, ಆಯೋಜನೆ: ಲೋಕಚರಿತ, ಸ್ಥಳ: ಪ್ರಭಾತ್ ಕಲಾಪೂರ್ಣಿಮ, ಎನ್.ಆರ್. ಕಾಲೊನಿ, ಮಧ್ಯಾಹ್ನ 3.30

ಮನೆಯಂಗಳದಲ್ಲಿ ಮಾತುಕತೆ-224: ಅತಿಥಿಗಳು: ಎನ್. ಅನಂತರಾಮನ್, ಸಂವಾದ ನಿರ್ವಹಣೆ: ಶ್ರೀಪ್ರಸಾದ್. ಎಚ್.ಎಸ್., ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4

'ಪಠ್ಯ ಪುಸ್ತಕ ಪರಿಷ್ಕರಣೆ-ಒಂದು ಚರ್ಚೆ': ಅತಿಥಿಗಳು: ಕೆ.ಜೋಸೆಫ್, ಅರುಣ್ ಲೂಯಿಸ್, ಎಲ್.ಎನ್. ಮುಕುಂದರಾಜ್, ಎಲ್.ಹನುಮಂತಯ್ಯ, ಸಿ.ಎಸ್. ದ್ವಾರಕಾನಾಥ್, ಶಿವಸುಂದರ್, ಅಖಿಲಾ ವಿದ್ಯಾಸಂದ್ರ, ಆಯೋಜನೆ: ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ, ವಿಚಾರ ವೇದಿಕೆ-ಕರ್ನಾಟಕ, ಸ್ಥಳ: ಆಶೀರ್ವಾದ, ನಂ.30, ಸೇಂಟ್ ಮಾರ್ಕ್ಸ್ ರಸ್ತೆ, ಸಂಜೆ 4.30

'ಸ್ವರ ನಿವೇದ' ಸಂಗೀತ ಕಾರ್ಯಕ್ರಮ: ಅತಿಥಿಗಳು: ವೀರ್ ಸಮರ್ಥ್, ಸುಮಾ ಎಲ್.ಎನ್. ಶಾಸ್ತ್ರಿ, ಆಯೋಜನೆ: ಸ್ವರ ಚಿಂತನ, ಸ್ಥಳ: ಜ್ಞಾನ ಸೌಧ, ಮೂಡಲಪಾಳ್ಯ, ಸಂಜೆ 5

'ಎಚ್.ವಿಶ್ವನಾಥ ಮತ್ತು ಎಂ.ಎಸ್. ಇಂದಿರಾ ದತ್ತಿ ಪ್ರಶಸ್ತಿ' ಪ್ರದಾನ ಸಮಾರಂಭ: ಉದ್ಘಾಟನೆ: ಹರಿಪ್ರಕಾಶ್ ಕೋಣೆಮನೆ, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿಗಳು: ಲತಾಕುಮಾರಿ, ರಮೇಶ್ ಮುದಿಗೆರೆ, ಮೋಹನ್‌ದೇವ್ ಆಳ್ವ, ಟಿ.ವಿ. ಶ್ರೀನಿವಾಸನ್, ಎಚ್.ವಿಶ್ವನಾಥ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಕರ್ನಾಟಕ ಮಕ್ಕಳ ಕೂಟ, ಸಂಜೆ 5.30

ಸಂಕ್ರಮಣ-2023 ಸಾಂಸ್ಕೃತಿಕ ಉತ್ಸವ: ಆಯೋಜನೆ: ಮಂಜುಳಾ ಪರಮೇಶ್ ಹಾಗೂ ಸಪ್ತಸ್ವರ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 5.45

'ಗುರುಸ್ಮರಣೆ ಕೆ.ವೆಂಕಟಲಕ್ಷಮ್ಮ ದತ್ತಿ ಕಾರ್ಯಕ್ರಮ': ಅತಿಥಿಗಳು: ಪ್ರೊ.ಎಂ. ಶಕುಂತಲಾ, ಆರತಿ ರಾವ್, ಭರತನಾಟ್ಯ ಪ್ರಸ್ತುತಿ: ಭಾರತಿ ವಿಠಲ್ ಮತ್ತು ಶಿಷ್ಯರು, ನಿರ್ದೇಶನ: ಜಿ.ಎಸ್. ನಾಗೇಶ್, ಶ್ರೀರಂಜಿತಾ ನಾಗೇಶ್, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತಿ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ನಿಧನ ವಾರ್ತೆ

ಟಿ.ಎಂ. ಮಂಚಯ್ಯ



ಬೆಂಗಳೂರು: ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕರ ಕಚೇರಿಯಲ್ಲಿ ಪ್ಯೂನ್ ಆಗಿ ಕಾರ್ಯ ನಿರ್ವಹಿಸಿದ್ದ ಟಿ.ಎಂ. ಮಂಚಯ್ಯ (76) ಅವರು ಕಿಮ್ಸ್ ಆಸ್ಪತ್ರೆಯಲ್ಲಿ ಶುಕ್ರವಾರ ಸಂಜೆ 4.15ಕ್ಕೆ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಒಬ್ಬ ಮಗ ಮತ್ತು ಮಗಳು ಇದ್ದಾರೆ.

ಮೃತರ ಅಂತಿಮ ದರ್ಶನಕ್ಕೆ ಅವರ ಸ್ವಗೃಹದಲ್ಲಿ (ಶೇಷಾದ್ರಿಪುರ ಅಪೋಲೊ ಆಸ್ಪತ್ರೆ ಹಿಂಭಾಗ) ಶನಿವಾರ ಬೆಳಿಗ್ಗೆ 9ರಿಂದ 12 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ. ಮಧ್ಯಾಹ್ನ 1 ಗಂಟೆಗೆ ಚಾಮರಾಜಪೇಟೆಯ ಟಿ.ಆರ್. ಮಿಲ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಸಂಬಂಧಿಕರ ಸಂಪರ್ಕ ಸಂಖ್ಯೆ 9844167361

ಶಿವಾಜಿನಗರ: 'ಜನಸ್ಪಂದನ' ಇಂದು

ಜನಸ್ಪಂದನ
ಸಿಟಿಜ಼ನ್ಸ್ ಫಾರ್ ಚೇಂಜ್

ಬೆಂಗಳೂರು: ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹವು ಶನಿವಾರ (ಜುಲೈ 16) ವಸಂತ ನಗರದ ತಿಮ್ಮಯ್ಯ ರಸ್ತೆಯ ಕಾವೇರಪ್ಪ ಬಡಾವಣೆಯ ಬಂಜಾರ ಭವನದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಿದೆ.

ಈ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ.

ಕೈಗಾರಿಕೆಗೆ ಆರ್ಥಿಕ ನೆರವು ಒಡಂಬಡಿಕೆಗೆ ಸಹಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಪ್ರರು ನಡೆಸುತ್ತಿರುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಆರ್ಥಿಕ, ಕಾನೂನು ನೆರವು ಸೇರಿದಂತೆ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಮೂಲಕ ಉತ್ತೇಜನ ನೀಡಲು ಬೆಂಗಳೂರಿನ ವಿಪ್ರ ಬಿಸಿನೆಸ್ ಫೋರಂ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಒಡಂಬಡಿಕೆಗೆ ಸಹಿ ಹಾಕಿದವು.

ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಫೋರಂ ಪರವಾಗಿ ಅಧ್ಯಕ್ಷ ಜಯತೀರ್ಥ ಹಾಗೂ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಜಂಟಿಯಾಗಿ ಒಡಂಬಡಿಕೆ ಘೋಷಿಸಿದರು.

ಬ್ರಾಹ್ಮಣ ಸಮುದಾಯದ ಕಿರು ಉದ್ದಿಮೆದಾರರು ತಯಾರಿಸಿದ ಉತ್ಪನ್ನಗಳ ಮೂರು ದಿನಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಅಶೋಕ್ ಹಾರನಹಳ್ಳಿ ಚಾಲನೆ ನೀಡಿದರು.

ಸಂಕಷ್ಟ ಸ್ಥಿತಿ ಎದುರಿಸುತ್ತಿರುವ ವಿಪ್ರ ಸಮುದಾಯದ ಕಿರು ಉದ್ದಿಮೆದಾರರಿಗೆ ಬ್ರಾಹ್ಮಣ ಮಹಾಸಭಾ ವತಿಯಿಂದ ಕಾನೂನು ನೆರವು ಸೇರಿದಂತೆ ಅಗತ್ಯವಿರುವ ಎಲ್ಲ ನೆರವನ್ನು ನೀಡುವುದು ಒಪ್ಪಂದದ ಉದ್ದೇಶ. ಅದಕ್ಕಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾನೂನು ಘಟಕ, ಕೈಗಾರಿಕಾ ಘಟಕ ಮಧ್ಯವರ್ತಿಯಾಗಿ ಎಲ್ಲ ನೆರವು ನೀಡಲಿದೆ ಎಂದು ಅಶೋಕ್ ಹಾರನಹಳ್ಳಿ ಹೇಳಿದರು.

ಮಹಾಸಭಾದ ಜಂಟಿ ಕಾರ್ಯದರ್ಶಿ ರವಿಕುಮಾರ್ ಉಪಸ್ಥಿತರಿದ್ದರು.



ವಿಪ್ರ ಉದ್ಯಮಿಗಳ ಸಂಪರ್ಕ ವಿಳಾಸ ವಿವರ ಒಳಗೊಂಡ ಕಿರು ಡೈರೆಕ್ಟರಿಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಬಿಡುಗಡೆ ಮಾಡಿದರು. ಜಯತೀರ್ಥ ಹಾಗೂ ರವಿಕುಮಾರ್ ಇದ್ದರು

ವಿದ್ಯಾರ್ಥಿಗಳನ್ನು ಕರೆಸಿಕೊಳ್ಳಲು ಚೀನಾ ಯತ್ನ

ಬೀಜಿಂಗ್ (ಪಿಟಿಐ): ಕೋವಿಡ್– 19 ಸಾಂಕ್ರಾಮಿಕದ ಕಾರಣಕ್ಕೆ ಹೇರಲಾಗಿದ್ದ ವೀಸಾ ನಿರ್ಬಂಧಗಳಿಂದಾಗಿ ಭಾರತದಲ್ಲೇ ಉಳಿದಿರುವ ವಿದ್ಯಾರ್ಥಿಗಳನ್ನು ಚೀನಾಕ್ಕೆ ಕರೆಸಿಕೊಳ್ಳುವ ಮತ್ತು ಅವರು ವ್ಯಾಸಂಗ ಮಾಡುತ್ತಿದ್ದ ಕಾಲೇಜುಗಳಲ್ಲಿ ಪುನಃ ದಾಖಲಾತಿ ಒದಗಿಸುವ ನಿಟ್ಟಿನಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ಮಾಡಲಾಗುತ್ತಿದೆ ಎಂದು ಚೀನಾ ಶುಕ್ರವಾರ ಹೇಳಿದೆ.

ಈ ನಿಟ್ಟಿನಲ್ಲಿ ಚೀನಾ ಮತ್ತು ಭಾರತದ ಸಂಬಂಧಪಟ್ಟ ಇಲಾಖೆಗಳು ಕೆಲಸ ಮಾಡುತ್ತಿವೆ. ಚೀನಾದಲ್ಲಿ ವ್ಯಾಸಂಗ ಮುಂದುವರೆಸಲು ಇಚ್ಛಿಸುವ ಭಾರತೀಯ ವಿದ್ಯಾರ್ಥಿಗಳ ಮೊದಲ ತಂಡವನ್ನು ಆದಷ್ಟು ಬೇಗ ಕರೆಸಿಕೊಳ್ಳುವ ಪ್ರಯತ್ನ ನಡೆದಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್ಬಿಂಗ್ ಮಾಧ್ಯಮಗಳ ಎದುರು ಹೇಳಿದ್ದಾರೆ.

ಸುಮಾರು 23,000 ವಿದ್ಯಾರ್ಥಿಗಳು ಚೀನಾದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅವರಲ್ಲಿ ಹಲವರು ವೈದ್ಯಕೀಯ ವಿದ್ಯಾರ್ಥಿಗಳು. ಚೀನಾದಲ್ಲಿ ವ್ಯಾಸಂಗ ಮುಂದುವರೆಸಲು ಇಚ್ಛಿಸುತ್ತಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಭಾರತ ಈಗಾಗಲೇ ಚೀನಾಕ್ಕೆ ನೀಡಿದೆ ಎನ್ನಲಾಗಿದೆ.

ಕೋವಿಡ್: 20,038 ಹೊಸ ಪ್ರಕರಣ, 47 ಸಾವು

ನವದೆಹಲಿ (ಪಿಟಿಐ): ದೇಶದಲ್ಲಿ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಮುಕ್ತಾಯವಾದ 24 ತಾಸುಗಳ ಅವಧಿಯಲ್ಲಿ 20,038 ಕೊರೊನಾ ಪ್ರಕರಣಗಳು ದೃಢಪಟ್ಟಿವೆ. ಇದೇ ಅವಧಿಯಲ್ಲಿ 47 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಇದರೊಂದಿಗೆ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 4,37,10,027ಕ್ಕೆ ಏರಿಕೆಯಾಗಿದೆ. ಒಟ್ಟು ಸಾವಿನ ಸಂಖ್ಯೆ 5,25,604ಕ್ಕೆ ತಲುಪಿದೆ.

ಫೋಟೊ, ವಿಡಿಯೊ ಚಿತ್ರೀಕರಣಕ್ಕೆ ನಿಷೇಧ: ಸಿದ್ದರಾಮಯ್ಯ ಆಕ್ರೋಶ

‘ಹುಳುಕು ಮುಚ್ಚಿಡಲು ಸರ್ಕಾರದ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿತ್ಯವೂ ಭ್ರಷ್ಟಾಚಾರ, ಹಗರಣಗಳು ಹೊರ ಬರುತ್ತಿರುವುದರಿಂದ ಸರ್ಕಾರದಲ್ಲಿನ ಹುಳುಕು ಮುಚ್ಚಿಕೊಳ್ಳಲು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರು ಫೋಟೊ ತೆಗೆಯುವುದು, ವಿಡಿಯೊ ಚಿತ್ರೀಕರಿಸುವುದನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಈ ಕುರಿತು ಶುಕ್ರವಾರ ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿರುವ ಅವರು, ‘ಶೇಕಡ 40ರಷ್ಟು ಲಂಚ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷಾ ಹಗರಣ ಸೇರಿದಂತೆ ಬಿಜೆಪಿ ಸರ್ಕಾರದಲ್ಲಿನ ನೂರಕ್ಕೂ ಹೆಚ್ಚು ದೊಡ್ಡ ಪ್ರಮಾಣದ ಲಂಚ ಪ್ರಕರಣಗಳು ಬಹಿರಂಗವಾಗಿವೆ. ಈ ಸರ್ಕಾರದಲ್ಲಿ ನಾಡಿನ ಜನರು ರೋಸಿ ಹೋಗುವಷ್ಟು ಭ್ರಷ್ಟಾಚಾರ ತುಂಬಿದೆ. ಈಗ ರಾಜ್ಯ ಸರ್ಕಾರಿ ನೌಕರರ ಮನವಿಯನ್ನು ತನ್ನ ಮೂಗಿನ ನೇರಕ್ಕೆ ಅರ್ಥೈಸಿಕೊಂಡು ಈ ಆದೇಶ ಹೊರಡಿಸಿದೆ’ ಎಂದು ಹೇಳಿದ್ದಾರೆ.

‘ಸಾರ್ವಜನಿಕರು ಫೋಟೊ ತೆಗೆಯುವುದು ಅಥವಾ ವಿಡಿಯೊ ಚಿತ್ರೀಕರಣ ಮಾಡಿದ್ದರಿಂದ ಎಷ್ಟು ಮಂದಿ ಸರ್ಕಾರಿ ನೌಕರರ ಕರ್ತವ್ಯನಿರ್ವಹಣೆಗೆ ತೊಂದರೆಯಾಗಿದೆ? ಎಲ್ಲೆಲ್ಲಿ ಇಂತಹ ಪ್ರಕರಣಗಳು ನಡೆದಿವೆ? ಎಂಬ ಮಾಹಿತಿಯನ್ನು ಸರ್ಕಾರ ಬಹಿರಂಗಪಡಿಸಬೇಕು. ಸರ್ಕಾರಿ ಅಧಿಕಾರಿಗಳು, ನೌಕರರಿಗೆ ಯಾರಾದರೂ ಬೆದರಿಕೆ ಹಾಕಿದರೆ, ತೊಂದರೆ ನೀಡಿದರೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಆ ಕಾನೂನುಗಳನ್ನು ಸರಿಯಾಗಿ ಬಳಸಬೇಕು’ ಎಂದು ಆಗ್ರಹಿಸಿದ್ದಾರೆ.

ಇಂತಹ ನಿರ್ಧಾರದಿಂದ ಭ್ರಷ್ಟ ಅಧಿಕಾರಿಗಳು, ನೌಕರರಿಗೆ ಸಂತೋಷ ಆಗಬಹುದು. ಪ್ರಾಮಾಣಿಕರಿಗೆ ಅಲ್ಲ. ಪ್ರಾಮಾಣಿಕ ಅಧಿಕಾರಿಗಳಿಗೆ ತೊಂದರೆಯಾದಾಗ ಸಾರ್ವಜನಿಕರ ಮೊಬೈಲ್‌ಗಳೇ ಅವರ ರಕ್ಷಣೆಗೆ ಬಂದಿರುವುದು. ಸರ್ಕಾರಿ ಕಚೇರಿಗಳನ್ನು ಸಂಪೂರ್ಣವಾಗಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲಿಗೆ ತರಬೇಕು. ಅಲ್ಲಿನ ದೃಶ್ಯಾವಳಿಗಳನ್ನು ವೆಬ್‌ಕಾಸ್ಟಿಂಗ್ ಮೂಲಕ ಸಾರ್ವಜನಿಕರ ವೀಕ್ಷಣೆಗೆ ಒದಗಿಸಬೇಕು. ಅಲ್ಲಿಯವರೆಗೂ ಇಂತಹ ನಿರ್ಬಂಧಗಳನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

‘ಆದೇಶ ಹಿಂಪಡೆಯದಿದ್ದರೆ ಕಾನೂನು ಹೋರಾಟ’



ದೀಪಕ್ ಸಿ.ಎನ್.

ಬೆಂಗಳೂರು: ‘ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುವುದಕ್ಕಾಗಿಯೇ ಸಾರ್ವಜನಿಕರು ಫೋಟೊ ತೆಗೆಯುವುದು ಮತ್ತು ವಿಡಿಯೊ ಚಿತ್ರೀಕರಿಸುವುದನ್ನು ನಿಷೇಧಿಸಲಾಗಿದೆ. ಈ ಆದೇಶ ಹಿಂಪಡೆಯದಿದ್ದರೆ ಕಾನೂನು ಹೋರಾಟ ಆರಂಭಿಸಲಾಗುವುದು’ ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ತಿಳಿಸಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶದ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್., ‘ನಮ್ಮ ಪಕ್ಷದ ಸದಸ್ಯರು ರಾಜ್ಯದ ಮೂಲೆ ಮೂಲೆಯಲ್ಲಿ ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರವನ್ನು ಬಯಲಿಗೆಳೆದು ವಿಡಿಯೊ ಚಿತ್ರೀಕರಿಸುತ್ತಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ನೇರಪ್ರಸಾರವನ್ನೂ ಮಾಡುತ್ತಿದ್ದರು. ಇದರಿಂದ ಬೆದರಿದ ಸರ್ಕಾರ ಈ ಆದೇಶ ಹೊರಡಿಸಿದೆ’ ಎಂದು ಹೇಳಿದ್ದಾರೆ.

ಕೆಆರ್‌ಎಸ್ ಪಕ್ಷದ ಕೆಲಸವನ್ನು ನೋಡಿ ಉತ್ತೇಜಿತರಾದ ಸಾರ್ವಜನಿಕರೂ ಭ್ರಷ್ಟಾಚಾರದ ವಿರುದ್ಧ ಅದೇ ರೀತಿಯ ಹೋರಾಟ ಆರಂಭಿಸಿದ್ದರು. ಭ್ರಷ್ಟ ಅಧಿಕಾರಿಗಳನ್ನು ಪ್ರಶ್ನಿಸುವ ಕೆಲಸ ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಸರ್ಕಾರವೇ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವ ಕೆಲಸ ಮಾಡಬೇಕಿತ್ತು. ಆದರೆ, ಈ ಆದೇಶದ ಮೂಲಕ ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುವ ಕೆಲಸ ಮಾಡಿದೆ ಎಂದು ಟೀಕಿಸಿದ್ದಾರೆ.

‘ಪಕ್ಷವು ನಾಲ್ಕು ವರ್ಷಗಳ ಅವಧಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಬಾರಿ ಸರ್ಕಾರಿ ಕಚೇರಿಗಳಲ್ಲಿ ವಿಡಿಯೊ ಚಿತ್ರೀಕರಣ ಮತ್ತು ನೇರಪ್ರಸಾರ ಮಾಡಿದೆ. ಎಲ್ಲಿಯೂ ಅಧಿಕಾರಿಗಳಿಗೆ ತೊಂದರೆ ನೀಡಿಲ್ಲ. ಸರ್ಕಾರದ ಆದೇಶಕ್ಕೆ ಭ್ರಷ್ಟಾಚಾರದಲ್ಲಿ ತೊಡಗಿರುವ ರಾಜಕಾರಣಿಗಳು ಮತ್ತು ಅಧಿಕಾರಿಗಳ ಬೆಂಬಲ ಮಾತ್ರ ಇದೆ. ರಾಜ್ಯದ ಬಹುಸಂಖ್ಯಾತ ಜನರು ಈ ಆದೇಶದ ವಿರುದ್ಧ ಇದ್ದಾರೆ’ ಎಂದಿದ್ದಾರೆ.

ಸರ್ಕಾರಿ ಕಚೇರಿ: ಕ್ಯಾಮೆರಾ ನಿಷೇಧ

ಒಂದನೇ ಪುಟದಿಂದ

‘ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರು ರಾಜ್ಯದಾದ್ಯಂತ ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ ಬಯಲಿಗೆ ಎಳೆಯುತ್ತಿದ್ದರು. ನಮ್ಮ ಪಕ್ಷದ ಹೋರಾಟಕ್ಕೆ ಹೆದರಿರುವ ಸರ್ಕಾರ, ಕಚೇರಿಗಳಲ್ಲಿ ಫೋಟೊ ಮತ್ತು ವಿಡಿಯೋ ಚಿತ್ರೀಕರಣ ನಿಷೇಧಿಸಿದೆ’ ಎಂದು ಕೆಆರ್‌ಎಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್. ಹೇಳಿದ್ದಾರೆ.

ನೌಕರರ ಸಂಘದ ಮನವಿ: ‘ಸಾರ್ವಜನಿಕರು ಸರ್ಕಾರಿ ಕಚೇರಿಗಳ ವೇಳೆಯಲ್ಲಿ ಕಚೇರಿ ಪ್ರವೇಶಿಸಿ, ಅನಧಿಕೃತವಾಗಿ ಫೋಟೋ ತೆಗೆಯುವುದು, ವಿಡಿಯೊ ಚಿತ್ರೀಕರಣ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುತ್ತಿದ್ದಾರೆ. ಇಂತಹ ಘಟನೆಗಳಿಂದ ಆಯಾ ಇಲಾಖೆಗಳು ಮತ್ತು ಸರ್ಕಾರದ ಘನತೆಗೆ ಕುಂದುಂಟಾಗುತ್ತಿದೆ. ಮಹಿಳಾ ನೌಕರರಿಗೆ ಸಮಸ್ಯೆಯಾಗುತ್ತಿದೆ. ಆದ್ದರಿಂದ ಸರ್ಕಾರಿ ಕಚೇರಿಗಳಲ್ಲಿ ಅನಧಿಕೃತವಾಗಿ ಫೋಟೊ ತೆಗೆಯುವುದು ಮತ್ತು ವಿಡಿಯೊ ಚಿತ್ರೀಕರಿಸುವುದನ್ನು ನಿಷೇಧಿಸಬೇಕು’ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಇದೇ ಫೆಬ್ರುವರಿ 25ರಂದು ಮನವಿ ಸಲ್ಲಿಸಿದ್ದರು.

‘ನೌಕರರ ಸಂಘದ ಅಧ್ಯಕ್ಷರ ಮನವಿಯನ್ನು ಪರಿಶೀಲಿಸಿದ್ದು, ಸರ್ಕಾರಿ ಕಚೇರಿಗಳಲ್ಲಿ ಕೆಲಸದ ವೇಳೆಯಲ್ಲಿ ಅನಧಿಕೃತವಾಗಿ ಫೋಟೋ ತೆಗೆಯುವುದು ಮತ್ತು ವಿಡಿಯೊ ಚಿತ್ರೀಕರಿಸುವುದನ್ನು ನಿರ್ಬಂಧಿಸುವುದು ಅಗತ್ಯ ಎಂಬ ಅಭಿಪ್ರಾಯಕ್ಕೆ ಸರ್ಕಾರ ಬಂದಿದೆ’ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶದಲ್ಲಿ ತಿಳಿಸಿದೆ.

‘ಹೆದರಿಕೆ ಏಕೆ?’

ಬೆಂಗಳೂರು: ‘ಸರ್ಕಾರದಲ್ಲಿರುವವರು ಸರಿಯಾಗಿದ್ದರೆ ಫೋಟೋ, ವಿಡಿಯೊಗೆ ಏಕೆ ಹೆದರಬೇಕು? ಸರ್ಕಾರಿ ಕಚೇರಿಯಲ್ಲಿ ಫೋಟೋ, ವಿಡಿಯೊ ಚಿತ್ರೀಕರಣ ನಿಷೇಧಿಸಿದರೆ ಶೇಕಡ 40ರಷ್ಟು ಲಂಚದ ಆರೋಪ ನಿಜವೆಂದಾಗುತ್ತದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕ ಬಂಡೆಪ್ಪ ಕಾಶೆಂಪುರ ಹೇಳಿದರು.

‘ಸರ್ಕಾರ ಪಾರದರ್ಶಕವಾಗಿ ನಡೆದುಕೊಳ್ಳುತ್ತಿದ್ದರೆ ಹೆದರುವುದೇಕೆ? ಈ ಆದೇಶವನ್ನು ಕೂಡಲೇ ರದ್ದು ಮಾಡಬೇಕು’ ಎಂದು ಆಗ್ರಹಿಸಿದರು.

‘ಎಚ್.ಡಿ. ಕುಮಾರಸ್ವಾಮಿ ಅವರಿಗೆ ಕೋವಿಡ್ ಸೋಂಕು ದೃಢಪಟ್ಟಿರುವ ಕಾರಣದಿಂದ ಭಾನುವಾರದಿಂದ ಆರಂಭವಾಗಬೇಕಿದ್ದ ಜನತಾ ಮಿತ್ರ ಸಮಾವೇಶವನ್ನು ಹತ್ತು ದಿನಗಳ ಕಾಲ ಮುಂದೂಡಲಾಗಿದೆ’ ಎಂದರು.

ಪೊಲೀಸ್ ಆ್ಯಪ್‌ಗೆ ಬಂದ ಸಂದೇಶ

ಭೋವಿ ಗುರುಪೀಠದ ಶ್ರೀ, ಶಾಸಕರ ಹತ್ಯೆಗೆ ಸಂಚು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿನ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಶಾಸಕರಾದ ಅರವಿಂದ ಲಿಂಬಾವಳಿ, ಗೂಳಿಹಟ್ಟಿ ಡಿ. ಶೇಖರ್ ಹಾಗೂ ಎಂ. ಚಂದ್ರಪ್ಪ ಸೇರಿ ಹಲವರ ಹತ್ಯೆಗೆ ಸಂಚು ರೂಪಿಸಲಾಗಿದೆ ಎಂಬ ಅರ್ಥದ ಸಂದೇಶವೊಂದು ಪೊಲೀಸರಿಗೆ ಬಂದಿದ್ದು, ಹೊಳಲ್ಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) ಆ್ಯಪ್ ಮೂಲಕ ಚಿತ್ರದುರ್ಗ ಪೊಲೀಸರಿಗೆ ಸಂದೇಶ ಬಂದಿದೆ. ಭೋವಿ ಸಮುದಾಯಕ್ಕೆ ಸೇರಿದ ಹಲವು ಮುಖಂಡರು ಹಾಗೂ ಅವರ ಕುಟುಂಬ ಅಪಾಯದಲ್ಲಿದೆ ಎಂದು ಸಂದೇಶದಲ್ಲಿ ಎಚ್ಚರಿಕೆ ನೀಡಲಾಗಿದೆ.

‘ಅನ್ಯ ಜಾತಿಗೆ ಸೇರಿದ ಕೆಲವರು ಭೋವಿ ವಡ್ಡರ ಸಂಘದ ಹೆಸರಿನಲ್ಲಿ ಸಮುದಾಯದ ನಾಯಕರ ಬಗ್ಗೆ ಅಪಪ್ರಚಾರ ನಡೆಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಬೆಂಬಲಿಸದಂತೆ ತಪ್ಪು ಸಂದೇಶ ರವಾನಿಸುತ್ತಿದ್ದಾರೆ. ಸ್ವಾಮೀಜಿ ಹಾಗೂ ಇನ್ನೂ ಕೆಲವರ ಹತ್ಯೆಗೆ ಸಂಚು ರೂಪಿಸಿದ್ದಾರೆ’ ಎಂದು ಸಂದೇಶದಲ್ಲಿ ಉಲ್ಲೇಖಿಸಲಾಗಿದೆ.

ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರಿಗೆ ಭದ್ರತೆ ನೀಡುವಂತೆ ಭೋವಿ ಗುರುಪೀಠವು ಪೊಲೀಸರನ್ನು ಕೋರಿದೆ. ಮಠದ ಆಸ್ತಿ ಹಾಗೂ ಸ್ವಾಮೀಜಿಗೆ ದುಷ್ಕರ್ಮಿಗಳಿಂದ ಅಪಾಯ ಎದುರಾಗುವ ಸಾಧ್ಯತೆ ಇದೆ. ಸೂಕ್ತ ರಕ್ಷಣೆ ನೀಡುವಂತೆ ಮಠದ ಸಿಇಒ ಗೌನಹಳ್ಳಿ ಗೋವಿಂದಪ್ಪ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಲಂಬಾಣಿ ಅಕಾಡೆಮಿಗೆ ಡಾ.ಹರಿಲಾಲ್ ಅಧ್ಯಕ್ಷ

ಬೆಂಗಳೂರು: ಲಂಬಾಣಿ ಸಂಸ್ಕೃತಿ ಭಾಷಾ ಅಕಾಡೆಮಿಯ ನೂತನ ಅಧ್ಯಕ್ಷರನ್ನಾಗಿ ಧಾರವಾಡದ ಹಳಿಯಾಳ ಕ್ರಾಸ್ ನಿವಾಸಿ ಡಾ. ಹರಿಲಾಲ್ ಖೀರು ಪವಾರ ಅವರನ್ನು ನೇಮಕ ಮಾಡಿ ಶುಕ್ರವಾರ ಆದೇಶ ಹೊರಡಿಸಲಾಗಿದೆ.



ಡಾ. ಹರಿಲಾಲ್ ಖೀರು ಪವಾರ

ಅಕಾಡೆಮಿಯ ಸದಸ್ಯರನ್ನಾಗಿ ಬೆಂಗಳೂರಿನ ಗಿರಿನಗರ ನಿವಾಸಿ ರಾಜಕುಮಾರ್ ಹನುಮಂತಪ್ಪ, ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಆನೇಕಲ್ಲು ತಾಂಡಾದ ಡಾ. ಕಾಳಮ್ಮ, ಕಲಬುರ್ಗಿ ನಿವಾಸಿ ಪ್ರೊ. ಕೃಷ್ಣಾ ನಾಯ್ಕ್, ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಕಮಲಾಪುರ ನಿವಾಸಿ ಡಾ.ಎಂ. ಸೋಮಕ್ಕ, ಬೆಂಗಳೂರಿನ ಕೋರಮಂಗಲ ನಿವಾಸಿ ಜಿ. ಗುರುನಾಥ, ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ಲಕ್ಷರ ಬಜಾರ ನಿವಾಸಿ ಡಾ. ಬಸವರಾಜು ಎಸ್.ಜಿ., ಬಾಗಲಕೋಟೆ ಜಿಲ್ಲೆಯ ಅಮೀನಗಢದ ಶ್ರೀಕಾಂತ್ ಜಾಧವ, ವಿಜಯಪುರದ ಇಂದುಮತಿ ಎಸ್. ಲಮಾಣಿ, ಧಾರವಾಡದ ಡಾ.ವಿ. ಎಸ್. ಪಾಟೀಲ ಮತ್ತು ಬೆಳಗಾವಿ ಜಿಲ್ಲೆಯ ರಾಮದುರ್ಗ ನಿವಾಸಿ ಡಾ. ಪುಂಡಲೀಕ ಖುಬಾಸಿಂಗ್ ರಾಠೋಡ ಅವರನ್ನು ನೇಮಕ ಮಾಡಲಾಗಿದೆ.

‘ಆಯೋಗ ರಚಿಸಿ ವೇತನ ನೀಡಿ’

ದಾವಣಗೆರೆ: ‘ಸರ್ಕಾರಿ ನೌಕರರಿಗೆ ವೇತನ ಆಯೋಗ ಶಿಫಾರಸು ಮಾಡಿದಂತೆ ವೇತನ ನೀಡುವ ಮಾದರಿಯಲ್ಲೇ ನಮಗೂ ಸಮಾನ ವೇತನ ನೀಡಬೇಕು. ಮುಷ್ಕರ ನಡೆಸಿದಾಗ ವಜಾ ಮಾಡಿರುವ ನಾಲ್ಕು ನಿಗಮಗಳ 2,500 ನೌಕರರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕು’ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ರಾಜ್ಯಾಧ್ಯಕ್ಷ ಚಂದ್ರಶೇಖರ್ ಆರ್. ಒತ್ತಾಯಿಸಿದರು.

ಇಲ್ಲಿನ ತ್ರಿಶೂಲ್ ಕಲಾಭವನದಲ್ಲಿ ಶುಕ್ರವಾರ ನಡೆದ ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಸಮ್ಮೇಳನದಲ್ಲಿ ಅವರು ಮಾತನಾಡಿದರು.

‘ನಾಲ್ಕು ನಿಗಮಗಳಲ್ಲಿ 1.25 ಲಕ್ಷ ನೌಕರರು ಕೆಲಸ ಮಾಡುತ್ತಿದ್ದಾರೆ. 2020ರಲ್ಲಿ ಮುಷ್ಕರ ನಡೆಸಿದಾಗ ಬೇಡಿಕೆ ಈಡೇರಿಸುವ ಭರವಸೆ ನೀಡಿತ್ತು. ಆದರೂ ಈಡೇರಿಸಿಲ್ಲ. ಇತರೆ ನಿಗಮ ಮಂಡಳಿಗೆ ಹೋಲಿಸಿದರೆ ಶೇ 40ಕ್ಕಿಂತ ಕಡಿಮೆ ವೇತನಕ್ಕೆ ದುಡಿಯುತ್ತಿದ್ದೇವೆ.’ ನಿವೃತ್ತಿ ನಂತರ ಕೇವಲ ₹1,200, ₹2,500 ಪಿಂಚಣಿ ನೀಡಲಾಗುತ್ತಿದೆ. ಇದರಿಂದ ಬದುಕುವುದು ಹೇಗೆ? ಈ ಸಂಬಂಧ ಸರ್ಕಾರ ಶಾಶ್ವತ ಪರಿಹಾರ ನೀಡಲೇಬೇಕು’ ಎಂದು ಅವರು ಆಗ್ರಹಿಸಿದರು.

₹3,850 ಕೋಟಿಯಲ್ಲಿ ಬಿಜೆಪಿ ಶಾಸಕರಿಗೆ ₹2,718 ಕೋಟಿ

ಅಮೃತ ನಗರೋತ್ಥಾನ ಯೋಜನೆ ಅನುದಾನದಲ್ಲೂ ಪಕ್ಷ ತಾರತಮ್ಯ

• ಆರ್. ಮಂಜುನಾಥ್

ಬೆಂಗಳೂರು: ಚುನಾವಣೆಗೆ 9 ತಿಂಗಳು ಬಾಕಿ ಇರುವ ಹೊತ್ತಿನೊಳಗೆ ರಾಜಧಾನಿಯಲ್ಲಿ ಕಣ್ಣಿಗೆ ಕಾಣುವಂತೆ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕೆಂಬ ಉದ್ದೇಶದಿಂದ ಅಮೃತ ನಗರೋತ್ಥಾನ ಯೋಜನೆಯಡಿ ನೀಡಿರುವ ಅನುದಾನದಲ್ಲಿ ಪಕ್ಷ ತಾರತಮ್ಯ ಮಾಡಲಾಗಿದೆ ಎಂಬ ಆರೋಪ ವ್ಯಕ್ತವಾಗಿದೆ.

ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ₹6 ಸಾವಿರ ಕೋಟಿಗೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ವಿಧಾನಸಭೆ ಕ್ಷೇತ್ರವಾರು 28 ಶಾಸಕರಿಗೆ ಒಟ್ಟು ₹3,850 ಕೋಟಿ ಹಣ ಬಿಡುಗಡೆ ಮಾಡಲಾಗಿದೆ. ಈ ಪೈಕಿ ಬಿಜೆಪಿ ಶಾಸಕರಿಗೆ ಅತಿ ಹೆಚ್ಚು ಅನುದಾನ ಸಿಕ್ಕಿದೆ.

ವಿಧಾನಸಭೆ ಕ್ಷೇತ್ರವಾರು ಅನುಮೋದನೆಯನ್ನು ಹಣದ ಪ್ರಮಾಣದಲ್ಲಿ ತೋರಿಸಲಾಗಿದೆ. ಅಂದರೆ, ಇಂತಹದ್ದೇ ಕಾಮಗಾರಿಗಳಿಗೆ ಈ ಹಣ ಎಂದು ನಿರ್ದಿಷ್ಟವಾಗಿ ತೋರಿಸಿಲ್ಲ. ಶಾಸಕರು ತಮಗೆ ಬೇಕಾದ ಕಾಮಗಾರಿಗಳಿಗೆ ಈ ಹಣವನ್ನು ವೆಚ್ಚ ಮಾಡಬಹುದು. 'ಕಾಮಗಾರಿಗಳನ್ನು ಒಂದು ತಿಂಗಳಲ್ಲಿ ಆರಂಭಿಸಲು ಕ್ರಮ ಕೈಗೊಳ್ಳಬೇಕು' ಎಂಬ ಷರತ್ತು ವಿಧಿಸಿ ನಗರಾಭಿವೃದ್ಧಿ ಇಲಾಖೆ ಜೂನ್ 18ರಂದು ಆದೇಶ ಹೊರಡಿಸಿದೆ.

'ನಗರದ ಅಭಿವೃದ್ಧಿ ಎಂದರೆ ಬಿಬಿಎಂಪಿ ವ್ಯಾಪ್ತಿಯ ಎಲ್ಲ ವಾರ್ಡ್ ಹಾಗೂ ವಿಧಾನಸಭೆ ಕ್ಷೇತ್ರಗಳಲ್ಲೂ ಆಗಬೇಕು. ಕೆಲವು ಭಾಗಗಳಲ್ಲಿ ಕಡಿಮೆ, ಕೆಲವು ಕಡೆಗಳಲ್ಲಿ ಹೆಚ್ಚು ಎನ್ನುವುದು ಸರಿಯಲ್ಲ. ಅದರಲ್ಲೂ ಬಿಜೆಪಿ ಶಾಸಕರಿರುವ ಕ್ಷೇತ್ರಕ್ಕೇ ಅತಿ ಹೆಚ್ಚು ಹಣ ನೀಡಿರುವುದು ತಾರತಮ್ಯವೇ ಹೌದು. ಅವರಿಗೇ ಎಲ್ಲ ಕೊಟ್ಟು, ಅಳಿದು-ಉಳಿದದ್ದನ್ನು ನಮಗೆ ನೀಡುತ್ತಿರುವುದು ಯಾವ ಕಲ್ಯಾಣ ಕಾರ್ಯ' ಎಂದು ಕಾಂಗ್ರೆಸ್ ಶಾಸಕರು ಪ್ರಶ್ನಿಸುತ್ತಿದ್ದಾರೆ.

ಅಮೃತ ನಗರೋತ್ಥಾನ ಯೋಜನೆಯ ಒಟ್ಟು ಅನುದಾನದಲ್ಲಿ ಶೇ 64ರಷ್ಟು ಹಣವನ್ನು ವಿಧಾನಸಭೆ ಕ್ಷೇತ್ರಗಳಿಗೆ ಎಂಬ ಷರಾದಲ್ಲೇ ಬಿಡುಗಡೆ ಮಾಡಲಾಗಿದೆ. ₹3,850 ಕೋಟಿಯಲ್ಲಿ ಬಿಜೆಪಿಯ 15 ಶಾಸಕರಿಗೆ ಶೇ 70ರಷ್ಟು ಅಂದರೆ ₹2,718 ಕೋಟಿ ಹಂಚಲಾಗಿದೆ.

ನಗರದ ಅಭಿವೃದ್ಧಿ ಆಗಬೇಕು ಎಂದು ನೀಡಲಾಗುವ ಹಣದಲ್ಲಿ ತಾರತಮ್ಯ ಸಲ್ಲ. ಅಭಿವೃದ್ಧಿ ಎಂದರೆ ಎಲ್ಲೆಡೆ ಆಗಬೇಕು ಅಲ್ಲವೇ? ಇದನ್ನು ಅರಿಯದಿರುವುದು ದುರಂತ

ಆರ್. ಅಖಂಡ ಶ್ರೀನಿವಾಸಮೂರ್ತಿ, ಕಾಂಗ್ರೆಸ್ ಶಾಸಕ, ಪುಲಿಕೇಶಿ ನಗರ

ಬಿಬಿಎಂಪಿ ವ್ಯಾಪ್ತಿಯಲ್ಲಿ ಮಹಿಳಾ ಪ್ರತಿನಿಧಿಯಾಗಿರುವುದು ನಾನು ಒಬ್ಬಳೇ. ನನಗೆ ಅತಿ ಕಡಿಮೆ ಅನುದಾನ ಬಿಡುಗಡೆ ಮಾಡಿರುವುದು ಮಹಿಳೆಯರಿಗೆ ಮಾಡಿದ ಅನ್ಯಾಯ.


ಸೌಮ್ಯ ರೆಡ್ಡಿ, ಕಾಂಗ್ರೆಸ್ ಶಾಸಕಿ, ಜಯನಗರ

ಬೇಡವಾದ ಕಾಮಗಾರಿಗಳು!

ಬಿಬಿಎಂಪಿಯಲ್ಲಿ ಸದಸ್ಯರು ಯಾರೂ ಇಲ್ಲದ ಸಮಯದಲ್ಲಿ ವಾರ್ಡ್ ಕಾಮಗಾರಿ ಸೇರಿದಂತೆ ಎಲ್ಲ ರೀತಿಯ ಕೆಲಸಗಳನ್ನು ಮಾಡಲಾಗುತ್ತಿದೆ. ಕಾರ್ಪೊರೇಟರ್‌ಗಳು ಬರುವ ಮುನ್ನವೇ ತಾವೇ ಮುಗಿಸಿಬಿಡಬೇಕೆಂಬ ಆತುರದಲ್ಲಿ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗುತ್ತಿದೆ. ಇದರಲ್ಲಿ ಸಾಕಷ್ಟು ಬೇಡವಾದ ಕಾಮಗಾರಿಗಳೇ ಇವೆ ಎಂದು ಹೆಸರು ಬಹಿರಂಗಪಡಿಲು ಇಚ್ಛಿಸದ ಪಾಲಿಕೆಯ ಮಾಜಿ ಸದಸ್ಯರಿಬ್ಬರು ಆಕ್ರೋಶ ವ್ಯಕ್ತಪಡಿಸಿದರು.

ಮಹದೇವಪುರದ ಅರವಿಂದ ಲಿಂಬಾವಳಿ, ರಾಜರಾಜೇಶ್ವರಿನಗರದ ಮುನಿರತ್ನ (ತಲಾ ₹208 ಕೋಟಿ) ಅಗ್ರ ಸ್ಥಾನದಲ್ಲಿದ್ದಾರೆ. ಬಸವನಗುಡಿಯ ರವಿ ಸುಬ್ರಹ್ಮಣ್ಯ ಬಿಜೆಪಿ ಶಾಸಕರ ಹಣ (₹175 ಕೋಟಿ) ಹಂಚಿಕೆ ಪಟ್ಟಿಯಲ್ಲಿ ಕೊನೆಯಲ್ಲಿದ್ದಾರೆ.

ಜೆಡಿಎಸ್ ಶಾಸಕ ಆರ್. ಮಂಜುನಾಥ್ ಪ್ರತಿನಿಧಿಸುವ ದಾಸರಹಳ್ಳಿ ಕ್ಷೇತ್ರಕ್ಕೆ ₹110 ಕೋಟಿ ನೀಡಲಾಗಿದೆ. ಉಳಿದ ಹಣವನ್ನು ಕಾಂಗ್ರೆಸ್‌ನ 12 ಶಾಸಕರಿಗೆ ಹಂಚಲಾಗಿದ್ದು, ಹೆಬ್ಬಾಳ ಕ್ಷೇತ್ರಕ್ಕೆ ₹90 ಕೋಟಿ ಅನುಮೋದನೆಯಾಗಿರುವುದೇ ಗರಿಷ್ಠ. ಜಯನಗರ, ವಿಜಯನಗರ ಕ್ಷೇತ್ರಗಳಿಗೆ ತಲಾ ₹60 ಕೋಟಿ ದೊರೆತಿದೆಯಷ್ಟೆ. ಆನೇಕಲ್ ಕ್ಷೇತ್ರ ಭಾಗಶಃ ಬಿಬಿಎಂಪಿ ವ್ಯಾಪ್ತಿಯಲ್ಲಿದೆ. ಹೀಗಾಗಿ ಆ ಕ್ಷೇತ್ರಕ್ಕೆ ₹8 ಕೋಟಿ ಬಿಡುಗಡೆಯಾಗಿದೆ.



ವಿಧಾನಸಭೆ ಕ್ಷೇತ್ರ	ಶಾಸಕ	ಅನುದಾನ ₹ ಕೋಟಿಗಳಲ್ಲಿ
ಬಿಜೆಪಿ		
ಮಹದೇವಪುರ	ಅರವಿಂದ ಲಿಂಬಾವಳಿ	208
ರಾಜರಾಜೇಶ್ವರಿನಗರ	ಮುನಿರತ್ನ	208
ಕೆ.ಆರ್.ಪುರ	ಬಿ.ಎ. ಬಸವರಾಜ್	207
ಬೊಮ್ಮನಹಳ್ಳಿ	ಎಂ. ಸತೀಶ್ ರೆಡ್ಡಿ	207
ಬೆಂಗಳೂರು ದಕ್ಷಿಣ	ಎಂ. ಕೃಷ್ಣಪ್ಪ	206
ಯಶವಂತಪುರ	ಎಸ್.ಟಿ. ಸೋಮಶೇಖರ್	202
ಗೋವಿಂದರಾಜನಗರ	ವಿ. ಸೋಮಣ್ಣ	200
ಪದ್ಮನಾಭನಗರ	ಆರ್. ಅಶೋಕ	200
ಯಲಹಂಕ	ಎಸ್.ಆರ್. ವಿಶ್ವನಾಥ್	175
ಮಹಾಲಕ್ಷ್ಮಿ ಬಡಾವಣೆ	ಕೆ. ಗೋಪಾಲಯ್ಯ	170
ಮಲ್ಲೇಶ್ವರ	ಡಾ. ಸಿ.ಎನ್. ಅಶ್ವತ್ಥನಾರಾಯಣ	170
ರಾಜಾಜಿನಗರ	ಎಸ್. ಸುರೇಶ್‌ಕುಮಾರ್	150
ಸಿ.ವಿ. ರಾಮನ್‌ನಗರ	ಎಸ್. ರಘು	150
ಚಿಕ್ಕಪೇಟೆ	ಉದಯ್ ಬಿ. ಗರುಡಾಚಾರ್	140
ಬಸವನಗುಡಿ	ಎಲ್.ಎ. ರವಿ ಸುಬ್ರಹ್ಮಣ್ಯ	125
ಕಾಂಗ್ರೆಸ್		
ಹೆಬ್ಬಾಳ	ಬಿ.ಎಸ್. ಸುರೇಶ್	90
ಬಿ.ಟಿ.ಎಂ. ಲೇಔಟ್	ರಾಮಲಿಂಗಾ ರೆಡ್ಡಿ	80
ಚಾಮರಾಜಪೇಟೆ	ಜಮೀರ್ ಅಹ್ಮದ್‌ಖಾನ್	80
ಗಾಂಧಿನಗರ	ದಿನೇಶ್ ಗುಂಡೂರಾವ್	80
ಸರ್ವಜ್ಞನಗರ	ಕೆ.ಜೆ. ಜಾರ್ಜ್	80
ಶಿವಾಜಿನಗರ	ರಿಜ್ವಾನ್ ಅರ್ಷದ್	80
ಬ್ಯಾಟರಾಯನಪುರ	ಕೃಷ್ಣಬೈರೇಗೌಡ	75
ಪುಲಿಕೇಶಿನಗರ	ಆರ್. ಅಖಂಡ ಶ್ರೀನಿವಾಸಮೂರ್ತಿ	70
ಶಾಂತಿನಗರ	ಎನ್.ಎ. ಹ್ಯಾರಿಸ್	70
ಜಯನಗರ	ಸೌಮ್ಯ ರೆಡ್ಡಿ	60
ವಿಜಯನಗರ	ಎಂ. ಕೃಷ್ಣಪ್ಪ	60
ಆನೇಕಲ್	ಬಿ. ಶಿವಣ್ಣ	8
ಜೆಡಿಎಸ್		
ದಾಸರಹಳ್ಳಿ	ಆರ್. ಮಂಜುನಾಥ	110

8 ಜಿಲ್ಲೆಗಳಲ್ಲಿ ವಿದ್ಯುತ್ ಅದಾಲತ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸಂಬಂಧಿತ ಸಮಸ್ಯೆ ಪರಿಹಾರಕ್ಕೆ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಯ 89 ಹಳ್ಳಿಗಳಲ್ಲಿ ಶನಿವಾರ ವಿದ್ಯುತ್ ಅದಾಲತ್ ನಡೆಯಲಿದೆ.

ಬೆಸ್ಕಾಂನ ಹಿರಿಯ ಅಧಿಕಾರಿಗಳು ಅದಾಲತ್‌ನಲ್ಲಿ ಭಾಗವಹಿಸಿ, ಕುಂದುಕೊರತೆ ಆಲಿಸಿ ಸ್ಥಳದಲ್ಲೇ ಪರಿಹಾರಕ್ಕೆ ಕ್ರಮ ಕೈಗೊಳ್ಳಲಿದ್ದಾರೆ ಎಂದು ಬೆಸ್ಕಾಂ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲೆಯ ನಾಲ್ಕು ತಾಲ್ಲೂಕಿನ 13 ಹಳ್ಳಿ, ಬೆಂಗಳೂರು ಗ್ರಾಮಾಂತರದ ನಾಲ್ಕು ತಾಲ್ಲೂಕುಗಳ ಏಳು ಹಳ್ಳಿಗಳಲ್ಲಿ ಅದಾಲತ್ ನಡೆಯಲಿದೆ.

ಜೂನ್ 18ರಂದು ನಡೆದಿದ್ದ ವಿದ್ಯುತ್ ಅದಾಲತ್‌ಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಒಟ್ಟು 1,142 ಮನವಿ ಸ್ವೀಕೃತಗೊಂಡಿದ್ದವು. 321 ಮನವಿಗಳಿಗೆ ಬೆಸ್ಕಾಂ ಅಧಿಕಾರಿಗಳು ಸ್ಥಳದಲ್ಲೇ ಪರಿಹಾರ ಒದಗಿಸಿದ್ದರು. ಉಳಿದ 821 ಮನವಿ ಮುಂದಿನ ಕ್ರಮಕ್ಕಾಗಿ ಮೇಲಧಿಕಾರಿಗಳಿಗೆ ರವಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಹದೇವಪುರ ವಲಯದಲ್ಲಿ ರಸ್ತೆ ಕಾಮಗಾರಿಗೆ ಆದೇಶ

ಟಿಡಿಆರ್ ಸಮಸ್ಯೆ ಪರಿಹಾರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಟಿಡಿಆರ್ ಸಮಸ್ಯೆಯಿಂದ ಹಲವಾರು ರಸ್ತೆಗಳು ಅಭಿವೃದ್ಧಿಯಾಗದೆ ಹಾಗೆಯೇ ಉಳಿದಿದ್ದು, ಅವನ್ನು ಕೂಡಲೇ ಸರಿಪಡಿಸಲು ಕ್ರಮ ಕೈಗೊಳ್ಳಿ' ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಟಿಡಿಆರ್ ಸಂಬಂಧ ಯಾವ್ಯಾವ ಕಾಮಗಾರಿಗಳು ಹಾಗೆಯೇ ಉಳಿದಿವೆಯೋ ಅವುಗಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲು ಮತ್ತು ಕಾಮಗಾರಿಗಳನ್ನು ಪೂರ್ಣಗೊಳಿಸಲು ವಲಯ ಜಂಟಿ ಆಯುಕ್ತರಿಗೆ ಸೂಚಿಸಿದರು. ಪುಣತ್ತೂರು ಮುಖ್ಯ ರಸ್ತೆಯನ್ನು ವಿಸ್ತರಣೆಗಾಗಿ ಭೂಸ್ವಾಧೀನಪಡಿಸಿಕೊಳ್ಳುವ ಸಂಬಂಧ ತ್ವರಿತವಾಗಿ ಸಮಸ್ಯೆಯನ್ನು ಇತ್ಯರ್ಥಪಡಿಸಿಕೊಳ್ಳಬೇಕು. ನೀರು ನಿಲ್ಲುವ ಸ್ಥಳಗಳಲ್ಲಿ ನೀರು ನಿಲ್ಲದಂತೆ ಕ್ರಮ ಕೈಗೊಳ್ಳಬೇಕು. ಕೆರೆಗಳಿಗೆ ಸೇರುತ್ತಿರುವ ಒಳಚರಂಡಿ ನೀರನ್ನು ತಡೆಯಲು ಒಳಚರಂಡಿ ಅಧಿಕಾರಿಗಳಿಂದ ಪ್ರತ್ಯೇಕ ಕಾಲುವೆ ಮಾಡಿಸಲು ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿ ವಾರ ಒತ್ತುವರಿ ತೆರವು: 'ಅಪಾಯದ ಸ್ಥಿತಿಯಲ್ಲಿರುವ ಮರಗಳನ್ನು ತೆರವುಗೊಳಿಸಿ. ಗರುಡಾಚಾರ್ ಪಾಳ್ಯ ವಾರ್ಡ್ ಗೋಪಾಲನ್ ಶಾಲೆಯ ಬಳಿ ರಾಜಕಾಲುವೆ ಒತ್ತುವರಿ ತೆರವು ಮಾಡಿ. ರಾಜಕಾಲುವೆ, ಕೆರೆಗಳ ಬಫರ್ ಝೋನ್ ಒತ್ತುವರಿ ಮಾಡಿಕೊಂಡಿರುವ ಸ್ಥಳಗಳ ತೆರವು ಕಾರ್ಯಾಚರಣೆಯನ್ನು ಪ್ರತಿ ಶನಿವಾರ ನಡೆಸಿ' ಎಂದರು

'ರಾಮಮೂರ್ತಿನಗರ ಮುಖ್ಯ ರಸ್ತೆ ಬದಿ ಕಸ ಬಿಸಾಡುವುದನ್ನು ತಡೆಯಿರಿ. ರಸ್ತೆ ಬದಿ ಹೊಸದಾಗಿ 77 ಕಸದ ಕಿಯೋಸ್ಕ್‌ಗಳನ್ನು ಶೀಘ್ರ ಅಳವಡಿಸಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ವಲಯಆಯುಕ್ತ ಡಾ. ತ್ರಿಲೋಕ್ ಚಂದ್ರ,ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ವಲಯ ಉಪ ಆಯುಕ್ತೆ ಸರೋಜಾದೇವಿ, ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಉಪಸ್ಥಿತರಿದ್ದರು.

ಟಿಕೆಟ್ ಆಮಿಷ: ₹ 1.80 ಕೋಟಿ ವಂಚನೆ

ಬೆಂಗಳೂರು: ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ವಿಧಾನಸಭೆ, ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡುವ ಆಮಿಷವೊಡ್ಡಿ ಜನರಿಂದ ₹ 1.80 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವೀರೇಂದ್ರಬಾಬು, ರವಿತೇಜಸ್ ಹಾಗೂ ವಿಜಯ ನಿರಂಜನ ರಾವ್ ಬಂಧಿತರು. ಹಣ ಕಳೆದುಕೊಂಡಿದ್ದ ಬಸವರಾಜ್ ಗೋಸಲ ಎಂಬುವರು ನೀಡಿದ್ದ ದೂರಿನಡಿ ಎಫ್‌ಐಆರ್ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

ನಾನಾ ಆಮಿಷವೊಡ್ಡಿ ವಂಚನೆ: 'ಆರೋಪಿಗಳು ಆರ್ಯನ್ ಇನ್ಫೋಟೆಕ್ ಸಂಸ್ಥೆ, ವಿ-ಕೇರ್ ಆನ್‌ಲೈನ್ ಲರ್ನಿಂಗ್ ಆ್ಯಪ್, ಎಎನ್ಎನ್ ಚಾರಿಟೇಬಲ್ ಟ್ರಸ್ಟ್, ಕರ್ನಾಟಕ ರಕ್ಷಣಾ ಪಡೆ ಸಂಘಟನೆ ಕಟ್ಟಿಕೊಂಡಿದ್ದರು. ವಿನ್ಯೂಸ್-24 ಹೆಸರಿನಲ್ಲಿ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದರು. ಸಿನಿಮಾ ನಿರ್ಮಾಪಕರೂ ಆಗಿದ್ದರು' ಎನ್ನಲಾಗಿದೆ. 'ಕರ್ನಾಟಕ ರಕ್ಷಣಾ ಪಡೆ ಸಂಘಟನೆಯ ತಾಲ್ಲೂಕು ಘಟಕಗಳಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸೇರಿ ವಿವಿಧ ಹುದ್ದೆ ನೀಡುವುದಾಗಿ ಹೇಳಿ ಜನರಿಂದ ಹಣ ಸಂಗ್ರಹಿಸಿದ್ದರು. ಸರ್ಕಾರಿ ಶಾಲೆ ಮಕ್ಕಳಿಗೆ ಆನ್‌ಲೈನ್ ಮೂಲಕ ಉಚಿತ ಶಿಕ್ಷಣ ನೀಡುವುದಾಗಿ ಹೇಳಿ ಜನರಿಂದ ಲಕ್ಷಾಂತರ ರೂಪಾಯಿ ಪಡೆದಿದ್ದರು.'

'ರಾಷ್ಟ್ರೀಯ ಜನಹಿತ ಪಕ್ಷ ಸಹ ಸ್ಥಾಪಿಸಿದ್ದ ಆರೋಪಿಗಳು ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡುವುದಾಗಿ ಆಮಿಷವೊಡ್ಡಿದ್ದರು. ಇದನ್ನು ನಂಬಿ ಹಲವರು ಹಣ ನೀಡಿದ್ದರು. ಇದುವರೆಗೂ ₹ 1.80 ಕೋಟಿ ಸಂಗ್ರಹಿಸಿರುವುದಾಗಿ ದೂರುದಾರ ತಿಳಿಸಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಹೆಬ್ಬಾಳ ಮೇಲ್ಸೇತುವೆ: ಇನ್ನೊಂದು ವಾರದಲ್ಲಿ ಯೋಜನೆ ಸಿದ್ಧ

ಎರಡು ಲೇನ್ ನಿರ್ಮಾಣ ಶೀಘ್ರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನ ನಿಲ್ದಾಣದಿಂದ ನಗರದ ಕಡೆಗೆ ಮುಕ್ತವಾಗಿ ಸಂಚರಿಸಲು ಎರಡು ಲೇನ್ ಅನ್ನು ಹೆಬ್ಬಾಳ ಜಂಕ್ಷನ್‌ನಲ್ಲಿ ಶೀಘ್ರವಾಗಿ ನಿರ್ಮಿಸುವ ನಿಟ್ಟಿನಲ್ಲಿ ಯೋಜನೆ ರೂಪುಗೊಳ್ಳುತ್ತಿದೆ ಎಂದು ಬಿಡಿಎ ಆಯುಕ್ತ ಎಂ.ಬಿ. ರಾಜೇಶ್ ಗೌಡ ತಿಳಿಸಿದರು.

ಹೆಬ್ಬಾಳ ಮೇಲ್ಸೇತುವೆಯನ್ನು ವಿಸ್ತರಿಸಿ, ಮೂರು ಲೇನ್‌ಗಳನ್ನು ನಿರ್ಮಿಸುವ ಯೋಜನೆ ಇದೆ. ಇದರಲ್ಲಿ ಎರಡು ಲೇನ್ ಅನ್ನು ವಿಮಾನ ನಿಲ್ದಾಣದ ಕಡೆಯಿಂದ ಮೊದಲ ಹಂತದಲ್ಲಿ ನಿರ್ಮಿಸಲಾಗುತ್ತಿದೆ. ಇದಕ್ಕೆ ನಮ್ಮ ಎಂಜಿನಿಯರ್‌ಗಳು, ತಜ್ಞರು ಯೋಜನೆ ರೂಪಿಸುತ್ತಿದ್ದಾರೆ. ಇನ್ನೊಂದು ವಾರದಲ್ಲಿ ಯೋಜನೆ ಸಿದ್ಧಗೊಂಡು, ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ಪಡೆದು ಮುಂದುವರಿಯಲಾಗುತ್ತದೆ ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ತುಮಕೂರು ರಸ್ತೆಯಿಂದ ಕೆ.ಆರ್. ಪುರದ ಕಡೆಗೆ ಮುಕ್ತವಾಗಿ ಸಂಚರಿಸಲು ಅನುವಾಗುವಂತೆ ಗ್ರೇಡ್ ಸೆಪರೇಟರ್ ಅಥವಾ ಅಂಡರ್‌ಪಾಸ್ ನಿರ್ಮಿಸಲಾಗುತ್ತದೆ. ಇದಕ್ಕೆ ಭೂ ಸ್ವಾಧೀನದ ಅಗತ್ಯ ಇಲ್ಲ. ಮೇಲ್ಸೇತುವೆಯ ಕೆಳಭಾಗದಲ್ಲೇ ಮಾಡಬಹುದಾಗಿದೆ ಎಂದು ಹೇಳಿದರು.



ಹೆಬ್ಬಾಳ ಮೇಲ್ಸೇತುವೆ ಬಳಿ ವಿಮಾನ ನಿಲ್ದಾಣದಿಂದ ನಗರ ಕೇಂದ್ರ ಭಾಗದ ಕಡೆಗೆ ಬರುವಾಗ ಉಂಟಾಗುವ ವಾಹನ ದಟ್ಟಣೆ

'ಮೊದಲು ನಾವು ಯೋಜನೆ ಮಾಡಿದ್ದೆವು. ಅದು ಎರಡನೇ ಹಂತದ ಎತ್ತರಕ್ಕೆ ಹೋಗಬೇಕು ಎಂದಿತ್ತು. ಆದರೆ, ಬಿಎಂಆರ್‌ಸಿಎಲ್‌ನವರು ಅದಕ್ಕೆ ಸಮ್ಮತಿಸಲಿಲ್ಲ. ಹೀಗಾಗಿ ನಾವು ಯೋಜನೆಯನ್ನು ಬದಲಾಯಿಸಿ, ಹೊಸ ರೀತಿಯಲ್ಲಿ ಮಾಡುತ್ತಿದ್ದೇವೆ' ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ ತಿಳಿಸಿದರು.

'ವಿಮಾನ ನಿಲ್ದಾಣದಿಂದ ನಗರಕ್ಕೆ ಬರುವ ಕಡೆ ಸಾಕಷ್ಟು ದಟ್ಟಣೆ ಉಂಟಾಗುತ್ತಿದೆ. ಇದನ್ನು ಮೊದಲ ಹಂತದಲ್ಲೇ ಸುಗಮಗೊಳಿಸಲು ಎರಡು ಲೇನ್ ಹೆಚ್ಚುವರಿಯಾಗಿ ನಿರ್ಮಾಣ ಮಾಡಲಾಗುತ್ತದೆ. ಆಗ, ಈಗಿರುವ ಎರಡು ಲೇನ್ ಒಂದು ಕಡೆಗೆ ಮಾತ್ರ ಮುಕ್ತವಾಗುತ್ತವೆ. ನಂತರದ ಹಂತದಲ್ಲಿ ನಗರದ ಕಡೆಯಿಂದ ವಿಮಾನ ನಿಲ್ದಾಣದ ಕಡೆಗೆ ಮತ್ತೊಂದು ಲೇನ್ ನಿರ್ಮಾಣ ಮಾಡಿದರೆ ಭವಿಷ್ಯದಲ್ಲಿ ಇನ್ನಷ್ಟು ವಾಹನ ಸಂಚಾರ ಹೆಚ್ಚಾದರೂ ಸಮಸ್ಯೆಯಾಗುವುದಿಲ್ಲ' ಎಂದು ವಿವರ ನೀಡಿದರು.

ಕೆ.ಆರ್. ಪುರ ಹಾಗೂ ತುಮಕೂರು ಕಡೆಗೆ ಹೋಗುವ ಮಾರ್ಗಕ್ಕೆ ಲೇನ್‌ನಿಂದ ಮುಕ್ತ ಸಂಚಾರವಾದರೆ ದಟ್ಟಣೆ ಆಗುವುದಿಲ್ಲ. ಹೀಗಾಗಿ ಯಾವುದನ್ನು ಎಷ್ಟು ತಿರುವು ಮಾಡಿ, ಪುನರ್ ನಿರ್ಮಾಣ, ಜೋಡಣೆ ಕಾರ್ಯ ಮಾಡಬೇಕು ಎಂಬುದನ್ನು ತಜ್ಞರೊಂದಿಗೆ ಸಮಾಲೋಚಿಸಿ ಯೋಜನೆ ರೂಪಿಸಲಾಗುತ್ತದೆ ಎಂದರು.

ಹಳೇ ಗುಡ್ಡದಹಳ್ಳಿ ಪ್ರಕರಣ • ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖ

‘ಉರ್ದುವಿನಲ್ಲಿ ಮಾತು ಆಡದಿದ್ದುದಕ್ಕೆ ಚಂದ್ರು ಕೊಲೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೇ ಗುಡ್ಡದಹಳ್ಳಿಯಲ್ಲಿ ನಡೆದಿದ್ದ ವಿ. ಚಂದ್ರು (19) ಕೊಲೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಸಿಐಡಿ ಅಧಿಕಾರಿಗಳು, 179 ಪುಟಗಳ ದೋಷಾರೋಪ ಪಟ್ಟಿಯನ್ನು (ಚಾರ್ಜ್‌ಶೀಟ್) ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಏಪ್ರಿಲ್ 5ರ ನಸುಕಿನಲ್ಲಿ ನಡೆದಿದ್ದ ಕೃತ್ಯದ ತನಿಖೆ ಕೈಗೆತ್ತಿಕೊಂಡಿದ್ದ ಸಿಐಡಿ ಅಧಿಕಾರಿಗಳು, ಆರೋಪಿಗಳಾದ ಹಳೇ ಗುಡ್ಡದಹಳ್ಳಿಯ ಶಾಹೀದ್ ಪಾಷಾ, ಹೊಸಕೋಟೆಯ ಶಾಹೀದ್ ಅಲಿಯಾಸ್ ಗೂಳಿ, ಮೊಹಮ್ಮದ್ ಹಾಗೂ 17 ವರ್ಷದ ಬಾಲಕನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು. ಅವರೆಲ್ಲರ ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ, ಸಾಕ್ಷ್ಯಗಳ ವಿವರವನ್ನು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

ಪಟ್ಟಿಯಲ್ಲಿ ಏನಿದೆ?: ‘ಜೈಮಾರುತಿನಗರ ನಿವಾಸಿ ಚಂದ್ರು, ಐಟಿಐ ಮುಗಿಸಿ ರೈಲ್ವೆ ಇಲಾಖೆಯಲ್ಲಿ ತರಬೇತಿ ಪಡೆಯುತ್ತಿದ್ದರು. ಏಪ್ರಿಲ್ 4ರಂದು ಅವರ ಸ್ನೇಹಿತ ಸೈಮನ್ ರಾಜ್ ಹುಟ್ಟುಹಬ್ಬವಿತ್ತು. ಅಂದು ರಾತ್ರಿ ಇಬ್ಬರೂ ಕೊಠಡಿಯಲ್ಲಿ ಹುಟ್ಟುಹಬ್ಬ ಆಚರಿಸಿದ್ದರು. ತಡರಾತ್ರಿವರೆಗೂ ಹರಟೆ ಹೊಡೆದಿದ್ದರು. ಏಪ್ರಿಲ್ 5ರ ನಸುಕಿನ 2.15ರ ಸುಮಾರಿಗೆ ಇಬ್ಬರಿಗೂ

ಅಪರಾಧ ಸುದ್ದಿ



ವಿ. ಚಂದ್ರು

ಹಸಿವಾಗಿತ್ತು. ಕೊಠಡಿ ಬಳಿ ಅಂಗಡಿಗಳು ತೆರೆದಿರಲಿಲ್ಲ. ಚಿಕನ್ ರೋಲ್ ತಿನ್ನಲೆಂದು ಗೋರಿಪಾಳ್ಯಕ್ಕೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು’ ಎಂಬ ಅಂಶ ದೋಷಾರೋಪ ಪಟ್ಟಿಯಲ್ಲಿರುವುದಾಗಿ ಗೊತ್ತಾಗಿದೆ.

‘ಹಳೇ ಗುಡ್ಡದಹಳ್ಳಿ 9ನೇ ಮುಖ್ಯರಸ್ತೆ ಬದಿ ದ್ವಿಚಕ್ರ ವಾಹನ ನಿಲ್ಲಿಸಿದ್ದ ಸೈಮನ್ ಹಾಗೂ ಚಂದ್ರು ಬೇಕರಿಯೊಂದಕ್ಕೆ ಹೋಗಿದ್ದರು. ಚಿಕನ್ ರೋಲ್ ಕೊಡುವಂತೆ ಹೇಳಿದ್ದರು. ಸ್ಥಳದಲ್ಲಿದ್ದ ಆರೋಪಿ ಶಾಹೀದ್ ಪಾಷಾ, ಉರ್ದುವಿನಲ್ಲಿ ಸುಖಾಸುಮ್ಮನೇ ಬೈದು ಗುರಾಯಿಸಿದ್ದ. ಸೈಮನ್, ‘ನಿಮಗೆ ಏನೂ ಅಂದಿಲ್ಲ. ಸುಮ್ಮನೆ ಏನೇನೋ ಅಂದುಕೊಳ್ಳಬೇಡಿ’ ಎಂದು ಕನ್ನಡದಲ್ಲಿ ಹೇಳಿದ್ದ.’

‘ನನಗೆ ಕನ್ನಡ ಬರುವುದಿಲ್ಲ. ಉರ್ದುವಿನಲ್ಲಿ ಹೇಳು’ ಎಂದು ಶಾಹೀದ್ ಏರುಧ್ವನಿಯಲ್ಲಿ ಹೇಳಿದ್ದ. ‘ಉರ್ದು ಬರುವುದಿಲ್ಲ’ ಎಂದು ಸೈಮನ್ ಹಾಗೂ ಚಂದ್ರು ಹೇಳಿದ್ದರು. ಅಷ್ಟಕ್ಕೇ ಕೋಪಗೊಂಡ ಶಾಹೀದ್, ಹಲ್ಲೆಗೆ ಮುಂದಾಗಿದ್ದ. ತನ್ನ ರಕ್ಷಣೆಗಾಗಿ ಸೈಮನ್ ಆತನನ್ನು ದೂರಕ್ಕೆ ತಳ್ಳಿದ್ದ. ಕೋಪಗೊಂಡ ಶಾಹೀದ್, ಸ್ನೇಹಿತರಾದ ಶಾಹೀದ್ ಅಲಿಯಾಸ್ ಗೂಳಿ ಹಾಗೂ ಇತರರಿಗೆ ಕರೆ ಮಾಡಿ ಕರೆಸಿದ್ದ. ಲಾಂಗ್ ಹಾಗೂ ಚಾಕು ಸಮೇತ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಗಲಾಟೆ ಆರಂಭಿಸಿದ್ದರು.’

‘ಉರ್ದುವಿನಲ್ಲಿ ಪರಸ್ಪರ ಮಾತನಾಡಿಕೊಂಡಿದ್ದ ಆರೋಪಿಗಳು, ಚಂದ್ರು ಹಾಗೂ ಸೈಮನ್ ಅವರನ್ನು ಬೆನ್ನಟ್ಟಿದ್ದರು. ರಸ್ತೆಯಲ್ಲಿ ಚಂದ್ರು ಅವರನ್ನು ತಡೆದು ಚಾಕುವಿನಿಂದ ಇರಿದಿದ್ದರು. ಸೈಮನ್ ತಪ್ಪಿಸಿಕೊಂಡಿದ್ದರು. ಮತ್ತೊಬ್ಬ ಆರೋಪಿ ಮೊಹಮ್ಮದ್, ‘ಉರ್ದುವಿನಲ್ಲಿ ಮಾತನಾಡದವರನ್ನು ಬಿಡಬೇಡಿ’ ಎಂದು ಪ್ರಚೋದಿಸಿದ್ದ’ ಎಂಬ ಮಾಹಿತಿ ದೋಷಾರೋಪ ಪಟ್ಟಿಯಲ್ಲಿದೆ.

ಗಾಬರಿಯಿಂದ ದೂರು: ‘ಬೈಕ್ ಅಪಘಾತದಿಂದ ಗಲಾಟೆ ಆಗಿ, ಚಂದ್ರು ಕೊಲೆ ಆಯಿತು’ ಎಂದು ಆರಂಭದಲ್ಲಿ ದೂರು ನೀಡಿದ್ದ ಸೈಮನ್ ರಾಜ್, ಸಿಐಡಿ ಬಳಿ ಭಿನ್ನ ಹೇಳಿಕೆ ನೀಡಿದ್ದಾರೆ. ‘ಸ್ನೇಹಿತ ಮೃತಪಟ್ಟಿದ್ದರಿಂದ ಗಾಬರಿಗೊಂಡು ಪೊಲೀಸರಿಗೆ ಸರಿಯಾದ ದೂರು ನೀಡಿರಲಿಲ್ಲ. ಉರ್ದು ಮಾತನಾಡದಿದ್ದಕ್ಕೆ ಆರೋಪಿಗಳು ಚಂದ್ರುನನ್ನು ಕೊಂದರು’ ಎಂದು ಸಿಐಡಿಗೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಈ ಅಂಶವನ್ನೂ ಪಟ್ಟಿಯಲ್ಲಿ ದಾಖಲಿಸಲಾಗಿದೆ.

ಪೊಲೀಸ್ ಕಮಿಷನರ್, ಗೃಹ ಸಚಿವರ ಮಾತಿನ ಜಟಾಪಟಿ

‘ಚಂದ್ರು ಕೊಲೆ ಪ್ರಕರಣದಲ್ಲಿ ಹೇಳಿಕೆ ನೀಡಿದ್ದ ಅಂದಿನ ಕಮಿಷನರ್ ಕಮಲ್ ಪಂತ್, ‘ಬೈಕ್‌ಗಳು ಪರಸ್ಪರ ತಗುಲಿದ್ದ ಕಾರಣಕ್ಕೆ ಗಲಾಟೆಯಾಗಿ ಕೊಲೆ ಆಗಿದೆ’ ಎಂದಿದ್ದರು. ಗೃಹ ಸಚಿವ ಆರಗ ಜ್ಞಾನೇಂದ್ರ, ‘ಉರ್ದು ಮಾತನಾಡದಿದ್ದಕ್ಕೆ ಕೊಲೆ ಆಗಿದೆ’ ಎಂಬುದಾಗಿ ಹೇಳಿಕೆ ನೀಡಿದ್ದರು. ಇವರಿಬ್ಬರ ಭಿನ್ನ ಹೇಳಿಕೆ ಚರ್ಚೆಗೆ ಕಾರಣವಾಗಿದ್ದು, ತಮ್ಮದೇ ಹೇಳಿಕೆ ನಿಜವೆಂದು ಕಮಿಷನರ್ ಹಲವು ಬಾರಿ ವಾದಿಸಿದ್ದರು.

ಚಂದ್ರು ಕೊಲೆ ಪ್ರಕರಣ ಪ್ರಸ್ತಾಪಿಸಿದ್ದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್, ‘ಉರ್ದು ಮಾತನಾಡದಿದ್ದಕ್ಕೆ ಕೊಲೆ ಆಗಿದೆ. ಕಮಿಷನರ್ ಸುಳ್ಳು ಹೇಳುತ್ತಿದ್ದಾರೆ’ ಎಂದು ದೂರಿದ್ದರು.

ಟಿಪ್ಪರ್ ಡಿಕ್ಕಿ: ಪತಿಯೂ ಸಾವು

ನಾಗರಬಾವಿ ವೃತ್ತದ ಬಳಿ ದಂಪತಿಗೆ ಗುದ್ದಿದ್ದ ಬಿಬಿಎಂಪಿ ವಾಹನ

ಬೆಂಗಳೂರು: ನಾಗರಬಾವಿ ವೃತ್ತದ ಬಳಿ ದ್ವಿಚಕ್ರ ವಾಹನವೊಂದಕ್ಕೆ ಬಿಬಿಎಂಪಿ ಟಿಪ್ಪರ್ ಡಿಕ್ಕಿ ಹೊಡೆದಿದ್ದರಿಂದ ತೀವ್ರ ಗಾಯಗೊಂಡಿದ್ದ ಯೋಗೇಂದ್ರ (41) ಎಂಬುವರು ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ.

‘ಜುಲೈ 9ರಂದು ಬೆಳಿಗ್ಗೆ ಸಂಭವಿಸಿದ್ದ ಅಪಘಾತದಲ್ಲಿ ವಿಜಯಕಲಾ (37) ಮೃತಪಟ್ಟಿದ್ದರು. ಇದೀಗ ಅವರ ಪತಿ ಯೋಗೇಂದ್ರ ಸಹ ತೀರಿಕೊಂಡಿದ್ದಾರೆ’ ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ಹೇಳಿದರು.

‘ಅಪಘಾತಕ್ಕೆ ಕಾರಣವಾದ ಆರೋಪದಡಿ ಬಿಬಿಎಂಪಿ ಚಾಲಕ ದೊರೈ ಎಂಬಾತನನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಲಾಗಿದೆ’ ಎಂದು ತಿಳಿಸಿದರು.

ಅಜ್ಜಿ ಬಳಿ ಮಕ್ಕಳು: ‘ಯೋಗೇಂದ್ರ ಹಾಗೂ ವಿಜಯಕಲಾ, ಭುವನೇಶ್ವರಿ ನಗರದ ನಿವಾಸಿಗಳು. ಇವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಮೆಜೆಸ್ಟಿಕ್‌ನಲ್ಲಿರುವ ಮಳಿಗೆಯೊಂದರಲ್ಲಿ ಮಾರುಕಟ್ಟೆ ಪ್ರತಿನಿಧಿ ಆಗಿ ವಿಜಯಕಲಾ ಕೆಲಸ ಮಾಡುತ್ತಿದ್ದರು. ಜುಲೈ 9ರಂದು ಬೆಳಿಗ್ಗೆ ಕೆಲಸಕ್ಕೆ ಹೊರಟಿದ್ದ ಪತ್ನಿಯನ್ನು ಬಸ್ ತಂಗುದಾಣಕ್ಕೆ ಬಿಟ್ಟು ಬರಲು ಯೋಗೇಂದ್ರ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿತ್ತು. ತಂದೆ–ತಾಯಿ ಕಳೆದುಕೊಂಡಿರುವ ಹೆಣ್ಣುಮಕ್ಕಳು, ಮರಿಯಪ್ಪನಪಾಳ್ಯದಲ್ಲಿರುವ ಅಜ್ಜಿ ಬಳಿ ಇದ್ದಾರೆ. ತಂದೆಯ ಚಿಕಿತ್ಸೆಗೆ ತಗುಲಿದ್ದ ₹5.77 ಲಕ್ಷ ಆಸ್ಪತ್ರೆ ಶುಲ್ಕ ಪಾವತಿಸಲು ಕುಟುಂಬಕ್ಕೆ ಸಾಧ್ಯವಾಗಿರಲಿಲ್ಲ. ಇನ್‌ಸ್ಪೆಕ್ಟರ್‌ಗಳಾದ ರೂಪಾ ಹಡಗಲಿ, ಲೋಹಿತ್ ಹಾಗೂ ಸಿಬ್ಬಂದಿ, ಆಸ್ಪತ್ರೆಯವರ ಜೊತೆ ಮಾತುಕತೆ ನಡೆಸಿ ಶುಲ್ಕ ಮನ್ನಾ ಮಾಡಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

ಡ್ರಗ್ಸ್: ನೈಜೀರಿಯಾ ಪ್ರಜೆ ಬಂಧನ

ಬೆಂಗಳೂರು: ಡ್ರಗ್ಸ್ ಮಾರುತ್ತಿದ್ದ ಆರೋಪಿ ಚುಕ್ವುಜಕ್ವಾ ಅಂಥೋನಿ (30) ಅವರನ್ನು ಪುಲಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನೈಜೀರಿಯಾದ ಅಂಥೋನಿ ಶುಕ್ರವಾರ ಡ್ರಗ್ಸ್ ಮಾರುತ್ತಿದ್ದ. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಈತನನ್ನು ಬಂಧಿಸಲಾಯಿತು. ₹80 ಸಾವಿರ ಮೌಲ್ಯದ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಆಫ್ರಿಕಾ ಪ್ರಜೆಯಿಂದ ಡ್ರಗ್ಸ್ ಖರೀದಿಸಿ ತರುತ್ತಿದ್ದ ಆರೋಪಿ, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಮಾರುತ್ತಿದ್ದ’ ಎಂದು ಪೊಲೀಸರು ಹೇಳಿದರು.

ವಿಡಿಯೊ ಹರಿಬಿಟ್ಟ ಆರೋಪಿ

ಬೆಂಗಳೂರು: ಬಿಬಿಎಂಪಿ ಮಾಜಿ ಸದಸ್ಯೆ ನಜೀಮಾ ಅವರ ಪತಿ ಅಯೂಬ್ ಖಾನ್ ಕೊಲೆ ಪ್ರಕರಣದ ಆರೋಪಿ, ಮತೀನ್ ಖಾನ್ ಎಂಬಾತ ತಲೆಮರೆಸಿಕೊಂಡಿದ್ದು ಅಜ್ಞಾತ ಸ್ಥಳದಿಂದ ಶುಕ್ರವಾರ ವಿಡಿಯೊ ಮಾಡಿ ಹರಿಬಿಟ್ಟಿದ್ದಾನೆ.

‘ಅಯೂಬ್ ಖಾನ್ ನನ್ನನ್ನು ಯಾವಾಗಲೂ ನಿಂದಿಸುತ್ತಿದ್ದರು. ಕಾರಣವಿಲ್ಲದೆ ಪೊಲೀಸರಿಗೆ ದೂರು ಕೊಡುತ್ತಿದ್ದರು. ಅದರಿಂದ ಪೊಲೀಸ್ ಠಾಣೆಗೂ ಹೋಗಿದ್ದೆ. ಜುಲೈ 13ರಂದು ಚಿಕ್ಕಪ್ಪ ಅಯೂಬ್ ಖಾನ್ ಹಾಗೂ ಅವರ ಪುತ್ರ ಮೊದಲು ಹಲ್ಲೆಗೆ ಬಂದಿದ್ದರು. ನಾನು ಪ್ರಾರ್ಥನೆ ಮುಗಿಸಿ ಬಂದಾಗ ಅವರ ಪುತ್ರನೇ ಹಲ್ಲೆ ನಡೆಸಿದ್ದ’ ಎಂದು ವಿಡಿಯೊ ಮಾಡಿ ಹರಿಬಿಟ್ಟಿದ್ದಾನೆ. ಚಾಕು ಇರಿತ ಪ್ರಕರಣದಲ್ಲಿ ಅಯೂಬ್ ಖಾನ್ ಮೃತಪಟ್ಟಿದ್ದಾರೆ.



ಪ್ರತಿಭಟನೆ

ಹೂಗಾರ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು, ಶರಣ ಹೂಗಾರ ಮಾದಯ್ಯ ಅವರ ಹೆಸರಿನಲ್ಲಿ ಅಭಿವೃದ್ಧಿ ನಿಗಮ ಸ್ಥಾಪಿಸುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಲ್ಯಾಣ ಕರ್ನಾಟಕ ಹೂಗಾರ ಸಮಾಜ ಬೆಂಗಳೂರಿನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿತು. ಸಂಘದ ಗೌರವಾಧ್ಯಕ್ಷ ಗುರುದೇವ ಶರಣರು, ಅಧ್ಯಕ್ಷ ಬಸವರಾಜ ಹೂಗಾರ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಹೂಗಾರ ಪ್ರತಿಭಟನೆ ನೇತೃತ್ವ ವಹಿಸಿದ್ದರು – ಪ್ರಜಾವಾಣಿ ಚಿತ್ರ



ಯಶವಂತಪುರ ಎಪಿಎಂಸಿ ಮಾರುಕಟ್ಟೆಯಲ್ಲಿ ದಿನಸಿ ವ್ಯಾಪಾರ ಮಳಿಗೆಗಳು ಬಂದ್ ಆಗಿದ್ದರಿಂದ ಶುಕ್ರವಾರ ಬಿಕೊ ಎನ್ನುತ್ತಿದ್ದ ರಸ್ತೆ – ಪ್ರಜಾವಾಣಿ ಚಿತ್ರ

ಯಶವಂತಪುರದಲ್ಲಿ ವಹಿವಾಟು ಬಂದ್

ಬೆಂಗಳೂರು: ಅಕ್ಕಿ, ಬೇಳೆ ಸೇರಿ ಆಹಾರ ಧಾನ್ಯಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ವಿಧಿಸಿರುವುದನ್ನು ವಿರೋಧಿಸಿ ಯಶವಂತಪುರ ಮತ್ತು ನ್ಯೂ ತರಗುಪೇಟೆಯಲ್ಲಿ ದವಸ–ಧಾನ್ಯಗಳ ವಹಿವಾಟು ಶುಕ್ರವಾರ ಸಂಪೂರ್ಣ ಬಂದ್ ಆಗಿತ್ತು.

ಯಶವಂತಪುರ ಎಪಿಎಂಸಿಯಲ್ಲಿ 1,200ಕ್ಕೂ ಹೆಚ್ಚು ದಿನಸಿ ಅಂಗಡಿಗಳಿದ್ದು, ಚಾಮರಾಜಪೇಟೆಯ ನ್ಯೂ ತರಗುಪೇಟೆಯಲ್ಲಿ 60ಕ್ಕೂ ಹೆಚ್ಚು ಅಂಗಡಿಗಳಿದ್ದು, ಎರಡೂ ಕಡೆ ಬೆಳಿಗ್ಗೆಯಿಂದಲೇ ವಹಿವಾಟು ಬಂದ್ ಮಾಡಲಾಗಿತ್ತು.

ಗುಪ್ತಾಂಗದಲ್ಲಿ ಡ್ರಗ್ಸ್: ಜೈಲಿನಲ್ಲಿ ಸಿಕ್ಕಿಬಿದ್ದ ಮಹಿಳೆಯರು

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೈದಿಗಳಿಗೆ ಡ್ರಗ್ಸ್ ಪೂರೈಸುತ್ತಿದ್ದ ಇಬ್ಬರು ಮಹಿಳೆಯರನ್ನು ಪೊಲೀಸರು ಬಂಧಿಸಿದ್ದು, ಅವರಿಂದ 220 ಗ್ರಾಂ ಹಶೀಷ್ ಜಪ್ತಿ ಮಾಡಿದ್ದಾರೆ.

‘ಜಗಜೀವನ್‌ರಾಮ್ ನಗರ ನಿವಾಸಿ ಎ. ಸಂಗೀತಾ ಹಾಗೂ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಟಿ.ಆರ್. ಛಾಯಾ ಬಂಧಿತರು. ಜೈಲಿನ ಅಧಿಕಾರಿಗಳು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಡ್ರಗ್ಸ್ ಸ್ವೀಕರಿಸುತ್ತಿದ್ದ ಕೈದಿಗಳಾದ ಲೋಹಿತ್ ಹಾಗೂ ಕಲ್ಲಪ್ಪ ಎಂಬುವರನ್ನೂ ಆರೋಪಿಗಳಾಗಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜುಲೈ 12ರಂದು ಇಬ್ಬರು ಮಹಿಳೆಯರು, ಕೈದಿಗಳನ್ನು ನೋಡಲು ಜೈಲಿಗೆ ಬಂದಿದ್ದರು. ಸಾಮಾನ್ಯ ಸಂದರ್ಶನ ವಿಭಾಗ–1ರಲ್ಲಿದ್ದ ಭದ್ರತಾ ಸಿಬ್ಬಂದಿ, ಪರಿಶೀಲನೆ ನಡೆಸಿದ್ದರು. ಯುವತಿಯರ ಬಳಿ ಅನುಮಾನಾಸ್ಪದ ವಸ್ತುಗಳು ಇರುವುದು ಪತ್ತೆಯಾಗಿತ್ತು. ಮಹಿಳಾ ಸಿಬ್ಬಂದಿ, ಆರೋಪಿ ಛಾಯಾ ಹಾಗೂ ಸಂಗೀತಾ ಅವರನ್ನು ತಪಾಸಣೆಗೆ ಒಳಪಡಿಸಿದ್ದರು. ಛಾಯಾ ಗುಪ್ತಾಂಗದಲ್ಲಿ 50 ಎಂ.ಎಲ್‌ನ ಕೊಬ್ಬರಿ ಎಣ್ಣೆ ಬಾಟಲಿ ಸಿಕ್ಕಿತ್ತು. ಅದರಲ್ಲೇ ಹಶೀಷ್ ಪತ್ತೆಯಾಯಿತು. ಬಳಿಕ, ಇಬ್ಬರನ್ನೂ ಕೊಠಡಿಗೆ ಕರೆದೊಯ್ದು ಪುನಃ ಪರಿಶೀಲನೆ ನಡೆಸಿದ್ದರು. ಇಬ್ಬರ ಗುಪ್ತಾಂಗದಲ್ಲಿ ಪ್ಲಾಸ್ಟಿಕ್ ಕವರ್ ಪತ್ತೆಯಾಯಿತು. ಅದರಲ್ಲೂ ಡ್ರಗ್ಸ್ ಇರುವುದು ಗೊತ್ತಾಯಿತು. ನಂತರವೇ ಈ ಮಹಿಳೆಯರನ್ನು ವಶಕ್ಕೆ ಪಡೆದು, ಠಾಣೆಗೆ ಒಪ್ಪಿಸಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ವಾಹನ ಕದ್ದೊಯ್ಯುವಾಗ ಅಪಘಾತ: ಆರೋಪಿಗೆ ಥಳಿತ

ಬೆಂಗಳೂರು: ಜಯನಗರದ 5ನೇ ಹಂತದಲ್ಲಿ ದ್ವಿಚಕ್ರ ವಾಹನ ಕದ್ದು ಪರಾರಿಯಾಗುತ್ತಿದ್ದ ವೇಳೆ ಅಪಘಾತ ಸಂಭವಿಸಿದ್ದು, ಆರೋಪಿಯನ್ನು ಹಿಡಿದು ಸಾರ್ವಜನಿಕರು ಥಳಿಸಿದ್ದಾರೆ.

‘ಜುಲೈ 13ರಂದು ನಡೆದಿರುವ ಘಟನೆ ಸಂಬಂಧ ಸಾರ್ವಜನಿಕರು ಮಾಹಿತಿ ನೀಡಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಭಿಕ್ಷಾಟನೆ: 15 ತಾಯಂದಿರು, 28 ಮಕ್ಕಳಿಗೆ ಪುನರ್ವಸತಿ

ಬೆಂಗಳೂರು: ನಗರದ ಪ್ರಮುಖ ವೃತ್ತಗಳಲ್ಲಿ ಮಕ್ಕಳನ್ನು ಬಳಸಿಕೊಂಡು ಭಿಕ್ಷಾಟನೆ ನಡೆಸುತ್ತಿದ್ದ ತಾಯಂದಿರು ಹಾಗೂ ಮಕ್ಕಳನ್ನು ರಕ್ಷಿಸಿ ಪುನರ್ವಸತಿ ಕಲ್ಪಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿಬ್ಬಂದಿ, ಸಿಸಿಬಿ ಪೊಲೀಸರು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಜಂಟಿ ಕಾರ್ಯಾಚರಣೆ ನಡೆಸಿ ರಕ್ಷಿಸಿದ್ದಾರೆ.

ನಗರದ 8 ವಲಯಗಳ 39 ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಿ ತಾಯಂದಿರು ಹಾಗೂ ಮಕ್ಕಳನ್ನು ರಕ್ಷಿಸಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ. ಒಟ್ಟು 43 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. 15 ಮಂದಿ ತಾಯಂದಿರು, 28 ಮಕ್ಕಳನ್ನು ರಕ್ಷಣೆ ಮಾಡಲಾಯಿತು. ಅದರಲ್ಲಿ 14 ಬಾಲಕರು, 14 ಬಾಲಕಿಯರು ಸೇರಿದ್ದಾರೆ. ವಿಚಾರಣೆಯ ನಂತರ ಅಂಬಿಕಾ ಮಹಿಳಾ ಸಂಘ, ಶ್ರೀಶಿವಕುಮಾರ ಸ್ವಾಮಿ ಅವರ ಐಕ್ಯತಾ ಟ್ರಸ್ಟ್, ಭಾರತೀಯ ಅಧಿಮಾಜಾತಿ ಸೇವಕ ಸಂಘ, ಸಮರ್ಥನಾ ಟ್ರಸ್ಟ್ ಫಾರ್ ಡಿಸೆಬಲ್ಸ್ ಸಂಸ್ಥೆಗಳಿಗೆ ಸೇರಿಸಲಾಗಿದೆ.

ದ್ರೌಪದಿ ಬೆಂಬಲಿಸಲು ಜೆಡಿಎಸ್ ನಿರ್ಧಾರ

ಬೆಂಗಳೂರು: ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಬೆಂಬಲಿಸಲು ಶುಕ್ರವಾರ ನಡೆದ ಜೆಡಿಎಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಶಾಸಕಾಂಗ ಪಕ್ಷದ ಉಪ ನಾಯಕ ಬಂಡೆಪ್ಪ ಕಾಶೆಂಪೂರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಕೋವಿಡ್ ಕಾರಣದಿಂದ ಪ್ರತ್ಯೇಕ ವಾಸದಲ್ಲಿರುವ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಪುತ್ರಿ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿರುವ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಮತ್ತು ಕ್ಷೇತ್ರಗಳಲ್ಲಿರುವ ಶಾಸಕರು ವರ್ಚ್ಯುಯಲ್ ಆಗಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಪಿಎಸ್‌ಐ ನೇಮಕಾತಿ ಅಕ್ರಮ: ಬಂಧಿತ ಆರೋಪಿ ಅಮ್ರಿತ್ ಪೌಲ್

ಮಡದಿ ಮಕ್ಳ ನೋಡ್ಬೇಕು...

● ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ಜೈಲಿನ ಒಳಗಿರುವ ಆಸ್ಪತ್ರೆ ಕೋಣೆಯಲ್ಲೇ ಇರಿಸಲು ಜೈಲು ಅಧಿಕಾರಿಗಳಿಗೆ ನಿರ್ದೇಶಿಸಬೇಕು. ನನ್ನ ದೇಹ ಪ್ರಕೃತಿ ನಿರ್ದಿಷ್ಟ ಆಹಾರ ಪದ್ಧತಿಗೆ ಒಳಪಟ್ಟಿರುವ ಕಾರಣ ಮನೆ ಊಟವೇ ಬೇಕು. ಪ್ರತಿದಿನವೂ ಹೆಂಡತಿ ಮಕ್ಕಳನ್ನು 30 ನಿಮಿಷ ಭೇಟಿ ಮಾಡಲು ಅವಕಾಶ ನೀಡಬೇಕು...!

ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಪ್ರಮುಖ ಆರೋಪಿಯಾದ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಕೋರ್ಟ್‌ಗೆ ಮಾಡಿದ ಮನವಿಯ ಮುಖ್ಯಾಂಶಗಳಿವು.

ನೇಮಕಾತಿ ವಿಭಾಗದ ಎಡಿಜಿಪಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಮ್ರಿತ್ ಪೌಲ್, ಹಗರಣದ 35ನೇ ಆರೋಪಿಯಾಗಿದ್ದು ಅವರನ್ನು ಶುಕ್ರವಾರ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಈ ವೇಳೆ ನ್ಯಾಯಾಧೀಶ ಆನಂದ ಚೌಹಾಣ್ ಆರೋಪಿಯನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ವಿಚಾರಣೆ ವೇಳೆ ಆರೋಪಿ ಪರ ವಕೀಲ ಅಶೀಶ್ ಕೃಪಾಕರ, ಪೌಲ್ ಅವರ ವಿಶೇಷ ಆರೈಕೆಗೆ ಕೋರಿ ಸಲ್ಲಿಸಿದ ಅರ್ಜಿಗೆ, ವಿಶೇಷ ಪ್ರಾಸಿಕ್ಯೂಟರ್ ಆದ ಹೈಕೋರ್ಟ್ ವಕೀಲ ಪಿ.ಪ್ರಸನ್ನಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಪ್ರಭಾವಿಗಳನ್ನು ಇನ್ನೂ ಬಂಧಿಸಬೇಕಿದೆ'

'ಈ ಹಗರಣದ ಆರೋಪಿಗಳು ಸಾಕಷ್ಟು ಹಣ ಮತ್ತು ರಾಜಕೀಯ ಬಲ ಉಳ್ಳವರಾಗಿದ್ದು, ಇದರಲ್ಲಿ ಭಾಗಿಯಾಗಿರುವ ಇನ್ನೂ ಕೆಲವು ಪ್ರಭಾವಿಗಳನ್ನು ಬಂಧಿಸಬೇಕಿದೆ' ಎಂದು ಪ್ರಾಸಿಕ್ಯೂಷನ್ ನ್ಯಾಯಾಲಯಕ್ಕೆ ತಿಳಿಸಿದೆ.

'ಆರೋಪಿ ಪೌಲ್ ಆರ್ಥಿಕವಾಗಿ ಬಲಾಢ್ಯರಾಗಿದ್ದು, ಸಮಾಜದ ಉನ್ನತ ವ್ಯಕ್ತಿಗಳ ಪರಿಚಯ ಹೊಂದಿದ್ದಾರೆ. ಈ ಹಗರಣ ಸಮಾಜದ ಸ್ವಾಸ್ಥ್ಯವನ್ನೇ ಹಾಳುಮಾಡುವ ಸ್ವರೂಪ ಹೊಂದಿದೆ. ಆರೋಪಿಗಳಿಗೆ ಜಾಮೀನು ನೀಡಿದರೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಸಾಕ್ಷಿದಾರರಿಗೆ ಬೆದರಿಕೆ ಹಾಕಬಲ್ಲರು ಮತ್ತು ಆಮಿಷವೊಡ್ಡಬಲ್ಲರು. ಇದರಿಂದ ತನಿಖೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆ ಇರುತ್ತದೆ' ಎಂದು ಪ್ರಾಸಿಕ್ಯೂಷನ್ ಹೇಳಿದೆ.

'ಜೈಲು ಕೈಪಿಡಿ ಏನು ಹೇಳುತ್ತದೆಯೋ ಅದರ ಅನುಸಾರವೇ ಈ ಆರೋಪಿಯನ್ನೂ ನಡೆಸಿಕೊಳ್ಳಬೇಕು. ಅವರು ಕೋರಿರುವ ವಿಶೇಷ ಸೌಲಭ್ಯಗಳನ್ನು ಈ ನ್ಯಾಯಾಲಯ ಮಾನ್ಯ ಮಾಡದೇ, ಅರ್ಜಿಯನ್ನು ತಿರಸ್ಕರಿಸಬೇಕು' ಎಂದು ಬಲವಾಗಿ ಪ್ರತಿಪಾದಿಸಿದರು. ಪ್ರಾಸಿಕ್ಯೂಷನ್‌ನ ಈ ಮನವಿಯನ್ನು ನ್ಯಾಯಾಧೀಶರು ಪುರಸ್ಕರಿಸಿದರು.

ಇದೇ ವೇಳೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಕೋರಿ ಪ್ರಸನ್ನಕುಮಾರ್ ನ್ಯಾಯಾಧೀಶರಿಗೆ ರಿಮ್ಯಾಂಡ್ ಅರ್ಜಿ ಸಲ್ಲಿಸಿದರು.

ಅರ್ಜಿಯಲ್ಲಿನ ಕಾರಣಗಳು:

- ಆರೋಪಿ ಪೌಲ್ ಪೊಲೀಸ್ ಇಲಾಖೆಯ ಘನತೆಗೆ ಕುಂದು ತರುವಂತಹ ಕೃತ್ಯ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಗಂಭೀರ ಸ್ವರೂಪದ ಈ ಪ್ರಕರಣ ಇನ್ನೂ ತನಿಖಾ ಹಂತದಲ್ಲಿದೆ.
- ಎಡಿಜಿಪಿ ದರ್ಜೆಯ ಉನ್ನತ ಅಧಿಕಾರಿಯಾಗಿದ್ದು, ಜಾಮೀನು ಪಡೆದು ಹೊರಗೆ ಹೋದಲ್ಲಿ ಸಮಾಜಕ್ಕೆ ತಪ್ಪು ಸಂದೇಶ ನೀಡಿದಂತಾಗುತ್ತದೆ.
- ವಶಪಡಿಸಿಕೊಂಡಿರುವ ಮೊಬೈಲ್ ಫೋನ್‌ಗಳನ್ನು ಎಫ್‌ಎಸ್‌ಎಲ್ ವಿಶ್ಲೇಷಣೆಗೆ ಕಳುಹಿಸಿದ್ದು, ವರದಿ ನಿರೀಕ್ಷಿಸಲಾಗುತ್ತಿದೆ.
- ಪೌಲ್ ತಮ್ಮ ಬಳಿಯಿದ್ದ ಪಿಎಸ್‌ಐ ನೇಮಕಾತಿಗೆ ಸಂಬಂಧಿಸಿದ ಒಎಂಆರ್ ಉತ್ತರ ಪತ್ರಿಕೆಗಳ ಕಿಟ್ ಬಾಕ್ಸ್‌ಗಳನ್ನು ಇಡಲಾಗಿದ್ದ ಅಲ್ಮೇರಾದ ಕೀಯನ್ನು ಒಎಂಆರ್ ಪತ್ರಿಕೆ ತಿದ್ದುಪಡಿ ಮಾಡಲು ಒಂದನೇ ಆರೋಪಿಗೆ ನೀಡಿದ್ದಾಗಿ 31ನೇ ಆರೋಪಿ ಹೇಳಿಕೆ ನೀಡಿರುತ್ತಾನೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಬೇಕಾಗಿದೆ.
- ಆರೋಪಿತ ಅಧಿಕಾರಿಯೊಂದಿಗೆ ಪಿಎಸ್‌ಐಗೆ ಆಯ್ಕೆಯಾದ ಯಾರೆಲ್ಲಾ ಅಭ್ಯರ್ಥಿಗಳು, ಸಂಪರ್ಕ ಹೊಂದಿದ್ದರು ಎನ್ನುವ ಬಗ್ಗೆ ಸಾಕ್ಷ್ಯಾಧಾರ ಸಂಗ್ರಹಿಸಬೇಕಿದೆ.

'ಮಂಪರು ಪರೀಕ್ಷೆಗೆ ಒಳಪಡಿಸಬೇಕು'

'ಆರೋಪಿ ಅಮ್ರಿತ್ ಪೌಲ್ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸುವ ಅವಶ್ಯಕತೆ ಇದೆ. ಹೀಗಾಗಿ ಅವರಿಂದ ಅನುಮತಿ ಪಡೆಯಲು ನಿರ್ದೇಶಿಬೇಕು' ಎಂದು ಕೋರಿ ಪಿ.ಪ್ರಸನ್ನ ಕುಮಾರ್, ನ್ಯಾಯಾಧೀಶರಿಗೆ ಮನವಿ ಮಾಡಿದರು.

ಅರ್ಜಿ ಸ್ವೀಕರಿಸಿದ ನ್ಯಾಯಾಧೀಶ ಆನಂದ ಚೌಹಾಣ್, 'ಶನಿವಾರ (ಜುಲೈ 16) ಈ ಅರ್ಜಿಗೆ ಉತ್ತರಿಸಿ' ಎಂದು ಆರೋಪಿ ಪರ ವಕೀಲರಿಗೆ ಸೂಚಿಸಿ ವಿಚಾರಣೆ ಮುಂದೂಡಿದರು.

ಟ್ರಂಪ್ ಮೊದಲ ಪತ್ನಿ ಇವಾನಾ ಸಾವು

ನ್ಯೂಯಾರ್ಕ್ (ಎಎಫ್‌ಪಿ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೊದಲ ಪತ್ನಿ ಇವಾನಾ ಟ್ರಂಪ್ (73) ಅವರು ಗುರುವಾರ ಮ್ಯಾನ್‌ಹಟನ್‌ನಲ್ಲಿನ ತಮ್ಮ ನಿವಾಸದಲ್ಲಿ ಮೆಟ್ಟಿಲು ಮೇಲಿನಿಂದ ಬಿದ್ದು ಮೃತಪಟ್ಟಿದ್ದಾರೆ.

ಇವಾನಾ ಅವರಿಗೆ ಮಗ ಡೊನಾಲ್ಡ್ ಜೂನಿಯರ್ ಮತ್ತು ಪುತ್ರಿ ಇವಾಂಕಾ ಟ್ರಂಪ್ ಇದ್ದಾರೆ. ಇವಾನಾ ಸಾವಿನ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

'ಕಾಲೇಜುಗಳಲ್ಲಿ ಕನಿಷ್ಠ 1,500 ವಿದ್ಯಾರ್ಥಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಕಾಲೇಜುಗಳು ಸುಸಜ್ಜಿತವಾಗಿದ್ದು, ಪ್ರತಿ ಕಾಲೇಜಿನಲ್ಲೂ ಕನಿಷ್ಠ 1,500ದಿಂದ 2 ಸಾವಿರ ವಿದ್ಯಾರ್ಥಿಗಳು ಇರುವಂತೆ ನೋಡಿಕೊಳ್ಳುವುದು ಪ್ರಾಂಶುಪಾಲರ ಹೊಣೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥ ನಾರಾಯಣ ಹೇಳಿದರು.

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ, ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರಿಗೆ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

84 ಸರ್ಕಾರಿ ಕಾಲೇಜುಗಳಲ್ಲಷ್ಟೆ ಶೇ 100ರಷ್ಟು ವಿದ್ಯಾರ್ಥಿಗಳು ಇದ್ದಾರೆ. 105 ಕಾಲೇಜುಗಳಲ್ಲಿ ಶೇ 40ರಷ್ಟು ವಿದ್ಯಾರ್ಥಿಗಳು ಮಾತ್ರ ಇದ್ದಾರೆ. ರಾಜ್ಯದ ಉನ್ನತ ಶಿಕ್ಷಣ ವಲಯದಲ್ಲಿ ಈಗಾಗಲೇ ಎನ್‌ಇಪಿ ಜಾರಿಯಾಗಿದೆ. ಇದಕ್ಕೆ ತಕ್ಕಂತೆ ಗುಣಮಟ್ಟದ ಕಲಿಕೆಗೆ ಸಿದ್ಧರಾಗಬೇಕು. ಈಗಾಗಲೇ ಅಭಿವೃದ್ಧಿ ಪಡಿಸಿರುವ 2,500 ಸ್ಮಾರ್ಟ್ ಕ್ಲಾಸ್-ರೂಂಗಳಲ್ಲಿ ಪಿಪಿಟಿ, ಆಡಿಯೊ ಮತ್ತು ವಿಡಿಯೊಗಳನ್ನು ಬೋಧನೆಯಲ್ಲಿ ಅಳವಡಿಸಿಕೊಳ್ಳಬೇಕು. ಉಳಿದಿರುವ 6,500 ತರಗತಿಗಳನ್ನು ಆರು ತಿಂಗಳಲ್ಲಿ ಮೇಲ್ದರ್ಜೆಗೆ ಏರಿಸಲಾಗುವುದು ಎಂದು ಭರವಸೆ ನೀಡಿದರು.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತ ಪಿ.ಪ್ರದೀಪ್ ಮಾತನಾಡಿದರು.

ಸಮಾಜದ ಮುಖಂಡರ ರಾಜ್ಯಮಟ್ಟದ ಸಮಾವೇಶದಲ್ಲಿ ಭರವಸೆ

ವಿಶ್ವಕರ್ಮರ ಕುಲಶಾಸ್ತ್ರ ಅಧ್ಯಯನ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕರ್ಮ ಸಮಾಜದ ಕುಲಶಾಸ್ತ್ರ ಅಧ್ಯಯನಕ್ಕೆ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಅರಮನೆ ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾಜದ ಮುಖಂಡರ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು.

ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ₹15 ಕೋಟಿ ನೀಡಲಾಗಿದೆ. ಹೆಚ್ಚುವರಿ ₹10 ಕೋಟಿ ಬಿಡುಗಡೆ ಮಾಡಲಾಗುವುದು. ₹5 ಕೋಟಿ ವೆಚ್ಚದಲ್ಲಿ ಆರಂಭಿಸುತ್ತಿರುವ ವಿಶ್ವಕರ್ಮ ಸಂಸ್ಥೆಯನ್ನು ಹಂತಹಂತವಾಗಿ ಅಭಿವೃದ್ಧಿಪಡಿಸಿ, ವಿಶ್ವವಿದ್ಯಾಲಯದ ಸ್ಥಾನ ನೀಡಲಾಗುವುದು.



ಬೆಂಗಳೂರಿನಲ್ಲಿ ಶುಕ್ರವಾರ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಆಯೋಜಿಸಿದ್ದ ವಿಶ್ವಕರ್ಮ ಸಮಾಜದ ಮುಖಂಡರ ಸಮಾವೇಶದಲ್ಲಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ, ಸಭಾ ಅಧ್ಯಕ್ಷ ಕೆ.ಪಿ ನಂಜುಂಡಿ ವಿಶ್ವಕರ್ಮರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು

ಸಮಾಜದ ಮಕ್ಕಳಿಗೆ ಪ್ರತ್ಯೇಕ ಎರಡು ವಸತಿ ಶಾಲೆ ಆರಂಭಿಸಲಾಗುವುದು. ಅಪೂರ್ಣಗೊಂಡ 80 ವಿಶ್ವಕರ್ಮ ಸಮುದಾಯ ಭವನಗಳನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ಆಧುನಿಕ ತಂತ್ರಜ್ಞಾನಕ್ಕೆ ವಿಶ್ವಕರ್ಮರ ಐದು ಕುಶಲಕಲೆಗಳು, ನೈಪುಣ್ಯತೆಯೇ ಬುನಾದಿ. ವಂಶಪಾರಂಪರ್ಯವಾಗಿ ಒಲಿದು ಬಂದ ಕಲೆಯನ್ನು ಇಂದಿನ ಪೀಳಿಗೆ ಮುಂದುವರಿಸಬೇಕು. ಸರ್ಕಾರ ಎಲ್ಲ ರೀತಿಯ ನೆರವು ನೀಡಲಿದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ಮಹಾಸಭಾದ ಅಧ್ಯಕ್ಷ ಕೆ.ಪಿ. ನಂಜುಂಡಿ, ಸಮಾಜದ ಜನರು ಶಿಕ್ಷಣ, ರಾಜಕೀಯದಲ್ಲಿ ಹಿಂದುಳಿದಿದ್ದಾರೆ. ನಾಗರಿಕತೆ ಆರಂಭದಿಂದಲೂ ಗುಡ್ಡಗಾಡುಗಳಲ್ಲಿ ಬದುಕು ಕಟ್ಟಿಕೊಂಡು ಬಂದಿದ್ದಾರೆ. ಪ್ರವರ್ಗ '2 ಎ' ಬದಲು, ಉತ್ತರ ಭಾರತದ ರಾಜ್ಯಗಳಂತೆ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು. ಸಾಮಾಜಿಕ ನ್ಯಾಯ ದೊರಕಿಸಬೇಕು. ರಾಜ್ಯದ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ವಿಶ್ವಕರ್ಮರ ಅಥವಾ ಜಕ್ಕಣಾಚಾರಿ ಅವರ ಹೆಸರು ಇಡಬೇಕು ಎಂದು ಕೋರಿದರು.

ಸಭಾದ ಮುಖಂಡರಾದ ಮಳವಳ್ಳಿ ಶ್ರೀನಿವಾಸ್, ಲಕ್ಷ್ಮಿ ನಂಜುಂಡಿ, ಭಾಗ್ಯಮ್ಮ ಉಪಸ್ಥಿತರಿದ್ದರು.

ಕರ್ನಾಟಕ ಗೃಹ ಮಂಡಳಿ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಹಂಚಿಕೆ/ಲಾಟರಿ/2022–23 ದಿನಾಂಕ: 15.07.2022

ಕರ್ನಾಟಕ ಗೃಹ ಮಂಡಳಿಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿನ ನಿವೇಶನಗಳ ಇ-ಲಾಟರಿ ಹಂಚಿಕೆ ವೇಳಾಪಟ್ಟಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಿದ್ದು, ನಿಗಧಿತ ಆರಂಭಿಕ ಠೇವಣಿ ಮೊತ್ತವನ್ನು ಮಂಡಳಿ ಖಾತೆಗೆ ಪಾವತಿಸಿರುವ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಲಾಟರಿ ಮುಖಾಂತರ ಹಂಚಿಕೆ ಮಾಡಲು ಈ ಕೆಳಕಂಡಂತೆ ತಾತ್ಕಾಲಿಕ, ಅರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಿ ಇ-ಲಾಟರಿ ಮೂಲಕ ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಕ್ರ. ಸಂ	ಬಡಾವಣೆ	ಅರ್ಜಿ ಆಹ್ವಾನಿಸಿ ಪ್ರಕಟಣೆ ನೀಡಿದ ದಿನಾಂಕ	ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ	ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಲಾಟರಿ ನಡೆಯುವ ದಿನಾಂಕ . ಮತ್ತು ಸ್ಥಳ ಹಾಗೂ ಸಮಯ
1.	ವಿಜಯಪುರ ಜಿಲ್ಲೆ, ಇಟ್ಟಂಗಿಹಾಳ 2ನೇ ಹಂತ	24–08–2016 ವಿಜಯವಾಣಿ	18–07–2022	27–07–2022 ಜಿ.ಯೋ.ಕ. ವಿಜಯಪುರ & ಕೇಂದ್ರ ಕಛೇರಿ	30–07–2022	02–08–2022 ಬೆಳಿಗ್ಗೆ 11.00 ಗಂಟೆಗೆ ಕೇಂದ್ರ ಕಛೇರಿ, ಕಾವೇರಿ ಭವನ, ಬೆಂಗಳೂರು
2.	ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಪಂಜನಹಳ್ಳಿ 3ನೇ ಹಂತ	19–05–2022 ಪ್ರಜಾವಾಣಿ	18–07–2022	27–07–2022 ಜಿ.ಯೋ.ಕ. ಚಾಮರಾಜನಗರ & ಕೇಂದ್ರ ಕಛೇರಿ	30–07–2022	02–08–2022 ಅಪರಾಹ್ನ 1.00 ಗಂಟೆಗೆ ಕೇಂದ್ರ ಕಛೇರಿ, ಕಾವೇರಿ ಭವನ, ಬೆಂಗಳೂರು
3.	ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ಚಿಕ್ಕಬಾದವಾಡಗಿ	30–05–2017 24–06–2017 16–07–2017 ಪ್ರಜಾವಾಣಿ	18–07–2022	27–07–2022 ಜಿ.ಯೋ.ಕ. ಬಾಗಲಕೋಟೆ & ಕೇಂದ್ರ ಕಛೇರಿ	30–07–2022	02–08–2022 ಅಪರಾಹ್ನ 3.00 ಗಂಟೆಗೆ ಕೇಂದ್ರ ಕಛೇರಿ, ಕಾವೇರಿ ಭವನ, ಬೆಂಗಳೂರು
4.	ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಶೇರಾಪುರ	13–05–2022 ಪ್ರಜಾವಾಣಿ	18–07–2022	02–08–2022 ಜಿ.ಯೋ.ಕ. ದಾವಣಗೆರೆ & ಕೇಂದ್ರ ಕಛೇರಿ	10–08–2022	17–08–2022 ಬೆಳಿಗ್ಗೆ 11.00 ಗಂಟೆಗೆ ಶೇರಾಪುರ ಬಡಾವಣೆ, ಹರಿಹರ
5.	ಗದಗ ಜಿಲ್ಲೆ ಮುಂಡರಗಿ	30–05–2017 24–06–2017 16–07–2017 ಪ್ರಜಾವಾಣಿ	18–07–2022	02–08–2022 ಜಿ.ಯೋ.ಕ. ಗದಗ & ಕೇಂದ್ರ ಕಛೇರಿ	10–08–2022	18–08–2022 ಬೆಳಿಗ್ಗೆ 11.00 ಗಂಟೆಗೆ ಮುಂಡರಗಿ ಬಡಾವಣೆ ಗದಗ ಜಿಲ್ಲೆ
6.	ಬಳ್ಳಾರಿ ಜಿಲ್ಲೆ, (ಎನ್.ಜಿ.ಓ) ಮುಂಡ್ರಿಗಿ & ಹಲಕುಂದಿ	30–05–2017 24–06–2017 16–07–2017 ಪ್ರಜಾವಾಣಿ	25–07–2022	10–08–2022 ಜಿ.ಯೋ.ಕ. ಬಳ್ಳಾರಿ & ಕೇಂದ್ರ ಕಛೇರಿ	19–08–2022	24–08–2022 ಬೆಳಿಗ್ಗೆ 11.00 ಗಂಟೆಗೆ ಕೊಳಗಲ್ 1ನೇ ಹಂತದ ಬಡಾವಣೆ, ಬಳ್ಳಾರಿ
7.	ಬಳ್ಳಾರಿ ಜಿಲ್ಲೆ, ಕೊಳಗಲ್ 1ನೇ ಹಂತ		25–07–2022	10–08–2022 ಜಿ.ಯೋ.ಕ. ಬಳ್ಳಾರಿ & ಕೇಂದ್ರ ಕಛೇರಿ	19–08–2022	24–08–2022 ಅಪರಾಹ್ನ 3.00 ಗಂಟೆಗೆ ಕೊಳಗಲ್ 1ನೇ ಹಂತದ ಬಡಾವಣೆ, ಬಳ್ಳಾರಿ
8.	ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ಚಿಕ್ಕೂಲಿಕೆರೆ	08–06–2009 ಪ್ರಜಾವಾಣಿ	28–07–2022	12–08–2022 ಜಿ.ಯೋ.ಕ. ದಾವಣಗೆರೆ & ಕೇಂದ್ರ ಕಛೇರಿ	16–08–2022	12–08–2022 ಬೆಳಿಗ್ಗೆ 11.00 ಗಂಟೆಗೆ, ಚಿಕ್ಕೂಲಿಕೆರೆ ಬಡಾವಣೆ, ಚನ್ನಗಿರಿ

ವಿಶೇಷ ಸೂಚನೆ:– ಅರ್ಜಿದಾರರ ತಾತ್ಕಾಲಿಕ ಪಟ್ಟಿಯಲ್ಲಿ ಅರ್ಹ ಮತ್ತು ಅನರ್ಹ ಅರ್ಜಿಗಳ ವಿವರಗಳನ್ನು ಸ್ಪಷ್ಟವಾಗಿ ಪ್ರಕಟಿಸಲಾಗಿದೆ. ಪ್ರಕಟಣೆಯಲ್ಲಿ ಅನರ್ಹ ಅರ್ಜಿದಾರರ ಪಟ್ಟಿಯಲ್ಲಿನ ಅರ್ಜಿದಾರರು ಆರಂಭಿಕ ಠೇವಣಿ ಹಾಗೂ ಪ್ರವರ್ಗವಾರು ದಾಖಲಾತಿಯ ಮಾಹಿತಿಯನ್ನು ಸಲ್ಲಿಸದ ಕಾರಣ ಅನರ್ಹ ಪಟ್ಟಿಯಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ ಬೆಂಗಳೂರು ಇಲ್ಲಿ ಸಲ್ಲಿಸಲು ಕೋರಲಾಗಿದೆ. ಇಲ್ಲವಾದಲ್ಲಿ ತಮ್ಮ ಅರ್ಜಿಗಳನ್ನು ಲಾಟರಿ ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗುವುದಿಲ್ಲ.

ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/1371/Zenkar/2022-23

ಸಂಕ್ಷಿಪ್ತ ಸುದ್ದಿ

ಸೆಂಚುರಿ ಕ್ಲಬ್‌ಗೆ ನೋಟಿಸ್

ಬೆಂಗಳೂರು: ಆಡಳಿತಾಧಿಕಾರಿ ನೇಮಿಸುವ ವಿಷಯದಲ್ಲಿ ಲಿಖಿತ ಹೇಳಿಕೆ ಸಲ್ಲಿಸುವಂತೆ ಸೆಂಚುರಿ ಕ್ಲಬ್‌ಗೆ ಸಹಕಾರ ಇಲಾಖೆ ನೋಟಿಸ್ ನೀಡಿದೆ.

ಕ್ಲಬ್ ವಿರುದ್ಧದ ದೂರುಗಳ ಬಗ್ಗೆ ಸಹಕಾರ ಸಂಘಗಳ ಉಪನಿಬಂಧಕರು ವರದಿ ಸಲ್ಲಿಸಿದ್ದು, 'ಮೂರು ಆರೋಪಗಳಲ್ಲಿ ಎರಡು ಆರೋಪಗಳು ಸಾಬೀತಾಗಿದ್ದು, ಆಡಳಿತಾಧಿಕಾರಿ ನೇಮಿಸಬೇಕು' ಎಂದು ಶಿಫಾರಸು ಮಾಡಿದ್ದಾರೆ. ಈ ವಿಷಯದಲ್ಲಿ 15 ದಿನಗಳ ಒಳಗೆ ಲಿಖಿತ ಹೇಳಿಕೆಯನ್ನು ಕ್ಲಬ್ ಸಲ್ಲಿಸಬೇಕು. ಇಲ್ಲದಿದ್ದರೆ ಉತ್ತರ ಏನೂ ಇಲ್ಲ ಎಂದು ಭಾವಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಕ್ಲಬ್‌ನ ಅಧ್ಯಕ್ಷ ಮತ್ತು ಕಾರ್ಯದರ್ಶಿಗೆ ನೀಡಿರುವ ನೋಟಿಸ್‌ನಲ್ಲಿ ತಿಳಿಸಿದೆ.

ಬಿಎಂಟಿಸಿ ಪಾಸ್ ಅವಧಿ ವಿಸ್ತರಣೆ

ಬೆಂಗಳೂರು: ವಿದ್ಯಾರ್ಥಿ ರಿಯಾಯಿತಿ ಪಾಸ್‌ಗಳನ್ನು ಇದೇ 18ರಿಂದ ವಿತರಿಸಲಾಗುತ್ತಿದ್ದು, ಸದ್ಯಕ್ಕೆ ಹಳೆಯ ಪಾಸ್ ಅಥವಾ ಕಾಲೇಜಿನ ಶುಲ್ಕ ರಸೀದಿ ತೋರಿಸಿ ವಿದ್ಯಾರ್ಥಿಗಳು ಪ್ರಯಾಣಿಸಲು ಬಿಎಂಟಿಸಿ ಅವಕಾಶ ಕಲ್ಪಿಸಿದೆ.

ನಗರದ 100 ಬೆಂಗಳೂರು ಒನ್ ಕೇಂದ್ರಗಳಲ್ಲಿ ಬೆಳಿಗ್ಗೆ 8ರಿಂದ ಸಂಜೆ 6.30ರವರೆಗೆ ಪಾಸ್ ವಿತರಿಸಲಾಗುವುದು. ಈ ಸಂಬಂಧದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಪ್ರಾಥಮಿಕ, ಪ್ರೌಢಶಾಲೆ, ಪಿಯುಸಿ, ಐಟಿಐ, ಡಿಪ್ಲೊಮಾ ಮತ್ತು ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳು 2021-22ನೇ ಸಾಲಿನ ಕಾಲೇಜಿನ ಶುಲ್ಕ ರಸೀದಿ ಮತ್ತು ಗುರುತಿನ ಚೀಟಿ ತೋರಿಸಿ ಜುಲೈ 31ರ ವರೆಗೆ ಪ್ರಯಾಣಿಸಬಹುದು.

ಪದವಿ (ಪ್ರಥಮ ವರ್ಷ ಹೊರತುಪಡಿಸಿ), ಸ್ನಾತಕೋತ್ತರ ಪದವಿ, ತಾಂತ್ರಿಕ ಮತ್ತು ವೈದ್ಯಕೀಯ, ಸಂಜೆ ಕಾಲೇಜು, ಪಿಎಚ್‌.ಡಿ. ಕಾಲೇಜುಗಳ ವಿದ್ಯಾರ್ಥಿಗಳಿಗೆ ಆಗಸ್ಟ್ 31ರವರೆಗೆ ಹಳೆಯ ಪಾಸ್ ತೋರಿಸಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಬಿಎಂಟಿಸಿ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗಬಯಸುವ ಅಭ್ಯರ್ಥಿಗಳಿಗೆ ಉಚಿತ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಬೆಂಗಳೂರಿನ ಎನ್‌ಲೈಟ್ ಅಕಾಡೆಮಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ವಿಜಯನಗರದ ವತಿಯಿಂದ ಆರು ತಿಂಗಳವರೆಗೆ ಉಚಿತ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಜುಲೈ 25ರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ: 7892585422

ಫಲಾನುಭವಿಗಳು ಬಾರದಿದ್ದರೆ ಖರೀದಿಸಿದ ಲಸಿಕೆ ವ್ಯರ್ಥವಾಗುವ ಸಾಧ್ಯತೆ

ಗೊಂದಲದಲ್ಲಿ ಖಾಸಗಿ ಕೇಂದ್ರಗಳು

• ವರುಣ ಹೆಗಡೆ

ಬೆಂಗಳೂರು: ಸರ್ಕಾರವು 18 ವರ್ಷಗಳು ಮೇಲ್ಪಟ್ಟವರಿಗೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿಯೇ ಉಚಿತವಾಗಿ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗಳ ವಿತರಣೆ ಪ್ರಾರಂಭಿಸಿರುವುದರಿಂದ ಖಾಸಗಿ ಆಸ್ಪತ್ರೆಗಳು ಗೊಂದಲಕ್ಕೆ ಒಳಗಾಗಿವೆ. ಬಹುತೇಕ ಕೇಂದ್ರಗಳಲ್ಲಿ ಲಸಿಕೆಯ ದಾಸ್ತಾನು ವ್ಯರ್ಥವಾಗುವ ಸಾಧ್ಯತೆಯಿದೆ.

ಈವರೆಗೆ 18ರಿಂದ 59 ವರ್ಷದವರಿಗೆ ಖಾಸಗಿ ಕೇಂದ್ರಗಳಲ್ಲಿ ಮಾತ್ರ ಮುನ್ನೆಚ್ಚರಿಕೆ ಡೋಸ್‌ಗಳನ್ನು ವಿತರಿಸಲಾಗುತ್ತಿತ್ತು. 60 ವರ್ಷಗಳು ಮೇಲ್ಪಟ್ಟವರು, ಆರೋಗ್ಯ ಕಾರ್ಯಕರ್ತರು ಹಾಗೂ ಕೋವಿಡ್ ಯೋಧರಿಗೆ ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತಿತ್ತು. ಸ್ವಾತಂತ್ರ್ಯದ ಅಮೃತಮಹೋತ್ಸವದ ಪ್ರಯುಕ್ತ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಸರ್ಕಾರಿ ಕೇಂದ್ರಗಳಲ್ಲಿ ಶುಕ್ರವಾರದಿಂದ ಉಚಿತವಾಗಿ ಲಸಿಕೆ ವಿತರಣೆ ಪ್ರಾರಂಭಿಸಲಾಗಿದೆ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಹಣ ಪಾವತಿಸಿ, ಲಸಿಕೆ ಪಡೆಯುವವರ ಸಂಖ್ಯೆ ಇಳಿಮುಖವಾಗುವ ಸಾಧ್ಯತೆಯಿದೆ.

18ರಿಂದ 60 ವರ್ಷದೊಳಗಿನವರಿಗೆ ಸರ್ಕಾರದ ಆದೇಶದ ಅನ್ವಯ ಕಳೆದ ಏ.10ರಿಂದ ಮುನ್ನೆಚ್ಚರಿಕೆ ಡೋಸ್ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿತ್ತು. ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗಳನ್ನು ಲಸಿಕೆ ತಯಾರಿಕಾ ಕಂಪನಿಗಳು ₹225ಕ್ಕೆ ಖಾಸಗಿ ಆಸ್ಪತ್ರೆಗಳಿಗೆ ಒದಗಿಸುತ್ತಿದ್ದವು. ಸೇವಾ ಶುಲ್ಕ ಸಹಿತ ಒಂದು ಡೋಸ್ ಲಸಿಕೆಗೆ ಆಸ್ಪತ್ರೆಗಳು ₹ 386 ಪಡೆಯುತ್ತಿದ್ದವು.

ಕೇಂದ್ರಗಳ ಸಂಖ್ಯೆ ಇಳಿಕೆ: ನಗರದಲ್ಲಿ 150ಕ್ಕೂ ಅಧಿಕ ಖಾಸಗಿ ಕೇಂದ್ರಗಳಲ್ಲಿ ಮುನ್ನೆಚ್ಚರಿಕೆ ಡೋಸ್‌ಗಳನ್ನು ವಿತರಿಸಲಾಗುತ್ತಿತ್ತು. ಸರ್ಕಾರಿ ಕೇಂದ್ರಗಳಲ್ಲಿ ಉಚಿತ ವಿತರಣೆ ಪ್ರಾರಂಭವಾಗುತ್ತಿದ್ದಂತೆ ಖಾಸಗಿ ಕೇಂದ್ರಗಳ ಸಂಖ್ಯೆ ಇಳಿಕೆಯಾಗಿದೆ. ಕೋವಿನ್ ಪೋರ್ಟಲ್‌ನಲ್ಲಿ ಲಸಿಕೆಯನ್ನು ಮುಂಚಿತವಾಗಿ ಕಾಯ್ದಿರಿಸಲು ಅವಕಾಶವಿದ್ದರೂ ಫಲಾನುಭವಿಗಳು ನಿರಾಸಕ್ತಿ ತಾಳಿದ್ದಾರೆ. ವೈದೇಹಿ, ಮಲ್ಲಿಗೆ, ಮಣಿಪಾಲ್, ಸುಗುಣ, ಅಪೋಲೊ, ಫೋರ್ಟಿಸ್ ಸೇರಿದಂತೆ ಪ್ರಮುಖ ಆಸ್ಪತ್ರೆಗಳಲ್ಲಿಯೇ ಲಸಿಕೆ ಕಾಯ್ದಿರಿಸುವ ಪೋರ್ಟಲ್‌ನಲ್ಲಿ ನಿಗದಿಪಡಿಸಲಾದ ಬಹುತೇಕ ಎಲ್ಲ ಸ್ಲಾಟ್‌ಗಳು ಖಾಲಿ ಉಳಿದಿವೆ. ಸದ್ಯ ಪ್ರಮುಖ ಖಾಸಗಿ ಆಸ್ಪತ್ರೆಗಳು ಐದು ಸಾವಿರದಷ್ಟು ಡೋಸ್‌ಗಳ ದಾಸ್ತಾನು ಹೊಂದಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 18ರಿಂದ 44 ವರ್ಷದವರಲ್ಲಿ 56.23 ಲಕ್ಷ ಮಂದಿ ಎರಡು ಡೋಸ್ ಲಸಿಕೆ ಪಡೆದಿದ್ದಾರೆ. 45 ವರ್ಷಗಳು ಮೇಲ್ಪಟ್ಟವರಲ್ಲಿ 26.34 ಲಕ್ಷಕ್ಕೂ ಅಧಿಕ ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. 18ರಿಂದ 60 ವರ್ಷದೊಳಗಿನವರಲ್ಲಿ 3.24 ಲಕ್ಷ ಮಂದಿ ಮಾತ್ರ ಮೂರನೇ ಡೋಸ್ ಲಸಿಕೆ ಪಡೆದಿದ್ದಾರೆ. 60 ವರ್ಷಗಳು ಮೇಲ್ಪಟ್ಟವರಲ್ಲಿ 3.62 ಲಕ್ಷ ಮಂದಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ಹಾಕಲಾಗಿದೆ.

'ಮುನ್ನೆಚ್ಚರಿಕೆ ಡೋಸ್ ವಿತರಣೆ ಅವಧಿಯನ್ನು 6 ತಿಂಗಳಿಗೆ ಇಳಿಕೆ ಮಾಡಿದ ಬಳಿಕ ಲಸಿಕೆಗೆ ಬೇಡಿಕೆ ಹೆಚ್ಚಲಿದೆ ಎಂದು ಅಧಿಕ ಪ್ರಮಾಣದಲ್ಲಿ ಲಸಿಕೆ ಖರೀದಿಸಲಾಗಿತ್ತು. ಸರ್ಕಾರವು ಈಗ ಏಕಾಏಕಿ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡುವುದಾಗಿ ಆದೇಶ ಹೊರಡಿಸಿದೆ. ಇದರಿಂದ ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಪಡೆಯಲು ಫಲಾನುಭವಿಗಳು ಬರುವುದಿಲ್ಲ. ಇರುವ ದಾಸ್ತಾನನ್ನು ಏನು ಮಾಡುವುದು ಎಂದು ತಿಳಿಯದಾಗಿದೆ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ನಿಕಟಪೂರ್ವ ಅಧ್ಯಕ್ಷ ಡಾ.ಆರ್. ರವೀಂದ್ರ ತಿಳಿಸಿದರು.



ಖಾಸಗಿ ವ್ಯವಸ್ಥೆಯಡಿ ಮಾತ್ರ ಮುನ್ನೆಚ್ಚರಿಕೆ ಡೋಸ್‌ಗಳನ್ನು ವಿತರಿಸುತ್ತಿದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಖರೀದಿಸಲಾಗಿತ್ತು. ಈಗ ದಾಸ್ತಾನು ವ್ಯರ್ಥವಾಗುವ ಸಾಧ್ಯತೆಯಿದೆ.
ಡಾ. ಪ್ರಸನ್ನ ಎಚ್.ಎಂ.
ಫನಾ ಅಧ್ಯಕ್ಷ



ಲಸಿಕೆಯನ್ನು ಉಚಿತವಾಗಿ ನೀಡುವ ಬಗ್ಗೆ ಸರ್ಕಾರ ಮೊದಲೇ ತಿಳಿಸಿದ್ದರೆ ನಾವು ಖರೀದಿಸುತ್ತಿರಲಿಲ್ಲ. ಜನ ಬಾರದಿದ್ದರೆ ಖರೀದಿಸಿದ ಲಸಿಕೆ ಅವಧಿ ಮೀರಿ, ವ್ಯರ್ಥವಾಗಲಿದೆ.
ಡಾ.ಆರ್. ರವೀಂದ್ರ,
ಸುಗುಣ ಆಸ್ಪತ್ರೆ ಮುಖ್ಯಸ್ಥ



ನಗರದಲ್ಲಿ ಕೋವಿಡ್ ಲಸಿಕೆ ವಿತರಣೆ ವಿವರ

- **1.11** ಕೋಟಿ — ಈವರೆಗೆ ಮೊದಲ ಡೋಸ್ ಪಡೆದವರು
- **1.07** ಕೋಟಿ — ಎರಡನೇ ಡೋಸ್ ಪಡೆದವರು
- **10.21** ಲಕ್ಷ — ಮೂರನೇ ಡೋಸ್ ಪಡೆದವರು
- **541** ಲಸಿಕೆ ವಿತರಿಸುತ್ತಿರುವ ಸರ್ಕಾರಿ ಕೇಂದ್ರಗಳು
- **115** ಲಸಿಕೆ ವಿತರಿಸುತ್ತಿರುವ ಖಾಸಗಿ ಕೇಂದ್ರಗಳು

ಸಸಿ ಉಚಿತ ವಿತರಣೆ

ಬೆಂಗಳೂರು: ಬಿಬಿಎಂಪಿ ಅರಣ್ಯ ವಿಭಾಗದ ವತಿಯಿಂದ ವಲಯಗಳಲ್ಲಿರುವ ಸಸ್ಯ ಕ್ಷೇತ್ರಗಳಲ್ಲಿ ವಿವಿಧ ಜಾತಿಯ ಸಸಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

ಕೂಡ್ಲು (9480685039), ಅಟ್ಟೂರು (9480685196), ಜ್ಞಾನಭಾರತಿ ಆವರಣ (9164042566), ಮಲ್ಲತ್ತಹಳ್ಳಿ (9164042566), ಕೆಂಪಾಪುರ (9480685541), ದೊಡ್ಡಬಸ್ತಿ (9480685541) ಸಸ್ಯ ಕ್ಷೇತ್ರಗಳಲ್ಲಿ ಮನವಿ ಪತ್ರವನ್ನು ನೀಡಿ ಸಸಿಗಳನ್ನು ಪಡೆಯಬಹುದಾಗಿದೆ ಎಂದು ಉಪ ಅರಣ್ಯಸಂರಕ್ಷಣಾಧಿಕಾರಿ ಸರಿನಾ ಸಿಕ್ಕಲಿಗರ್ ತಿಳಿಸಿದ್ದಾರೆ.

ತನಿಖೆ ಮೇಲೆ ಈಶ್ವರಪ್ಪ ಪ್ರಭಾವ: ರಾಜ್ಯಪಾಲರಿಗೆ ಪತ್ರ

ಒಂದನೇ ಪುಟದಿಂದ...

'ಈ ಪ್ರಕರಣದಿಂದ ಕೇವಲ 15 ದಿನಗಳಲ್ಲಿ ಹೊರಗೆ ಬರುತ್ತೇನೆ. ಆರೋಪ ಮುಕ್ತನಾಗುತ್ತೇನೆ ಎಂದು ಕೆ.ಎಸ್. ಈಶ್ವರಪ್ಪ ಅವರು ಪದೇಪದೇ ಹೇಳಿಕೆ ನೀಡುತ್ತಿದ್ದಾರೆ. ಪ್ರಕರಣವು ತನಿಖೆ ಹಂತದಲ್ಲಿ ಇದ್ದರೂ ಅವರು ಇಷ್ಟೊಂದು ಆತ್ಮವಿಶ್ವಾಸ ವ್ಯಕ್ತಪಡಿಸುವುದು ಸಂಶಯಾಸ್ಪದವಾಗಿದೆ. ಅವರು ಹಣ ಹಾಗೂ ತಮ್ಮ ರಾಜಕೀಯ ಬಲ ಪ್ರಯೋಗಿಸಿ, ಪ್ರಕರಣ ಮುಚ್ಚಿಹಾಕುವ ಸಾಧ್ಯತೆ ಇದೆ' ಎಂದೂ ರೇಣುಕಾ ಆತಂಕ ತೋಡಿಕೊಂಡಿದ್ದಾರೆ.

'ನನ್ನ ಪತಿ ಹಿಂಡಲಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 108 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಎಲ್ಲರಿಗೂ ತಿಳಿದ ವಿಷಯ. ಇದರ ಬಿಲ್ ನೀಡಲು ಕೆ.ಎಸ್. ಈಶ್ವರಪ್ಪ ಹಾಗೂ ಅವರ ಆಪ್ತರು ಶೇ 40ರಷ್ಟು ಕಮಿಷನ್ ಕೇಳಿದ್ದರಿಂದ ಎಂಬುದು ಮಾಧ್ಯಮಗಳಲ್ಲೂ ಬಹಿರಂಗವಾಗಿದೆ. ಆದರೂ ಈಶ್ವರಪ್ಪ ಅವರು ಆರೋಪ ಮುಕ್ತನಾಗುವುದಾಗಿ ಧೈರ್ಯದಿಂದ ಹೇಳುತ್ತಿದ್ದಾರೆ. ಇದು ನಮಗೆ ಬಹಳ ಆಶ್ಚರ್ಯ ಉಂಟುಮಾಡಿದೆ' ಎಂದು ತಿಳಿಸಿದ್ದಾರೆ.

'ಯಾರು, ಎಷ್ಟೇ ಪ್ರಭಾವಿಯಾದರೂ ಕಾನೂನು ಎಲ್ಲರಿಗೂ ಒಂದೇ. ಆದ್ದರಿಂದ ಪಾರದರ್ಶಕ ತನಿಖೆ ನಡೆಸಲು ತನಿಖಾಧಿಕಾರಿಗೆ ಸೂಚನೆ ನೀಡಬೇಕು' ಎಂದೂ ಅವರು ಕೋರಿದ್ದಾರೆ.

7000ಕ್ಕೂ ಹೆಚ್ಚು ಶಿಕ್ಷಕರ ಹುದ್ದೆಗಳು ಖಾಲಿ

ಬೆಂಗಳೂರು: ರಾಜ್ಯದಲ್ಲಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರ ನೇಮಕಾತಿಗೆ ಐದು ವರ್ಷಗಳಿಂದ ಸರ್ಕಾರ ಅನುಮತಿ ನೀಡಿಲ್ಲ ಎಂದು ಕರ್ನಾಟಕ ರಾಜ್ಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಆರೋಪಿಸಿದೆ.

ರಾಜ್ಯದಲ್ಲಿ 3,740 ಅನುದಾನಿತ ಪ್ರೌಢಶಾಲೆಗಳು ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಹುತೇಕ ಎಲ್ಲವೂ ಕನ್ನಡ ಮಾಧ್ಯಮ ಶಾಲೆಗಳಾಗಿವೆ. 10 ಲಕ್ಷಕ್ಕೂ ಹೆಚ್ಚು ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ರಾಜ್ಯ ಸರ್ಕಾರ 2016ರಿಂದ ಇದುವರೆಗೂ ಶಿಕ್ಷಕರ ನೇಮಕಕ್ಕೆ ಆದೇಶ ನೀಡದೇ ಇರುವುದರಿಂದ 7,045 ಶಿಕ್ಷಕರ ಹುದ್ದೆಗಳು ಖಾಲಿ ಇವೆ ಎಂದು ಒಕ್ಕೂಟದ ಅಧ್ಯಕ್ಷ ವೈ.ಎಚ್. ಹುಚ್ಚಯ್ಯ ಮಾಹಿತಿ ನೀಡಿದರು.

'ಗ್ರಾಮೀಣ ಭಾಗದಲ್ಲಿರುವ ಅನುದಾನಿತ ಪ್ರೌಢಶಾಲೆಗಳಲ್ಲಿ ಬಡ ಮತ್ತು ಮಧ್ಯಮ ವರ್ಗದ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ಶಾಲೆಗಳಲ್ಲಿ ಗಣಿತ, ವಿಜ್ಞಾನ, ಇಂಗ್ಲಿಷ್ ಭಾಷೆಯ ಶಿಕ್ಷಕರಿಲ್ಲದೇ ಗುಣಾತ್ಮಕ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಶಾಲೆಗಳು ಮುಚ್ಚುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಶಿಕ್ಷಕರ ನೇಮಿಸಿಕೊಳ್ಳಲು ಅನುಮತಿ ನೀಡಬೇಕು ಎಂದು ಮುಖ್ಯಮಂತ್ರಿ ಸೇರಿದಂತೆ ಶಿಕ್ಷಣ ಸಚಿವ ಹಾಗೂ ಇಲಾಖೆ ಅಧಿಕಾರಿಗಳ ಭೇಟಿ ಮಾಡಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಬೇರೆ ಮಾರ್ಗವಿಲ್ಲದೇ ನ್ಯಾಯಾಲಯದ ಮೊರೆ ಹೋಗಬೇಕಿದೆ' ಎಂದು ತಿಳಿಸಿದರು.

'ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಖಾಸಗಿ ಶಿಕ್ಷಣ ಸಂಸ್ಥೆಗಳ ಹಣ ಗಳಿಸುವ ಉದ್ದೇಶದಿಂದ ಕೆಲಸ ಮಾಡುತ್ತಿದ್ದಾರೆ ಎಂದು ಬೇಜವಾಬ್ದಾರಿ ಹೇಳಿಕೆ ನೀಡುತ್ತಿದ್ದಾರೆ. ಶಿಕ್ಷಣ ಇಲಾಖೆಯು ಅನುದಾನಿತ ಶಿಕ್ಷಣ ಸಂಸ್ಥೆಗಳ ಶೋಷಣೆ ಮಾಡುತ್ತಿದೆ' ಎಂದು ಆರೋಪಿಸಿದರು.

3 ದಿನ ಹೋಟೆಲ್‌ನಲ್ಲಿ ಬೀಡುಬಿಡುವಂತೆ ಸೂಚನೆ • ರಾಷ್ಟ್ರಪತಿ ಚುನಾವಣೆ: ಅಣಕು ಮತದಾನ

ಶಾಂಗ್ರಿಲಾದಲ್ಲಿ ಶಾಸಕರಿಗೆ ‘ದಿಗ್ಬಂಧನ’!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 18 ರಂದು ನಡೆಯುವ ರಾಷ್ಟ್ರಪತಿ ಚುನಾವಣೆ ಮುಗಿಯುವವರೆಗೆ ನಗರದ ಶಾಂಗ್ರಿಲಾ ಹೋಟೆಲಿನಲ್ಲಿ ಬೀಡು ಬಿಡುವಂತೆ ಬಿಜೆಪಿ ತನ್ನ ಎಲ್ಲ ಶಾಸಕರಿಗೂ ಸೂಚನೆ ನೀಡಿದೆ.

ಅತಿವೃಷ್ಟಿಯಿಂದ ಇಡೀ ರಾಜ್ಯವೇ ಸಂಕಷ್ಟಕ್ಕೆ ತುತ್ತಾಗಿರುವಾಗ ಮೂರು ದಿನ ನಗರದ ಹೋಟೇಲಿನಲ್ಲಿ ‘ಕಡ್ಡಾಯ’ವಾಗಿ ಉಳಿಯಬೇಕಾಗಿ ಬಂದಿರುವುದು ಶಾಸಕರಿಗೆ ನುಂಗಲಾರದ ತುತ್ತಾಗಿದೆ. ಶನಿವಾರವೇ ಶಾಂಗ್ರಿಲಾಗೆ ಬಂದು ಸೇರುವಂತೆ ಮುಖ್ಯಸಚೇತಕ ಎಂ. ಸತೀಶ್ ರೆಡ್ಡಿ ಅವರು ಈಗಾಗಲೇ ಎಲ್ಲ ಶಾಸಕರಿಗೂ ಸಂದೇಶ ಕಳುಹಿಸಿದ್ದಾರೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಯಾವ ರೀತಿ ಮತದಾನ ಮಾಡಬೇಕು ಎಂಬುದರ ಬಗ್ಗೆ ಇದೇ ಹೋಟೇಲ್‌ನಲ್ಲಿ ಭಾನುವಾರ ಅಣಕು ಮತದಾನ ನಡೆಸಲಾಗುವುದು. ಇದಕ್ಕಾಗಿ ದೆಹಲಿಯಲ್ಲಿ ಮೂವರು ನಾಯಕರಿಗೆ ತರಬೇತಿ ನೀಡಿ ಕಳುಹಿಸಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

‘ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮು ಅವರಿಗೆ ಸೋಮವಾರ ನಡೆಯುವ ಚುನಾವಣೆಯಲ್ಲಿ ಮತದಾನ ಮಾಡುತ್ತೇವೆ. ಅದಕ್ಕಾಗಿ ಅಣಕು ಮತದಾನದ ಅಗತ್ಯವಿಲ್ಲ. ಹೋಟೇಲ್‌ನಲ್ಲಿ ಇಟ್ಟುಕೊಂಡು ಸಾಧಿಸುವುದಾದರೂ ಏನು? ಅಷ್ಟಕ್ಕೂ ರಾಷ್ಟ್ರಪತಿ ಚುನಾವಣೆ ವಿಪ್ ಜಾರಿ ಮಾಡುವಂತಿಲ್ಲ’ ಎಂದು ಶಾಸಕರೊಬ್ಬರು ತಿಳಿಸಿದರು.

‘ಈ ಚುನಾವಣೆಯಲ್ಲಿ ಮತಗಟ್ಟೆ ಅಧಿಕಾರಿಗೆ ಶಾಸಕರು ಮತಪತ್ರವನ್ನು ತೋರಿಸುವಂತಿಲ್ಲ. ಚುನಾವಣಾ ಆಯೋಗ ರಹಸ್ಯ ಮತದಾನದ ಮೂಲಕ ಚುನಾವಣೆ ನಡೆಸುವುದಾಗಿ ಈಗಾಗಲೇ ಹಲವು ಬಾರಿ ತಿಳಿಸಿದೆ. ದ್ರೌಪದಿ ಮುರ್ಮು ಗೆಲ್ಲುವುದರಲ್ಲಿ ಸಂಶಯವೂ ಇಲ್ಲ. ಎನ್‌ಡಿಎಯೇತರ ಪಕ್ಷಗಳೂ ಅವರನ್ನು ಬೆಂಬಲಿಸಿದೆ. ಆದ್ದರಿಂದ ಅತಿವೃಷ್ಟಿ ಈ ಸಂದರ್ಭದಲ್ಲಿ ಮೂರು ದಿನ ಬೆಂಗಳೂರಿನಲ್ಲೇ ಉಳಿಯಬೇಕು ಎಂದು ಕಡ್ಡಾಯ-ಗೊಳಿಸುವುದು ಸರಿಯಲ್ಲ’ ಅವರು ಹೇಳಿದರು.

‘ಬೇರೆ ಜಿಲ್ಲೆಗಳು ಮಾತ್ರವಲ್ಲ ಬೆಂಗಳೂರು ನಗರದಲ್ಲೂ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಮಳೆಯಿಂದ ತೊಂದರೆಯುಂಟಾಗಿದೆ. ರಸ್ತೆಗಳು ಹಾಳಾಗಿವೆ. ಅಲ್ಲಿ ಕೆಲಸ ಮಾಡಿಸಬೇಕಾಗಿದೆ. ಯಾವ ಸಂದರ್ಭದಲ್ಲಿ ಬೇಕಾದರೂ ಮಳೆ ಬಂದು ತಗ್ಗು ಪ್ರದೇಶದಲ್ಲಿ ಸಮಸ್ಯೆ ಉಂಟಾಗಬಹುದು. ಆಗ ನಾವು ಜನರ ಸಹಾಯಕ್ಕೆ ಧಾವಿಸದೇ ಇದ್ದರೆ ಜನರ ಆಕ್ರೋಶಕ್ಕೆ ಗುರಿಯಾಗಬೇಕಾಗು-ತ್ತದೆ’ ಎಂದು ಬೆಂಗಳೂರಿನ ಬಿಜೆಪಿ ಶಾಸಕರೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ಇಲ್ಲೇ ಇರಬೇಕು ಎಂದು ಕಡ್ಡಾಯ ಮಾಡಿರುವುದು ಸರಿಯಲ್ಲ: ಶಾಸಕರ ಬೇಸರ
- ಮಳೆ: ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕು- ಅಸಮಾಧಾನ

‘ಮಿಷನ್ 150’ ಗುರಿ ತಲುಪಲು ಸಂಕಲ್ಪ

ಬೆಂಗಳೂರು: ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ‘ಮಿಷನ್ 150’ ಗುರಿಯನ್ನು ತಲುಪಲು ಅನುಸರಿಸಬೇ-ಕಾದ ಕಾರ್ಯತಂತ್ರಗಳ ಬಗ್ಗೆ ಶುಕ್ರವಾರ ನಡೆದ ಚಿಂತನ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು.

ದೇವನಹಳ್ಳಿ ಸಮೀಪದ ರೆಸಾರ್ಟ್‌ವೊಂದರಲ್ಲಿ ಸುಮಾರು 9 ರಿಂದ 10 ಗಂಟೆಗಳ ಕಾಲ ನಡೆದ ಈ ಸಭೆಯಲ್ಲಿ ಸೋಷಿಯಲ್ ಎಂಜಿನಿಯರಿಂಗ್, ಯಾವ ಜಿಲ್ಲೆಗಳಲ್ಲಿ ಪಕ್ಷದ ಶಕ್ತಿ ಸಾಮರ್ಥ್ಯ ಹೇಗಿದೆ ಮತ್ತು ದುರ್ಬಲವಾಗಿರುವ ಕಡೆ ಏನು ಮಾಡಬೇಕು, ಸರ್ಕಾರದಲ್ಲಿ ಆಡಳಿತ ಸುಧಾರಣೆ, ಸಂಘಟನೆ ಬಲಪಡಿಸುವ ಬಗ್ಗೆ ಗಂಭೀರ ಚರ್ಚೆ ನಡೆಸಲಾಯಿತು ಎಂದು ಮೂಲಗಳು ತಿಳಿಸಿವೆ.

ರಾಜ್ಯ ವಿವಿಧ ಜಿಲ್ಲೆಗಳ ಸ್ಥಿತಿಗತಿಯ ಬಗ್ಗೆ ಸಿ.ಟಿ.ರವಿ, ಸುನಿಲ್‌ಕುಮಾರ್, ಎನ್. ರವಿಕುಮಾರ್ ವರದಿ ಒಪ್ಪಿಸಿದರು. ವಿವಿಧ ಜಿಲ್ಲೆಗಳಲ್ಲಿ ಪಕ್ಷಕ್ಕೆ ಅನುಕೂಲವಾದ ಕ್ಷೇತ್ರಗಳು ಯಾವುವು ಮತ್ತು ದುರ್ಬಲವಾಗಿರುವ ಕ್ಷೇತ್ರಗಳು ಯಾವುವುದ ಎಂಬ ಬಗ್ಗೆ ಮಾಹಿತಿ ನೀಡಿದರು. ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ಬಗ್ಗೆಯೂ ವಿಶ್ಲೇಷಣೆ ನಡೆಸಲಾಯಿತು. ದುರ್ಬಲ ಕ್ಷೇತ್ರಗಳಲ್ಲಿ ಗೆಲ್ಲಲು ಅನುಸರಿಸಬೇಕಾದ ಕಾರ್ಯ-ತಂತ್ರಗಳು, ಅಲ್ಲಿ ಸರಿಪಡಿಸಬೇಕಾಗಿ-ರುವ ಅಂಶಗಳ ಬಗ್ಗೆ ಚರ್ಚಿಸಲಾಯಿತು ಎಂದು ಮೂಲಗಳು ಹೇಳಿವೆ.

ಇದೇ 28ಕ್ಕೆ ಸರ್ಕಾರಕ್ಕೆ ಒಂದು ವರ್ಷ ತುಂಬಲಿದ್ದು, ಈ ಅವಧಿಯಲ್ಲಿ ಹಮ್ಮಿಕೊಂಡ ಜನಪರ ಕಾರ್ಯಕ್ರಮಗಳನ್ನು ಹಳ್ಳಿ ಹಳ್ಳಿಗೆ ತಲುಪಿಸುವ ಬಗ್ಗೆಯೂ ಚರ್ಚೆ ನಡೆಯಿತು.



ಸಭೆಯಲ್ಲಿ ಶಾಸಕ ಬಿ.ಎಸ್‌.ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಇದ್ದರು

ರಾಷ್ಟ್ರೀಯ ಶಿಕ್ಷಣ ನೀತಿ ಶಿಫಾರಸು: ಈಗಾಗಲೇ ಉತ್ತರಾಖಂಡದಲ್ಲಿ ಜಾರಿ

ಅಂಗನವಾಡಿ ಕಾರ್ಯಕರ್ತೆಗೆ ಶಿಕ್ಷಕಿ ಸ್ಥಾನ

• ಚಂದ್ರಹಾಸ ಹಿರೇಮಳಲಿ


ಬೆಂಗಳೂರು: ಅಂಗನವಾಡಿಗಳ ಜತೆಗೆ ಒಂದು ಮತ್ತು ಎರಡನೇ ತರಗತಿಗಳನ್ನು ಸಂಯೋಜಿಸಿ ಶಾಲಾ ಸಾಂಸ್ಥಿಕ ಸ್ವರೂಪ ನೀಡಲು, ಅಂಗನವಾಡಿ ಕಾರ್ಯಕರ್ತೆಯರನ್ನು ಶಿಕ್ಷಕಿಯರೆಂದು ಪರಿಗಣಿಸಲು ರಾಷ್ಟ್ರೀಯ ಶಿಕ್ಷಣ ನೀತಿ ಶಿಫಾರಸು ಮಾಡಿದೆ. ಉತ್ತರಾಖಂಡ ರಾಜ್ಯವು ಇದನ್ನು ಜಾರಿ ಮಾಡಿದ್ದು, ಕರ್ನಾಟಕವೂ ಅನುಷ್ಠಾನಕ್ಕೆ ಮುಂದಾಗಿದೆ.

ಎನ್‌ಇಪಿ ಆಶಯವನ್ನು ದೇಶದ ಎಲ್ಲ ರಾಜ್ಯಗಳೂ ಅನುಷ್ಠಾನಕ್ಕೆ ತಂದರೆ 13,13,935 ಅಂಗನವಾಡಿ ಕಾರ್ಯ-ಕರ್ತೆಯರು ಶಿಕ್ಷಕಿಯರ ಗೌರವಕ್ಕೆ ಪಾತ್ರ-ರಾಗಲಿದ್ದಾರೆ. ಅವರು ಪಡೆಯುತ್ತಿರುವ ₹10 ಸಾವಿರ ಗೌರವಧನ ವೇತನವಾಗಿ ಪರಿವರ್ತನೆಯಾಗಲಿದೆ. ಜತೆಗೆ ಸೇವಾ ಭದ್ರತೆಯೂ ದೊರಕಲಿದೆ. ಈಗಾಗಲೇ ಉತ್ತರಾಖಂಡ ರಾಜ್ಯ ಎನ್‌ಇಪಿಯ 1ನೇ ಅಧ್ಯಾಯವನ್ನು ಜಾರಿಗೊಳಿಸಿದ್ದು, ಅಲ್ಲಿನ 4,457 ಅಂಗನವಾಡಿಗಳಿ-ಗೆ ಶಾಲಾ ಸಾಂಸ್ಥಿಕ ಸ್ವರೂಪ ನೀಡಿದ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

3 ವರ್ಷದಿಂದ 6 ವರ್ಷದ ಒಳಗಿನ ಮಕ್ಕಳ ಕಲಿಕೆಗೆಂದು ಕಾರ್ಯಕರ್ತೆಯ-ರನ್ನು ನೇಮಿಸಿಕೊಂಡಿದ್ದರೂ, ಅವರನ್ನು ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಅಡಿ ಮಕ್ಕಳು, ಬಾಣಂತಿಯರು, ಕಿಶೋರಿಯರು, ಗರ್ಭಿಣಿಯರ ಆರೋಗ್ಯದ ಮೇಲೆ ನಿಗಾ ಇರಿಸಲು, ಪೌಷ್ಟಿಕ ಆಹಾರ ವಿತರಣೆ ಸೇರಿದಂತೆ ಸರ್ಕಾರದ ಹಲವು ಕೆಲಸಗಳಿಗೆ ಬಳಸಿ-ಕೊಳ್ಳಲಾಗುತ್ತಿದೆ. 2021–22ನೇ ಸಾಲಿನಲ್ಲಿ ರಾಜ್ಯದ ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳಿಗೆ ಕಲಿಸುವ ಜತೆಗೆ, 56.50 ಲಕ್ಷ ಫಲಾನುಭವಿಗಳಿಗೆ ಸೇವೆ ಒದಗಿಸಿದ್ದಾರೆ.

ದೇಶದ ಇತಿಹಾಸದಲ್ಲಿ ಇದುವರೆಗೂ ಅಂಗನವಾಡಿ, ಬಾಲವಾಡಿ ಹಾಗೂ ಪೂರ್ವ ಪ್ರಾಥಮಿಕ ತರಗತಿಗಳನ್ನು ಶಾಲಾ (ಸ್ಕೂಲಿಂಗ್) ಹಂತವೆಂದು ಪರಿಗಣಿಸಿರಲಿಲ್ಲ. ಶಾಲಾ ತರಗತಿಗಳ ಕೆಳಹಂತದ ವಿಸ್ತರಣೆಯ ಚಟುವಟಿಕೆ-ಗಳೆಂದು ನೋಡಲಾಗುತ್ತಿತ್ತು. ಪ್ರಸ್ತುತ ಮಗುವಿನ ಬೌದ್ಧಿಕ, ಮಿದುಳಿನ ವಿಕಾಸದ ಆಧಾರದ ಮೇಲೆ ಶಿಕ್ಷಣವನ್ನು ನಾಲ್ಕು ಹಂತಗಳಾಗಿ ವಿಭಾಗಿಸಲಾಗಿದೆ. ಮೂರು ವರ್ಷಗಳ ಅಂಗನವಾಡಿ ಸೇರಿ 2ನೇ ತರಗತಿಯವರೆಗೆ ಪ್ರಾಥಮಿಕ, 3ರಿಂದ 5ರವರೆಗೆ ಮಾಧ್ಯಮಿಕ, 6ರಿಂದ 8ರವರೆಗೆ ಪೂರ್ವಪ್ರೌಢ, 9ರಿಂದ 12ರವರೆಗೆ ಪ್ರೌಢಶಾಲಾ ಹಂತಗಳೆಂದು ಗುರುತಿಸಲಾಗಿದೆ.

ಮೂಲ ಸೌಕರ್ಯಗಳ ನಿರೀಕ್ಷೆ: ರಾಜ್ಯ ಸರ್ಕಾರ ವಿದ್ಯಾಪ್ರವೇಶ ಯೋಜನೆಯ ಹೆಸರಲ್ಲಿ ಅಂಗನವಾಡಿಗಳನ್ನು ಶಾಲಾ ವ್ಯಾಪ್ತಿಗೆ ತರಲು ನಿರ್ಧರಿಸಿದ್ದು, ಮೂಲ ಸೌಕರ್ಯಗಳಿಗೆ ಹೆಚ್ಚಿನ ನೆರವು ದೊರಕಲಿದೆ. ರಾಜ್ಯದಲ್ಲಿ 24,403 ಅಂಗನವಾಡಿಗಳು ಸ್ವಂತ ಕಟ್ಟಡವಿಲ್ಲದೇ ಬಾಡಿಗೆ ಕೊಠಡಿಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಇಂತಹ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕುವ ನಿರೀಕ್ಷೆ ಇದೆ ಎನ್ನುವುದು ಅಂಗನವಾಡಿ ಸಿಬ್ಬಂದಿ ಆಶಯ.



ಮೊದಲ ಹಂತದಲ್ಲಿ ಶಾಲಾ ಆವರಣದಲ್ಲಿರುವ 21 ಸಾವಿರ ಅಂಗನವಾಡಿಗಳನ್ನು ಶಾಲಾ ವ್ಯಾಪ್ತಿಗೆ ತರಲಾಗುತ್ತದೆ

ಬಿ.ಪ್ರೇಮಾ, ಅಧ್ಯಕ್ಷೆ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಒಕ್ಕೂಟ

ಅಂಕಿ-ಅಂಶಗಳು

13,89,110 ದೇಶದ ಅಂಗನವಾಡಿ ಕೇಂದ್ರಗಳು

13,13,935 ಅಂಗನವಾಡಿ ಕಾರ್ಯಕರ್ತೆಯರು

65,911 ಕರ್ನಾಟಕದ ಅಂಗನವಾಡಿ ಕೇಂದ್ರಗಳು

64,816 ರಾಜ್ಯದ ಕಾರ್ಯಕರ್ತೆಯರು

ನ್ಯಾ.ಸಂದೇಶ್‌ಗೆ ಭದ್ರತೆ ಕೋರಿ ಪಿಐಎಲ್

ಬೆಂಗಳೂರು: ‘ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಕಾರ್ಯವೈಖರಿಯನ್ನು ಮುಕ್ತ ಕಲಾಪದಲ್ಲಿ ಟೀಕೆ ಮಾಡಿದ್ದ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿಗೆ ಸೂಕ್ತ ಭದ್ರತೆ ನೀಡುವ ಮತ್ತು ಅವರ ವರ್ಗಾವಣೆಗೆ ಬೆದರಿಕೆ ಬಂದಿದೆ ಎನ್ನಲಾದ ಆರೋಪದ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ವಕೀಲ ರಮೇಶ್ ಎಲ್. ನಾಯಕ್ ಸಲ್ಲಿಸಿರುವ ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ. ನ್ಯಾಯಮೂರ್ತಿ ಅವರಿಗೆ ಸೂಕ್ತ ಭದ್ರತೆ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಮನವಿ ಮಾಡಲಾಗಿದೆ.

‘ದುರಾಸೆಯೇ ಭ್ರಷ್ಟಾಚಾರಕ್ಕೆ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನುಷ್ಯನ ದುರಾಸೆ ಹೆಚ್ಚಳವೇ ಭ್ರಷ್ಟಾಚಾರಕ್ಕೆ ಕಾರಣವಾಗಿದೆ’ ಎಂದು ಶ್ರೀಶೈಲ ಮಠದ ಡಾ.ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಆತಂಕ ವ್ಯಕ್ತಪಡಿಸಿದರು.

ನಗರದಲ್ಲಿ ಶುಕ್ರವಾರ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ವಿಜಯಾ ವಿಷ್ಣುಭಟ್ ಅವರ ಅನುವಾದಿತ ಕೃತಿ ‘ಭ್ರಷ್ಟ ವಿರೋಧಿ ಸಿದ್ಧಾಂತ’ ಬಿಡುಗಡೆ ಮಾಡಿ ಮಾತನಾಡಿದರು.

‘ಭ್ರಷ್ಟಾಚಾರದಿಂದ ಗಳಿಸಿದ ಹಣವು ಎಂದಿಗೂ ಉಳಿಯುವುದಿಲ್ಲ. ಆ ಹಣವನ್ನು ಆಸ್ಪತ್ರೆ ಹಾಗೂ ವಕೀಲರಿಗೆ ವ್ಯಯಿಸಬೇಕಾಗಬಹುದು. ಸತ್ಯ, ಶುದ್ಧತೆಯಿಂದ ನಡೆದರೆ ಮಾತ್ರ ಒಳಿತು’ ಎಂದರು.

ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಮಾತನಾಡಿ, ಭ್ರಷ್ಟಾಚಾರ ನಡೆಸು-ವುದರಲ್ಲೂ ಬೇರೆ ಬೇರೆ ಸರ್ಕಾರಗಳು ಹಾಗೂ ಮಂತ್ರಿಗಳ ಮಧ್ಯೆ ಸ್ಪರ್ಧೆಯೇ ಏರ್ಪಟ್ಟಿದೆ. ಗುತ್ತಿಗೆದಾರರು ಶೇ 40ರಷ್ಟು ಕಮಿಷನ್ ನೀಡಬೇಕಾಗಿದೆ. ಕಾಮನ್‌ವೆಲ್ತ್, ಬೊಫೋರ್ಸ್, ಕಲ್ಲಿದ್ದಲು ಖರೀದಿ ಹಗರಣಗಳು ದೇಶದಲ್ಲಿ ದೊಡ್ಡ ಸದ್ದು ಮಾಡಿದ್ದವು. ಬೆಂಗಳೂರಿನಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ನಿರ್ಮಿಸಿದ್ದ ರಸ್ತೆಗಳು ಒಂದೇ ಮಳೆಗೆ ಕಿತ್ತು ಹೋಗುತ್ತಿವೆ’ ಎಂದು ಹೇಳಿದರು.

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ಬೆಳಕಿಗೆ ಬಂದಿದೆ. ಹಣ ನೀಡಿ ಹುದ್ದೆ ಪಡೆದವರು ಭ್ರಷ್ಟಾಚಾರಕ್ಕೆ ಇಳಿಯುತ್ತಾರೆ. ಮೌಲ್ಯಗಳು ಕುಸಿಯುತ್ತಿವೆ ಎಂದು ಆತಂಕ ವ್ಯ-ಕ್ತಪಡಿಸಿದರು.

ಇಂತಹ ಅರ್ಥಪೂರ್ಣವಾದ ಕೃತಿ ಬರಬೇಕಿತ್ತು. ಈ ಕೃತಿಯನ್ನು ಓದಿಯಾದರೂ ಬದಲಾವಣೆ ಬರಬಹುದು. ಹಣ ಹಾಗೂ ಅಧಿಕಾರಕ್ಕೆ ಮಾತ್ರ ಗೌರವ ಎನ್ನುವಂತಾಗಿದೆ. ಯುವಕರು ಮೌಲ್ಯಯುತ ಸಮಾಜ ಕಟ್ಟಬೇಕಿದೆ. ಚೀನಾದಲ್ಲಿ ಭ್ರಷ್ಟಾಚಾರ ನಡೆಸಿದವರಿಗೆ ಗಲ್ಲು ಶಿಕ್ಷೆಯಿದೆ. ಭಾರತದಲ್ಲಿ ಶಿಕ್ಷೆಯ ಅವಧಿ ಕಡಿಮೆಯಿದೆ ಎಂದರು.

ಲೇಖಕಿ ಡಾ.ದೀಪಾಫಡ್ಕೆ ಮಾತನಾಡಿ, ‘ಸಮಾಜದಲ್ಲಿ ಭ್ರಷ್ಟಾಚಾರವು ರಕ್ತ ಬೀಜಾಸುರನಂತೆ ಚಾಚಿಕೊಂಡಿದೆ. ಧರ್ಮ ಹಾಗೂ ವರ್ಗ ಸಂಘರ್ಷ ಹೆಚ್ಚಿದೆ’ ಎಂದರು.

ಕೃತಿಯ ಮೂಲ ಲೇಖಕ ಭರತ್ ಜಂಗಮ್ ಮಾತನಾಡಿ, ‘ಈ ಕೃತಿಯು 18 ಭಾಷೆಗಳಿಗೆ ಅನುವಾದವಾಗಿದೆ. ನೇಪಾಳದಲ್ಲಿ ಸ್ನಾತಕೋತ್ತರ ಪದವಿಗೆ ಈ ಕೃತಿ ಪಠ್ಯವಾಗಿದೆ’ ಎಂದು ಹೇಳಿದರು.

ಲೇಖಕಿ ವಿಜಯಾ ವಿಷ್ಣುಭಟ್, ಡಾ.ಸಿ.ಸೋಮಶೇಖರ್ ಹಾಜರಿದ್ದರು.



ನಗರದಲ್ಲಿ ಭಗವತಿ ಚಿತ್ಪಾವನ ಮಹಿಳಾ ಟ್ರಸ್ಟ್ ಆಯೋಜಿಸಿದ್ದ ಸಮಾರಂಭದಲ್ಲಿ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರು ‘ಭ್ರಷ್ಟ ವಿರೋಧಿ ಸಿದ್ಧಾಂತ’ ಕೃತಿ ಬಿಡುಗಡೆ ಮಾಡಿ ಶ್ರೀಶೈಲ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಹಸ್ತಾಂತರಿಸಿದರು. ಎಡದಿಂದ ಡಾ.ದೀಪ್ತಿಫಡ್ಕೆ, ಡಾ.ಸಿ.ಸೋಮಶೇಖರ್, ಲೇಖಕಿ ವಿಜಯಾ ವಿಷ್ಣುಭಟ್, ಭರತ್ ಜಂಗಮ್ ಉಪಸ್ಥಿತರಿದ್ದರು



ಕೋಲಾರದಲ್ಲಿ ಶುಕ್ರವಾರ ನಡೆದ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 2ನೇ ವಾರ್ಷಿಕ ಘಟಿಕೋತ್ಸವದಲ್ಲಿ ಶಹನಾಯಿ ವಾದಕ ಪಂಡಿತ್ ಬಾಳೇಶ ಭಜಂತ್ರಿ ಹಾಗೂ ಎಂಜಿನಿಯರ್ ಶರದ್ ಶರ್ಮ ಅವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ‘ಗೌರವ ಡಾಕ್ಟರೇಟ್’ ಪ್ರದಾನ ಮಾಡಿದರು. ಕುಲಸಚಿವ ಡಾ.ವಿ. ವೆಂಕಟೇಶಮೂರ್ತಿ, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ಕುಲಪತಿ ಪ್ರೊ.ನಿರಂಜನ ವಾನಳ್ಳಿ, ಕುಲಸಚಿವ ಡಾ.ಡೊಮಿನಿಕ್ ಡಿ. ಇದ್ದಾರೆ. ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದ ನಟ ಅನಂತ್‌ನಾಗ್ ಗೈರಾಗಿದ್ದರು

ಮುಂದುವರಿದ ಮಳೆ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕರ್ನಾಟಕದ ಹಲವು ಭಾಗಗಳು ಸೇರಿದಂತೆ ರಾಜ್ಯದ ವಿವಿಧೆಡೆ ಶುಕ್ರವಾರವೂ ಮಳೆ ಮುಂದುವರಿದಿದೆ. ಬೆಳಗಾವಿ ಜಿಲ್ಲೆಯಲ್ಲಿ ಗೋಡೆ ಕುಸಿದು ಬಾಲಕ ಮೃತಪಟ್ಟಿದ್ದು, ರಾಯಚೂರು ಜಿಲ್ಲೆಯಲ್ಲಿ ಅರ್ಚಕರೊಬ್ಬರು ನೀರು ಪಾಲಾಗಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ರಸ್ತೆ ಕುಸಿದಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗಿದೆ.



ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಚುಂಚವಾಡದಲ್ಲಿ ಗುರುವಾರ ತಡರಾತ್ರಿ ಮಳೆಯಿಂದ ಕೊಟ್ಟಿಗೆಯ ಮಣ್ಣಿನ ಗೋಡೆ ಕುಸಿದು ಬಾಲಕ ಅನಂತರಾಜ ಧರಣೇಂದ್ರ ಪಾಶೆಟ್ಟಿ (16) ಮೃತಪಟ್ಟಿದ್ದಾನೆ. ₹5 ಲಕ್ಷ ಪರಿಹಾರ ನೀಡಲಾಗಿದೆ.

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಮುಕ್ಕುಂದಾ ಗ್ರಾಮದ ಬಳಿ ಶುಕ್ರವಾರ ತುಂಗಭದ್ರಾ ನದಿಯಲ್ಲಿ ಸ್ನಾನಕ್ಕೆ ತೆರಳಿದ್ದ ಕರಿವೀರೇಶ್ವರ ದೇವಸ್ಥಾನದ ಅರ್ಚಕ ಲಿಂಗಪ್ಪ (52) ನೀರು ಪಾಲಾಗಿದ್ದಾರೆ. ಅವರ ಪತ್ತೆಗಾಗಿ ಶೋಧ ಕಾರ್ಯ ಮುಂದುವರೆದಿದೆ ಎಂದು ಸಿಂಧನೂರು ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಮಲಿಕವಾಡ ಗ್ರಾಮದಲ್ಲಿ ಮಳೆಯಿಂದಾಗಿ 120 ಹೆಕ್ಟೇರ್‌ಗೂ ಅಧಿಕ ಕಬ್ಬು ಬೆಳೆ ನೀರಿನಿಂದ ಆವೃತವಾಗಿದೆ.

ಭಾಗಮಂಡಲದಲ್ಲಿ ಕಾವೇರಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಕೊಯನಾಡಿನ ಸಮೀಪ ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ಬಿರುಕುಗಳು ಕಂಡುಬಂದಿವೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಕ್ಷೀಣಿಸಿದ ವರ್ಷಧಾರೆ • ಹುಬ್ಬಳ್ಳಿ– ಧಾರವಾಡ, ವಿಜಯಪುರದಲ್ಲಿ ಸಾಧಾರಣ ಮಳೆ

ಉತ್ತರ ಕರ್ನಾಟಕ: ತಗ್ಗದ ಮಳೆ ಆರ್ಭಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಶುಕ್ರವಾರವೂ ಮಳೆ ಮುಂದುವರಿದಿದ್ದು, ಹುಬ್ಬಳ್ಳಿ- ಧಾರವಾಡ, ವಿಜಯಪುರ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಕ್ಷೀಣಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಕಾಳಿ ನದಿಯ ಜಲಾನಯನ ಪ್ರದೇಶದಲ್ಲಿ ಮಳೆಯಾಗಿದ್ದು, ಕದ್ರಾ ಜಲಾಶಯದ 8 ಕ್ರೆಸ್ಟ್ ಗೇಟ್‌ಗಳನ್ನು ಶುಕ್ರವಾರ ತೆರೆಯಲಾಗಿದೆ. ವಿಜಯನಗರ ಜಿಲ್ಲೆಯ ಹರಪನಹಳ್ಳಿಯ ಸಿಂಗ್ರಿಹಳ್ಳಿಯಲ್ಲಿ ಮನೆ ಕುಸಿದಿದೆ. ಹಲುವಾಗಲು-ಗರ್ಭಗುಡಿ ಗ್ರಾಮ ಸಂಪರ್ಕಿಸುವ ಸೇತುವೆ ಮುಳುಗಿದೆ.

ಮಳೆ: ಎಲ್ಲಿ, ಎಷ್ಟು?

ಸ್ಥಳ	ಸೆಂಟಿಮೀಟರ್
ಚಿಕ್ಕಮಗಳೂರು ಜಿಲ್ಲೆ	
ಹೊಸಕೆರೆ	26.4
ಕೊಟ್ಟಿಗೆಹಾರ	24.3
ಕೊಡಗು ಜಿಲ್ಲೆ	
ಬಲ್ಲಮಾವಟ	15
ಭಾಗಮಂಡಲ	14
ಉತ್ತರ ಕನ್ನಡ ಜಿಲ್ಲೆ	
ಸಿದ್ದಾಪುರ	9.1
ಗೇರುಸೊಪ್ಪ	12.9



ಸಕಲೇಶಪುರದ ದೋಣಿಗಲ್ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ವಾಹನಗಳು ಸಾಲುಗಟ್ಟಿ ನಿಂತಿದ್ದವು. – ಪ್ರಜಾವಾಣಿ ಚಿತ್ರ/ ಜಾನೇಕೆರೆ ಆರ್. ಪರಮೇಶ್

ಬೆಳಗಾವಿ ನಗರ ಹಾಗೂ ಖಾನಾಪುರ ತಾಲ್ಲೂಕಿನಲ್ಲಿ ಎಲ್ಲ ಪ್ರಾಥಮಿಕ, ಪ್ರೌಢಶಾಲೆಗಳಿಗೆ ಜುಲೈ 16ರಂದು ಕೂಡ ರಜೆ ನೀಡಲಾಗಿದೆ.

ಸಕಲೇಶಪುರದ ದೋಣಿಗಲ್ ಬಳಿ ಮಂಗಳೂರು- ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಎಲ್ಲ ರೀತಿಯ ವಾಹನ ಸಂಚಾರ ನಿರ್ಬಂಧಿಸಲಾಗಿದೆ. 'ರಾಜ್ಯ ಸಾರಿಗೆ ಸಂಸ್ಥೆ, ಖಾಸಗಿ ಬಸ್‌ಗಳು, ಕಾರು ಸೇರಿದಂತೆ ಲಘು ವಾಹನಗಳು ಹಾಸನದಿಂದ ಅರಕಲಗೂಡು- ಕುಶಾಲನಗರ-ಸಂಪಾಜೆ ಮಾರ್ಗವಾಗಿ ಅಥವಾ ಹಾಸನ-ಬೇಲೂರು-ಮೂಡಿಗೆರೆ -ಚಾರ್ಮಾಡಿ ಘಾಟಿ ಮೂಲಕ ಮಂಗಳೂರಿಗೆ ಸಂಚರಿಸಬೇಕು' ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.


ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ನೆರಳೆಕೊಡಿಗೆ ಬಳಿ ಶೃಂಗೇರಿ- ಆಗುಂಬೆ ಸಂಪರ್ಕ ರಸ್ತೆ ಕೊಚ್ಚಿಹೋಗಿದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಲವು ಗ್ರಾಮಗಳ ಜಮೀನುಗಳು ಜಲಾವೃತವಾಗಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.32	77,969	84,729
ಹಾರಂಗಿ	2,859	2,853.74	9,374	7,500
ಕಬಿನಿ	2,284	2282.15	32,900	32,000
ಹೇಮಾವತಿ	2,922	2,920.40	41,420	40,250
ಲಿಂಗನಮಕ್ಕಿ	1819	1789.70	56,012	1696.75
ಸೂಪಾ(ಮೀ)	564	536.20	44,642	-
ಮಾಣಿ	595	581.40	8795	-
ತುಂಗಭದ್ರಾ(ಅಡಿ)	1,633	1,630.21	1,10,285	1,52,501
ಮಲಪ್ರಭಾ	2,079.50	2,062.50	14,939	194
ಘಟಪ್ರಭಾ	2,175	2,132.20	25,726	119
ಭದ್ರಾ	186	184.2	47236	33,255
ಆಲಮಟ್ಟಿ(ಮೀ)	519.60	517.25	1,21,029	1,25,451
ನಾರಾಯಣಪುರ(ಮೀ)	492.25	491.25	1,35,000	1,33,1882

* ನೆಲಮಟ್ಟದಿಂದ

ಪ್ರವಾಹದಲ್ಲೇ ಅಣೆಕಟ್ಟು ಗೇಟ್ ತೆರೆಯಲು ಯತ್ನ



ಶಕ್ತಿನಗರ: ರಾಯಚೂರು ತಾಲ್ಲೂಕಿನ ಗುರ್ಜಾಪುರ ಬಳಿ ಕೃಷ್ಣಾ ನದಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ನಿರ್ಮಿಸಿರುವ ಅಣೆಕಟ್ಟು ಗೇಟ್ ತೆರೆಯಲು ಸಿಬ್ಬಂದಿಯೊಬ್ಬರನ್ನು ಕ್ರೇನ್‌ನಿಂದ ಇಳಿಸಿ ತೆರೆಯಲು ಯತ್ನಿಸಿದ ವಿಡಿಯೊ ವೈರಲ್ ಆಗಿದೆ.

'ಅಣೆಕಟ್ಟಿನ 194 ಪೈಕಿ 94 ಗೇಟ್‌ಗಳನ್ನು ಮಾತ್ರ ತೆರೆಯಲಾಗಿದೆ. ಇದರಿಂದ ಹಿನ್ನೀರು ಸಂಗ್ರಹವಾಗಿ ಗುರ್ಜಾಪುರ ಮತ್ತು ಅರಿಷಿಣಗಿ ಗ್ರಾಮಗಳ ಜಮೀನು ಜಲಾವೃತವಾಗಿವೆ. ಕ್ರೇನ್ ನೆರವಿನಿಂದ ಆರ್‌ಟಿಪಿಎಸ್ ಸಿಬ್ಬಂದಿಯೊಬ್ಬರನ್ನು ನದಿಯಲ್ಲಿ ಇಳಿಸಿ, ಗೇಟ್ ತೆರೆಯಲು ಕೆಪಿಸಿಎಲ್‌ನವರು ಪ್ರಯತ್ನಿಸಿದರು. ಆದರೆ, ಪ್ರವಾಹದ ಸೆಳೆತದಿಂದ ಅದು ಸಾಧ್ಯವಾಗಲಿಲ್ಲ' ಎಂದು ಗ್ರಾಮಸ್ಥರು ತಿಳಿಸಿದರು.

ಸುದ್ದಿ 2 ನಿಮಿಷ

ಮಲೆನಾಡಿನ ಮೂರು ಜಿಲ್ಲೆಗಳಲ್ಲಿ 'ಆರೆಂಜ್ ಅಲರ್ಟ್'

ಬೆಂಗಳೂರು: ಮಲೆನಾಡು ಭಾಗದ ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೊಡಗಿನಲ್ಲಿ 'ಆರೆಂಜ್ ಅಲರ್ಟ್' ಘೋಷಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಶನಿವಾರ ಸಹ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಬೆಳಗಾವಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಹಾಗೂ ಹಾಸನ ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದ್ದು, ಈ ಜಿಲ್ಲೆಯ ಅಲ್ಲಲ್ಲಿ ಜೋರು ಮಳೆಯಾಗಲಿದೆ ಎಂದು ಸೂಚಿಸಿದೆ.

ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 40ರಿಂದ 50 ಕಿ.ಮೀ ಇರಲಿದ್ದು, 60 ಕಿ.ಮೀ ವರೆಗೆ ತಲುಪುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ವಾಡಿಕೆಗಿಂತ ಶೇ 38ರಷ್ಟು ಹೆಚ್ಚು ಮಳೆ

ನವದೆಹಲಿ: ಈ ವರ್ಷದ ಮುಂಗಾರಿನಲ್ಲಿ (ಜುಲೈ 15ರ ವರೆಗೆ) ಕರ್ನಾಟಕ ರಾಜ್ಯದಲ್ಲಿ ವಾಡಿಕೆಗಿಂತ ಶೇ 38ರಷ್ಟು ಹೆಚ್ಚು ಮಳೆಯಾಗಿದೆ.

ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿರುವುದು ಈ ಸಲ ವಿಶೇಷ. ಬರಪೀಡಿತ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗದಲ್ಲಿ ವಾಡಿಕೆಗಿಂತ ದುಪ್ಪಟ್ಟು ಮಳೆ ಸುರಿದಿದೆ. ಕರಾವಳಿಯಲ್ಲಿ ವಾಡಿಕೆಗಿಂತ ಶೇ 28, ಉತ್ತರ ಒಳನಾಡಿನಲ್ಲಿ ವಾಡಿಕೆಗಿಂತ ಶೇ 36, ದಕ್ಷಿಣ ಒಳನಾಡಿನಲ್ಲಿ ವಾಡಿಕೆಗಿಂತ ಶೇ 49 ಹೆಚ್ಚು ಮಳೆಯಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಮೂರು ರಾಜ್ಯಗಳಲ್ಲಿ ಅತಿ ಹೆಚ್ಚು ಮಳೆ: ಮೂರು ರಾಜ್ಯಗಳಲ್ಲಿ ವಾಡಿಕೆಗಿಂತ ಅತಿ ಹೆಚ್ಚು ಮಳೆಯಾಗಿದ್ದು, ಈ ಪಟ್ಟಿಯಲ್ಲಿ ತೆಲಂಗಾಣ, ಗುಜರಾತ್ ಹಾಗೂ ತಮಿಳುನಾಡು ಇವೆ. ಎಂಟು ರಾಜ್ಯಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. 17 ರಾಜ್ಯಗಳಲ್ಲಿ ವಾಡಿಕೆಯ ಮಳೆಯಾಗಿದ್ದರೆ, ಏಳು ರಾಜ್ಯಗಳಲ್ಲಿ ಕೊರತೆಯ ಮಳೆ ಸುರಿದಿದೆ. ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ದೆಹಲಿ, ಲಡಾಖ್‌ನಲ್ಲಿ ಕಡಿಮೆ ಮಳೆಯಾಗಿದೆ. ಕರ್ನಾಟಕದ ಪಕ್ಕದ ರಾಜ್ಯ ಕೇರಳದಲ್ಲಿ ಸಹ ಶೇ 18ರಷ್ಟು ಮಳೆ ಕೊರತೆ ಆಗಿದೆ.

ಜಂಟಿ ಸಮೀಕ್ಷೆ ನಡೆಸಿ ಪರಿಹಾರ ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿವೃಷ್ಟಿಯಿಂದ ಆದ ಹಾನಿಯ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ, ವ್ಯವಸ್ಥಿತ ಪರಿಹಾರವನ್ನು ತಕ್ಷಣವೇ ಒದಗಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಮಳೆ ಮತ್ತು ಪ್ರವಾಹ ಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆ ಶುಕ್ರವಾರ ವಿಡಿಯೊ ಸಂವಾದ ನಡೆಸಿದ ಅವರು, ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ತುರ್ತು ಮರುಸ್ಥಾಪನೆಗಾಗಿ ₹500 ಕೋಟಿ ಹಣವನ್ನು ಬಿಡುಗಡೆ ಮಾಡಲು ಆದೇಶ ಹೊರಡಿಸಿರುವುದಾಗಿಯೂ ಹೇಳಿದರು.

ತ್ವರಿತಗತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಯಥಾಸ್ಥಿತಿಗೆ ತರಬೇಕಾಗಿದೆ. ಇದಕ್ಕಾಗಿ ಹಲವಾರು ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ಅದಕ್ಕಾಗಿ ಹಣ ಬಿಡುಗಡೆಗೆ ಆದೇಶ ಹೊರಡಿಸಲಾಗಿದೆ ಎಂದರು.

ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಹೊರಬಿಡಲಾಗುತ್ತಿರುವ ನೀರಿನ ಪ್ರಮಾಣದ ಬಗ್ಗೆ ನಿಗಾವಹಿಸಲು ಹಾಗೂ ಆ ರಾಜ್ಯದ ಅಧಿಕಾರಿಗಳ ಜತೆ ನಿರಂತರ ಸಂಪರ್ಕದಲ್ಲಿರುವಂತೆಯೂ ನಿರ್ದೇಶನ ನೀಡಿದರು.

ಜಲಾಶಯಗಳಿಂದ ನೀರು ಹೊರಬಿಡುವುದಕ್ಕೆ ಮುನ್ನ ಕೆಳಗಿನ ಪ್ರದೇಶದ ಗ್ರಾಮಗಳಿಗೆ ಎಚ್ಚರಿಕೆ ನೀಡಿ ಜೀವಹಾನಿ ಮತ್ತು ಮನೆಗಳಿಗೆ ಹಾನಿಯಾಗುವುದನ್ನು ತಪ್ಪಿಸಲು ಮುನ್ನೆಚ್ಚರಿಕೆ ವಹಿಸಬೇಕು ಮತ್ತು ಜನರನ್ನು ಸ್ಥಳಾಂತರ ಮಾಡಬೇಕು. ಬೆಳೆ ಹಾನಿ, ರಸ್ತೆ, ಮನೆ ಮತ್ತು ಸರ್ಕಾರಿ ಕಟ್ಟಡಗಳ ಹಾನಿ ಬಗ್ಗೆ ಸರಿಯಾಗಿ ಸಮೀಕ್ಷೆ ನಡೆಸಬೇಕು ಎಂದೂ ಬೊಮ್ಮಾಯಿ ಹೇಳಿದರು.

'ಕಳೆದ ಕೆಲವು ದಿನಗಳಿಂದ ಹಲವು ಜಿಲ್ಲೆಗಳಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದೆ. ಇದರಿಂದ ಮೂಲಸೌಕರ್ಯಗಳಿಗೆ ಹಾನಿಯಾಗಿ ಸಾರ್ವಜನಿಕರಿಗೆ ತೊಂದರೆಯಾಗಿದೆ. ರಸ್ತೆ, ಸೇತುವೆ, ಶಾಲೆ, ಅಂಗನವಾಡಿ ಕೇಂದ್ರ, ವಿದ್ಯುತ್ ಕಂಬ, ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಗಳಿಗೆ ಹಾನಿಯಾಗಿದೆ. ಕೆಲವು ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಇದನ್ನು ಕಣ್ಣಾರೆ ಕಂಡಿದ್ದೇನೆ' ಎಂದು ಹೇಳಿದರು.

ಎನ್‌ಡಿಆರ್‌ಎಫ್ ಮಾರ್ಗಸೂಚಿಗಳ ಪ್ರಕಾರ ಹಾನಿಗೊಳಗಾಗಿರುವ ಮನೆಗಳ ನಿರ್ಮಾಣಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಪ್ರವಾಹ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ, ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಪರಿಹಾರ ಒದಗಿಸಬೇಕು ಎಂದರು.

ಜಿಲ್ಲಾಧಿಕಾರಿಗಳಿಗೆ ಸೂಚನೆ

- ಜಲಾಶಯಗಳಿಂದ ನೀರು ಹೊರಬಿಡುವುದಕ್ಕೆ ಮುನ್ನ ಗ್ರಾಮಗಳಿಗೆ ಎಚ್ಚರಿಕೆ ನೀಡಿ ಜೀವಹಾನಿ ಮತ್ತು ಮನೆಗಳಿಗೆ ಹಾನಿಯಾಗುವುದನ್ನು ತಪ್ಪಿಸಿ, ಜನರನ್ನು ಸ್ಥಳಾಂತರ ಮಾಡಬೇಕು.
- ಜಿಲ್ಲೆಗಳಲ್ಲಿ ಮುಂದಿನ 5-6 ದಿನಗಳಲ್ಲಿ ಮಳೆ ಮತ್ತು ಪ್ರವಾಹದ ಮುನ್ಸೂಚನೆಯನ್ನು ಗಮನಿಸಬೇಕು. ಮುನ್ನೆಚ್ಚರಿಕಾ ಕ್ರಮಗಳ ಜತೆಗೆ ರಕ್ಷಣೆ ಮತ್ತು ಪರಿಹಾರ ಕಾರ್ಯಗಳಿಗೂ ಸನ್ನದ್ಧರಾಗಬೇಕು.
- ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳಿಗೆ ಅಗತ್ಯವಿರುವ ಲಾಜಿಸ್ಟಿಕ್ಸ್ ನೆರವನ್ನು ಒದಗಿಸಿ ತೊಂದರೆಗಿಡಾದ ಪ್ರದೇಶಗಳಿಗೆ ತಕ್ಷಣವೇ ತಲುಪಲು ಕ್ರಮವಹಿಸಬೇಕು. ಜಿಲ್ಲಾ ರಕ್ಷಣಾಧಿಕಾರಿಗಳು ಮೇಲ್ವಿಚಾರಣೆ ಕೈಗೊಳ್ಳಬೇಕು.
- ವಿದ್ಯುತ್ ಸಂಪರ್ಕ ಪುನರ್ ಸ್ಥಾಪಿಸಲು ಅತಿ ಹೆಚ್ಚಿನ ಆದ್ಯತೆ ನೀಡಿ ಬಾಧಿತ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ಒದಗಿಸಲು ಎಸ್ಕಾಂಗಳು ಶ್ರಮವಹಿಸಬೇಕು.
- ರಸ್ತೆ, ಸೇತುವೆ, ಕಲ್ವರ್ಟ್ ಹಾಗೂ ಟ್ಯಾಂಕ್ ಬಂಡ್‌ಗಳನ್ನು ತಾತ್ಕಾಲಿಕವಾಗಿ ತಕ್ಷಣವೇ ಸರಿಪಡಿಸಿ, ಶಾಶ್ವತ ಕಾಮಗಾರಿಗಳಿಗೆ ಪ್ರಸ್ತಾವನೆ ಸಲ್ಲಿಸಬೇಕು.
- ಬೆಳೆ ಹಾನಿ ಕುರಿತು ತನಿಖೆ ಕೈಗೊಂಡು ಒಂದು ತಿಂಗಳೊಳಗೆ 'ಇನ್‌ಪುಟ್' ಸಬ್ಸಿಡಿ ವಿತರಿಸಬೇಕು.

4 ರಾಜ್ಯಗಳಲ್ಲಿ ಮಳೆ: ಜನಜೀವನ ಅಸ್ತವ್ಯಸ್ತ

ಅಮರಾವತಿ, ಮುಂಬೈ (ಪಿಟಿಐ): ಆಂಧ್ರಪ್ರದೇಶ, ಮಹಾರಾಷ್ಟ್ರ, ಒಡಿಶಾ ಮತ್ತು ರಾಜಸ್ಥಾನದಲ್ಲಿ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಅನೇಕ ಕಡೆ ಪ್ರವಾಹದ ಸ್ಥಿತಿ ಉಂಟಾಗಿದೆ.

ಆಂಧ್ರದಲ್ಲಿ ಶುಕ್ರವಾರ ಸುರಿದ ಮಳೆಗೆ ಗೋದಾವರಿ ನದಿ ನೀರಿನ ಮಟ್ಟ ಏರಿಕೆಯಾಗಿದ್ದು, ದೋವಲೇಶ್ವರಂನಲ್ಲಿರುವ ಸರ್ ಆರ್ಥರ್ ಕಾಟನ್ ಬ್ಯಾರೇಜ್ ಅಪಾಯದ ಮಟ್ಟ ತಲುಪಿದೆ. 'ಬ್ಯಾರೇಜ್‌ನಲ್ಲಿ 20 ಲಕ್ಷ ಕ್ಯೂಸೆಕ್‌ಗೆ ನೀರು ಬಂದರೆ 6 ಜಿಲ್ಲೆಗಳ 42 ಮಂಡಲಗಳ ವ್ಯಾಪ್ತಿಯ 554 ಗ್ರಾಮಗಳು ಪ್ರವಾಹದ ಪರಿಣಾಮವನ್ನು ಎದುರಿಸಬೇಕಾಗುತ್ತದೆ' ಎಂದು ವಿಶೇಷ ಮುಖ್ಯ ಕಾರ್ಯದರ್ಶಿ (ಕಂದಾಯ- ವಿಪತ್ತು ನಿರ್ವಹಣೆ) ಜಿ. ಸಾಯಿ ಪ್ರಸಾದ್ ಹೇಳಿದ್ದಾರೆ.

ರಾಜಸ್ಥಾನದ ಗಂಗಾನಗರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ. ಪುಣೆಯ ಬೊಪೊಡಿ ಪ್ರದೇಶದ ಹ್ಯಾರಿಸ್ ಸೇತುವೆಯ ಕೆಳಗೆ ಪ್ರವಾಹದಲ್ಲಿ ಸಿಲುಕಿದ್ದ ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ಮತ್ತು ಅವರ ಕುಟುಂಬ ಸದಸ್ಯರು ಹಾಗೂ ಸಾಕುನಾಯಿಯನ್ನು ಶುಕ್ರವಾರ ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿದ್ದಾರೆ. ಎಲ್ಲರೂ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು.

ಮಳೆಯಿಂದಾಗಿ ಒಡಿಶಾದ ಕಂದಮಾಲ್ ಜಿಲ್ಲೆಯಲ್ಲಿ ಗೋಡೆ ಕುಸಿದು ತಾಯಿ ಮತ್ತು ಅವರ ಐದು ವರ್ಷದ ಮಗಳು ಸಾವಿಗೀಡಾಗಿದ್ದಾರೆ. ಮಲ್ಕಾನ್‌ಗಿರಿ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರು ಕಾಲುವೆಯಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಪತ್ರಕರ್ತ ಶವವಾಗಿ ಪತ್ತೆ: ತೆಲಂಗಾಣದಲ್ಲಿ ಕೆಲ ದಿನಗಳ ಹಿಂದೆ ಸುರಿದ ಭಾರಿ ಮಳೆಯ ವರದಿಗೆ ತೆರಳಿದ್ದ ಸುದ್ದಿವಾಹಿನಿಯ ಪತ್ರಕರ್ತರೊಬ್ಬರು ಸಾವಿಗೀಡಾಗಿದ್ದು, ಶುಕ್ರವಾರ ಅವರ ಮೃತದೇಹ ಜಗ್ತಿಯಾಲ್ ಜಿಲ್ಲೆಯ ರಾಮ್‌ಜಿಪೇಟೆ ಬಳಿ ಪತ್ತೆಯಾಗಿದೆ. ಜಮೀರ್ (36) ಸಾವಿಗೀಡಾದ ಪತ್ರಕರ್ತ.

100 ದಾಟಿದ ಸಾವಿನ ಸಂಖ್ಯೆ: ಮಹಾರಾಷ್ಟ್ರದಲ್ಲಿ ಮಳೆಯಿಂದಾಗಿ ಇದುವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ ಶುಕ್ರವಾರ 102 ತಲುಪಿದೆ. ಮುಂಬೈ-ಗೋವಾ ಹೆದ್ದಾರಿಯಲ್ಲಿರುವ ಪರಶುರಾಮ್ ಘಾಟ್ ಪ್ರದೇಶದಲ್ಲಿ ಸಂಚಾರ ನಿಷೇಧಿಸಲಾಗಿದೆ.

ಮೀನು ಹಿಡಿಯಲು ಜೀವ ಪಣಕ್ಕಿಟ್ಟ ಜನ!: ಮಹಾರಾಷ್ಟ್ರದ ಚಂದ್ರಾಪುರದ ಪಕಾದಿಗುಡ್ಡಂ ಅಣೆಕಟ್ಟಿನಿಂದ ಹೊರಬಿಡಲಾದ ನೀರಿನ ಸಮೀಪವೇ ಹಲವು ಮಂದಿ ಪ್ರಾಣವನ್ನೂ ಲೆಕ್ಕಿಸದೆ ಮೀನು ಹಿಡಿಯಲು ನಿಂತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಬಗ್ಗೆ ತನಿಖೆ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಅಜಯ್ ಗುಲ್ಹಾನೆ ತಿಳಿಸಿದ್ದಾರೆ.



ಮಹಾರಾಷ್ಟ್ರದ ಚಂದ್ರಾಪುರದ ಪಕಾದಿಗುಡ್ಡಂ ಅಣೆಕಟ್ಟೆಯಿಂದ ಹೊರಬಿಡಲಾದ ನೀರಿನ ಸಮೀಪವೇ ಶುಕ್ರವಾರ ಮೀನು ಹಿಡಿದರು – ಪಿಟಿಐ ಚಿತ್ರ

ನಿರೀಕ್ಷಣಾ ಜಾಮೀನು ಮಂಜೂರು

ಅನ್ಸಾರ್ ಮೊಹಮ್ಮದ್ ಎಂಬುವವರು ಬಂಧನ ಪೂರ್ವ ಜಾಮೀನು ಕೋರಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು

ಒಪ್ಪಿತ ಸಂಬಂಧ ಮುರಿದುಬಿದ್ದರೆ ಅತ್ಯಾಚಾರವಲ್ಲ: ಸುಪ್ರೀಂಕೋರ್ಟ್

ನವದೆಹಲಿ: ಮಹಿಳೆಯು ಸ್ವಇಚ್ಛೆಯಿಂದ ವ್ಯಕ್ತಿಯೊಂದಿಗೆ ಸಂಬಂಧವಿಟ್ಟುಕೊಂಡು ಒಪ್ಪಿತ ಜೀವನ ನಡೆಸಿ, ಸಂಬಂಧ ಮುರಿದುಬಿದ್ದಾಗ ಅತ್ಯಾಚಾರ ಪ್ರಕರಣ ದಾಖಲಿಸಲು ಅವಕಾಶವಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಮಹತ್ವದ ತೀರ್ಪು ನೀಡಿದೆ.

ಅನ್ಸಾರ್ ಮೊಹಮ್ಮದ್ ಎಂಬುವರು ತಮ್ಮ ವಿರುದ್ಧ ರಾಜಸ್ಥಾನ ಹೈಕೋರ್ಟ್ ಮೇ 19ರಂದು ಹೊರಡಿಸಿದ್ದ ಆದೇಶ ಪ್ರಶ್ನಿಸಿ, ಸಲ್ಲಿಸಿದ್ದ ಮೇಲ್ಮನವಿ ಆಲಿಸಿದ ನ್ಯಾಯಮೂರ್ತಿ ಹೇಮಂತ್ ಗುಪ್ತಾ ಮತ್ತು ವಿಕ್ರಮ್ ನಾಥ್ ಅವರಿದ್ದ ಪೀಠವು ಈ ತೀರ್ಪು ನೀಡಿದೆ; ನಿರೀಕ್ಷಣಾ ಜಾಮೀನು ಕೂಡ ಮಂಜೂರು ಮಾಡಿದೆ.

ದೂರುದಾರ ಮಹಿಳೆ 21 ವರ್ಷದವಳಾಗಿದ್ದಾಗ ಅನ್ಸಾರ್ ಜತೆ ಸಂಬಂಧ ಹೊಂದಿದ್ದರೆಂದು ಮಹಿಳೆಯ ಪರ ಹಾಜರಿದ್ದ ವಕೀಲರು ಪೀಠದ ಮುಂದೆ ಒಪ್ಪಿಕೊಂಡರು. ಆಗ ನ್ಯಾಯ ಪೀಠವು, 'ಈ ಅಂಶವನ್ನು ಗಮನಿಸಿದರೆ, ದೂರುದಾರರು ಇಚ್ಛಾಪೂರ್ವಕವಾಗಿಯೇ ಮೇಲ್ಮನವಿದಾರರ ಜತೆ ಒಪ್ಪಿತ ಸಂಬಂಧವಿರಿಸಿಕೊಂಡಿದ್ದಾರೆ. ಈ ಸಂಬಂಧ ಸರಿಹೊಂದದಿದ್ದಾಗ ಐಪಿಸಿ ಸೆಕ್ಷನ್ 376(2) (ಎನ್) ಅಡಿ ಅತ್ಯಾಚಾರ ದೂರಿನ ಎಫ್‌ಐಆರ್ ದಾಖಲಿಸುವಂತಲ್ಲ' ಎಂದು ಹೇಳಿದೆ. ರಾಜಸ್ಥಾನ ಹೈಕೋರ್ಟ್ ನ್ಯಾಯಮೂರ್ತಿಗಳು 'ಅರ್ಜಿದಾರ ಮಹಿಳೆಗೆ ಆರೋಪಿ ಮದುವೆ ಭರವಸೆ ನೀಡಿ, ದೈಹಿಕ ಸಂಬಂಧ ಹೊಂದಿದ್ದು, ಇವರಿಬ್ಬರ ಸಂಬಂಧದಿಂದ ಹೆಣ್ಣು ಮಗು ಜನಿಸಿದೆ. ಅಪರಾಧದ ಗಂಭೀರತೆ ಪರಿಗಣಿಸಿದಾಗ, ನಿರೀಕ್ಷಣಾ ಜಾಮೀನು ನೀಡುವುದು ಸೂಕ್ತವಲ್ಲವೆಂದು ಅರ್ಜಿ ವಜಾಗೊಳಿಸಲಾಗಿದೆ' ಎಂದು ಆದೇಶ ನೀಡಿದ್ದರು.

ಸಂಕ್ಷಿಪ್ತ ಸುದ್ದಿ

ಶಿಕ್ಷಕನ ವಿರುದ್ಧ ಪೋಕ್ಸೊ ಪ್ರಕರಣ

ಕಾರಟಗಿ: ಮಹಿಳೆ ಮತ್ತು ಮಕ್ಕಳ ಜೊತೆ ಅಸಭ್ಯವಾಗಿ ವರ್ತಿಸಿದ್ದು ಅಲ್ಲದೇ ವಿಡಿಯೊ ಮಾಡಿದ ಆರೋಪದ ಮೇಲೆ ಶಿಕ್ಷಕ ಮಹಮ್ಮದ್ ಅಜರುದ್ದೀನ್ ವಿರುದ್ಧ ಪೋಕ್ಸೊ ಕಾಯ್ದೆಯಡಿ ಶುಕ್ರವಾರ ಪ್ರಕರಣ ದಾಖಲಾಗಿದೆ.

'ಆರೋಪಿ ಅಜರುದ್ದೀನ್ ಈಗಾಗಲೇ ನ್ಯಾಯಾಂಗ ಬಂಧನದಲ್ಲಿದ್ದು, ಗಂಗಾವತಿಯ ಬಿಇಒ ಸುರೇಶಗೌಡ ನೀಡಿದ ದೂರನ್ನು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿವಿಧ ಹಂತಗಳಲ್ಲಿ ತನಿಖೆ ನಡೆಸಿ ಮತ್ತು ಹಲವರನ್ನು ವಿಚಾರಣೆಗೆ ಒಳಪಡಿಸಿಲಾಯಿತು' ಎಂದು ಕಾರಟಗಿ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಮನೆ ಪಾಠ ಹೇಳಿಕೊಡುವ ನೆಪದಲ್ಲಿ ಆರೋಪಿಯು ಮಕ್ಕಳನ್ನು ಮನಸೋಇಚ್ಛೆ ಬಳಸಿಕೊಳ್ಳುತ್ತಿದ್ದ. ಯಾರೆಲ್ಲ ಮಕ್ಕಳು ತೊಂದರೆ ಅನುಭವಿಸಿದ್ದಾರೆ ಎಂಬುದನ್ನು ಪತ್ತೆ ಮಾಡಲಾಯಿತು. ಅವರಿಂದ ಮಾಹಿತಿ ಪಡೆಯಲಾಯಿತು' ಎಂದು ಅವರು ತಿಳಿಸಿದ್ದಾರೆ.

ಆ.12ರಿಂದ ಪಿಯು ಪೂರಕ ಪರೀಕ್ಷೆ

ಬೆಂಗಳೂರು: ದ್ವಿತೀಯ ಪಿಯು ಪೂರಕ ಪರೀಕ್ಷೆಗಳು ಆ.12ರಿಂದ 25ರವರೆಗೆ ನಡೆಯಲಿವೆ.

12ರಂದು ಕನ್ನಡ, ಅರೇಬಿಕ್, 13ರಂದು ಭೂಗೋಳ, ಮನಃಶಾಸ್ತ್ರ, ಭೌತಶಾಸ್ತ್ರ, 14 ಮತ್ತು 15 ರಜೆ. 16ರಂದು ಹಿಂದಿ, ಉರ್ದು, ತಮಿಳು ಸೇರಿದಂತೆ ಇತರೆ ಭಾಷಾ ವಿಷಯಗಳು, 17ರಂದು ಐಚ್ಛಿಕ ಕನ್ನಡ, ರಸಾಯನ ಶಾಸ್ತ್ರ, ಮೂಲ ಗಣಿತ, 18ರಂದು ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಶಿಕ್ಷಣ ಶಾಸ್ತ್ರ, ಗೃಹ ವಿಜ್ಞಾನ, 19ರಂದು ರಾಜ್ಯಶಾಸ್ತ್ರ, ಗಣಿತಶಾಸ್ತ್ರ, 20ರಂದು ತರ್ಕಶಾಸ್ತ್ರ, ಕರ್ನಾಟಕ, ಹಿಂದೂಸ್ತಾನಿ ಸಂಗೀತ, ವ್ಯವಹಾರ ಅಧ್ಯಯನ, 21 ರಜೆ. 22ರಂದು ಇಂಗ್ಲಿಷ್, ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್. 23ರಂದು ಅರ್ಥಶಾಸ್ತ್ರ, ಜೀವಶಾಸ್ತ್ರ, 24ರಂದು ಇತಿಹಾಸ, ಸಂಖ್ಯಾಶಾಸ್ತ್ರ, 25ರಂದು ಸಮಾಜಶಾಸ್ತ್ರ, ವಿದ್ಯನ್ಮಾನ ಶಾಸ್ತ್ರ, ಗಣಕ ವಿಜ್ಞಾನ ವಿಷಯಗಳ ಪರೀಕ್ಷೆ ನಡೆಯಲಿವೆ.

'ನಮ್ಮ ಸರ್ಕಾರದ ಪ್ರಗತಿಯ ಮೆಲುಕು'

ಮೈಸೂರು: 'ದಾವಣಗೆರೆಯಲ್ಲಿ ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಹುಟ್ಟುಹಬ್ಬ ಆಚರಣೆಯೊಂದಿಗೆ ಕಾಂಗ್ರೆಸ್ ಸರ್ಕಾರವಿದ್ದಾಗ ರಾಜ್ಯದಲ್ಲಾಗಿರುವ ಪ್ರಗತಿಯ ಬಗ್ಗೆ ಮೆಲುಕು ಹಾಕಲಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿದ ಅವರು, 'ನಮ್ಮ ಆಡಳಿತ ಅವಧಿಯಲ್ಲಿ ಏನಾಗಿತ್ತು? ಈಗ ಪರಿಸ್ಥಿತಿ ಏನಾಗಿದೆ ಎಂಬುದನ್ನು ಜನರಿಗೆ ವಿವರಿಸುತ್ತೇವೆ. ಬಿಜೆಪಿ ಸರ್ಕಾರದ ದುರಾಡಳಿತದ ಮೇಲೆ ಬೆಳಕು ಚೆಲ್ಲಲಿದ್ದೇವೆ. ಬಿಜೆಪಿಯವರು ಸಿದ್ದರಾಮೋತ್ಸವ ಎಂದೆಲ್ಲಾ ವಿನಾಕಾರಣ ಮಾತನಾಡುತ್ತಿದ್ದಾರಷ್ಟೆ' ಎಂದು ಪ್ರತಿಕ್ರಿಯಿಸಿದರು.

'ಪಕ್ಷದ ನಾಯಕ ರಾಹುಲ್ ಗಾಂಧಿ ಅವರು 'ಭಾರತ್ ಜೋಡೋ' ಯಾತ್ರೆಯುದ್ದಕ್ಕೂ ಭಾಗವಹಿಸಲಿದ್ದಾರೆ. ಯಾತ್ರೆಯು ಕರ್ನಾಟಕದಲ್ಲಿ 350 ಕಿ.ಮೀ. ಸಂಚರಿಸಲಿದೆ. ಅದರ ರೂಪುರೇಷೆಗಳು ಈಗ ಸಿದ್ಧವಾಗುತ್ತಿವೆ. ಯಾತ್ರೆಯು ಕೇರಳದಿಂದ ಕರ್ನಾಟಕಕ್ಕೆ ಪ್ರವೇಶಿಸಲಿದೆ. ಜುಲೈ 19ರಂದು ಮೈಸೂರಿನಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಸಲಾಗುವುದು' ಎಂದು ತಿಳಿಸಿದರು.

ಆಷಾಢದ 3ನೇ ಶುಕ್ರವಾರ ಅಂಗವಾಗಿ ಶಿವಕುಮಾರ್ ಪತ್ನಿಯೊಂದಿಗೆ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದರ್ಶನ ಪಡೆದರು. ಅವರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಸಾಥ್ ನೀಡಿದರು. ಅವರೊಂದಿಗೆ ದೇವಸ್ಥಾನಕ್ಕೆ ತೆರಳಲು ಪಕ್ಷದ ಕಾರ್ಯಕರ್ತರು ಮುಂದಾಗಿದ್ದರಿಂದಾಗಿ ನೂಕುನುಗ್ಗಲು ಉಂಟಾಯಿತು.

'ಸಿದ್ದರಾಮಯ್ಯ ಸಾಕ್ಷಿ ನಾಶ ಪ್ರವೀಣ'

ಬೆಂಗಳೂರು: 'ಸಾಕ್ಷಿ ನಾಶ ಪ್ರವೀಣರಾದ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಅವರ ವಿರುದ್ಧ ದಾಖಲಾಗಿದ್ದ 50 ಕ್ಕೂ ಹೆಚ್ಚು ಪ್ರಕರಣಗಳ ತನಿಖೆ ನಡೆಸುವ ಬದಲು ಲೋಕಾಯುಕ್ತಕ್ಕೇ ಬೀಗ ಜಡಿದು, ಇಂದು ಗಾಳಿಯಲ್ಲಿ ಗುಂಡು ಹೊಡೆಯುತ್ತಿರುವುದೇಕೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ಸರಣಿ ಟ್ವೀಟ್ ಮಾಡಿರುವ ಅವರು, 'ನಿಮ್ಮ ಮೇಲೆ ಅಷ್ಟೊಂದು ಕಳಂಕವಿದ್ದರೂ ಹುಳ್ಳುಳ್ಳಗೆ ಮಾತನಾಡಲು ಆತ್ಮಸಾಕ್ಷಿ ಹೇಗೆ ಒಪ್ಪುತ್ತದೆ' ಎಂದು ಕಿಡಿಕಾರಿದ್ದರೆ.

'ನಿಮ್ಮ ಬಳಿ ಮುಚ್ಚಿಡಲು ಏನೂ ಇಲ್ಲದಿದ್ದೇ ರೊಚ್ಚಿಗೇಳುವುದು ಏಕೆ ಸಿದ್ದರಾಮಯ್ಯ ಅವರೆ? ತಪ್ಪಿತಸ್ಥ ಮನಃಸಾಕ್ಷಿಗೆ ಆರೋಪದ ಅಗತ್ಯವಿದೆಯೇ? ನಮ್ಮ ಸರ್ಕಾರ ಭ್ರಷ್ಟಾಚಾರದ ಬಗ್ಗೆ ಶೂನ್ಯ ಸಹನೆ ಹೊಂದಿದೆ. ಜನರ ಹಣವನ್ನು ಕಳ್ಳತನ ಮಾಡುವುದನ್ನೂ ಸಹಿಸುವುದಿಲ್ಲ. ಪ್ರತಿಯೊಬ್ಬ ಅಪರಾಧಿಗೂ ತಕ್ಕ ಶಾಸ್ತಿ ಆಗಲಿದೆ' ಎಂದು ಹೇಳಿದ್ದಾರೆ.

'ಬಿಜೆಪಿ ಸರ್ಕಾರದ ಪ್ರತಿಯೊಬ್ಬರ ವಿರುದ್ಧ ಆರೋಪ ಮಾಡುವುದು ಸಿದ್ದರಾಮಯ್ಯ ಅವರಿಗೆ ಹವ್ಯಾಸವಾಗಿದೆ. ನಿಮ್ಮ ಮುಖಕ್ಕೆ ನೀವೇ ಕನ್ನಡಿ ಹಿಡಿದು ಆತ್ಮಸಾಕ್ಷಿಯನ್ನು ಪ್ರಶ್ನಿಸಿ. ನಿಮ್ಮ ಸರ್ಕಾರದಲ್ಲಿ ನಡೆದ ಹಗರಣಗಳು ಮತ್ತು ನೀವು ಪ್ರತಿಪಾದಿಸಿದ ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಎಲ್ಲರಿಗೂ ಗೊತ್ತಿದೆ' ಎಂದು ಅಶ್ವತ್ಥನಾರಾಯಣ ವ್ಯಂಗ್ಯವಾಡಿದ್ದಾರೆ.

ಜಮೀನು ಖರೀದಿಸಿದ್ದ ಪೌಲ್

ಒಂದನೇ ಪುಟದಿಂದ...

'ಕೇಂದ್ರ ವಿಭಾಗದ ಐಜಿಪಿ ಆಗಿದ್ದ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಹೋಬಳಿಯ ಹೊಸ ಹುಡ್ಯ ಗ್ರಾಮದಲ್ಲಿ ಪೌಲ್ ಫಾರ್ಮ್‌ಹೌಸ್ (ಸರ್ವೆ ನಂಬರ್ 247) ಖರೀದಿಸಿದ್ದರು. ಫಾರ್ಮ್‌ಹೌಸ್ ಅಕ್ಕ-ಪಕ್ಕದಲ್ಲೇ ಮತ್ತಷ್ಟು ಜಮೀನು ಇದೆ. ಆ ಪೈಕಿ ಕೆಲ ಜಮೀನನ್ನು ಕೆಲ ತಿಂಗಳ ಹಿಂದೆಯಷ್ಟೇ ಪೌಲ್ ಖರೀದಿ ಮಾಡಿರುವುದು ಗೊತ್ತಾಗಿದೆ. ಪಿಎಸ್‌ಐ ಅಕ್ರಮದಿಂದ ಬಂದ ಹಣವನ್ನೇ ಇದಕ್ಕೆ ಬಳಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಸುಮಾರು ನಾಲ್ಕು ಎಕರೆ ವಿಸ್ತೀರ್ಣದಲ್ಲಿರುವ ಫಾರ್ಮ್‌ಹೌಸ್ ಜಮೀನಿನಲ್ಲಿ ಮಾವು ಹಾಗೂ ಇತರೆ ಸಸಿಗಳನ್ನು ಬೆಳೆಯಲಾಗಿದೆ' ಎಂದೂ ತಿಳಿಸಿವೆ.

ನೆಲಪ್ಪನಹಳ್ಳಿಯಲ್ಲಿ ಜಮೀನು: 'ಶಿಡ್ಲಘಟ್ಟ ತಾಲ್ಲೂಕಿನ ಸಾದಲಿ ಹೋಬಳಿಯ ನೆಲಪ್ಪನಹಳ್ಳಿಯಲ್ಲಿ 8 ಎಕರೆ 29 ಗುಂಟೆ ಜಮೀನನ್ನು ಪೌಲ್ ಖರೀದಿ ಮಾಡಿದ್ದಾರೆ. ಈ ಆಸ್ತಿಯನ್ನೂ ತಂದೆ ನೇತರಾಮ್ ಬನ್ಸಾಲ್ ಹೆಸರಿನಲ್ಲಿ ನೋಂದಣಿ ಮಾಡಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ಪಹಣಿಗಳನ್ನು ಈಗಾಗಲೇ ಪರಿಶೀಲಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ನೆಲಪ್ಪನಹಳ್ಳಿಯ ಸರ್ವೆ ನಂಬರ್ -49ರಲ್ಲಿ 4 ಎಕರೆ 39 ಗುಂಟೆ ಹಾಗೂ ಸರ್ವೆ ನಂಬರ್ 50ರಲ್ಲಿ 3 ಎಕರೆ 30 ಗುಂಟೆ ಜಮೀನನ್ನು ತಂದೆ ಹೆಸರಿನಲ್ಲಿ ಪೌಲ್ ಖರೀದಿ ಮಾಡಿದ್ದಾರೆ. ಜಾತವಾರ ಗ್ರಾಮದ ಜಗದೀಶ್ ಎಂಬುವರು ಮಧ್ಯಸ್ಥಿಕೆ ವಹಿಸಿ ಈ ಆಸ್ತಿ ಕೊಡಿಸಿದ್ದರು. ಜಗದೀಶ್ ಮನೆ ಮೇಲೂ ಇತ್ತೀಚೆಗೆ ದಾಳಿ ಮಾಡಿ, ಅವರಿಂದ ಹೇಳಿಕೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಚಿಕ್ಕಬಳ್ಳಾಪುರ ಜಿಲ್ಲೆ ಮಾತ್ರವಲ್ಲದೇ ಮತ್ತಷ್ಟು ಜಿಲ್ಲೆಗಳಲ್ಲಿ ಪೌಲ್ ಆಸ್ತಿ ಖರೀದಿ ಮಾಡಿರುವ ಮಾಹಿತಿ ಇದೆ. ಎಲ್ಲ ಜಿಲ್ಲೆಗಳಿಗೂ ಹೋಗಿರುವ ವಿಶೇಷ ತಂಡಗಳು, ಆಸ್ತಿ ಬಗ್ಗೆ ದಾಖಲೆಗಳನ್ನು ಸಂಗ್ರಹಿಸುತ್ತಿವೆ. ಈ ಎಲ್ಲ ದಾಖಲೆಗಳನ್ನು ದೋಷಾರೋಪ ಪಟ್ಟಿಯಲ್ಲಿ ದಾಖಲಿಸಲಾಗುವುದು' ಎಂದೂ ಮೂಲಗಳು ಹೇಳಿವೆ.

ಬಾಗಲಕೋಟೆ ಕುಳಗೇರಿ ಕ್ರಾಸ್ ಡಾಬಾ ಬಳಿ ಹಲ್ಲೆ ಪ್ರಕರಣ

ಸಿದ್ದರಾಮಯ್ಯ ವಾಹನಕ್ಕೆ ಹಣ ಎಸೆದ ಕುಟುಂಬ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಕುಳಗೇರಿ ಕ್ರಾಸ್ ಡಾಬಾ ಬಳಿ ನಡೆದ ಹಲ್ಲೆ ಪ್ರಕರಣದಲ್ಲಿ ಗಾಯಗೊಂಡಿದ್ದವರಿಗೆ ನೀಡಿದ್ದ ₹2 ಲಕ್ಷವನ್ನು ಅವರ ಕುಟುಂಬದ ಸದಸ್ಯರು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ವಾಹನದತ್ತ ಎಸೆದರು. ಹಣ ಅವರ ಬೆಂಗಾವಲು ವಾಹನಕ್ಕೆ ಬಡಿದು, ಕೆಳಗೆ ಬಿದ್ದಿತು.

ನಗರದ ಆಶೀರ್ವಾದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹನೀಫಸಾಬ್ ಚಾಂದಸಾಬ್ ಚಿಕ್ಕೂರ ಸೇರಿದಂತೆ ನಾಲ್ವರನ್ನು ಭೇಟಿ ಮಾಡಿದ ಸಿದ್ದರಾಮಯ್ಯ ಅವರು, ಸಾಂತ್ವನ ಹೇಳಿ, ತಲಾ ₹50 ಸಾವಿರ ಹಣ ನೀಡಿದ್ದರು.

'ನೀವು ಬರುವವರೆಗೆ ಯಾವುದೇ ಮುಖಂಡರು ಭೇಟಿ ನೀಡಿ ಸಾಂತ್ವನ ಹೇಳಿಲ್ಲ. ಸಚಿವರೂ ಭೇಟಿ ಮಾಡಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ ಗಾಯಾಳುಗಳ ಕುಟುಂಬದವರು, 'ನಮಗೆ ಹಣ ಬೇಡ. ನ್ಯಾಯ ಕೊಡಿಸಿ' ಎಂದರು.

ಕುಟುಂಬದ ಸದಸ್ಯರನ್ನು ಸಮಾಧಾನಪಡಿಸಿದ ಸಿದ್ದರಾಮಯ್ಯ ಅವರು, ಹಣ ನೀಡಿ. ನ್ಯಾಯ ಕೊಡಿಸಲು ಎಲ್ಲ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿ ಕೆಳಗಡೆ ಬಂದರು.

ಸಿದ್ದರಾಮಯ್ಯ ಅವರು ಕುಳಿತಿದ್ದ ವಾಹನ ಹೊರಡುವಾಗ ಬಂದ ಗಾಯಾಳುಗಳ ಕುಟುಂಬದ ಸದಸ್ಯರಾದ ಬಿಸ್ಮಿಲ್ಲಾ ಚಿಕ್ಕೂರ, ರಾಜಮಾ ಅವರು, ತಮಗಾದ ಅನ್ಯಾಯ ಕುರಿತು ಹೇಳಲು ಮುಂದಾದರು. ಆಗ ಮುಂದಕ್ಕೆ ಹೊರಟ ವಾಹನದತ್ತ ಅವರು ಕೈಯಲ್ಲಿದ್ದ ಹಣವನ್ನು ಎಸೆದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಸ್ಮಿಲ್ಲಾ ಚಿಕ್ಕೂರ, 'ಎಲ್ಲರೂ ಒಂದೇ ತಾಯಿ ಮಕ್ಕಳಾಗಿ ನಡೆಯಬೇಕು. ಹೊಟ್ಟೆ ಹಸಿದಿದೆ ಎಂದರೆ ಯಾರೂ ಕಣ್ಣಿಂದ ನೋಡುವುದಿಲ್ಲ. ರೊಟ್ಟಿ ಕೊಡುತ್ತಾರೆ. ಆರೋಪಿಗಳಿಗೆ ಶಿಕ್ಷೆ ಆಗಬೇಕು. ಹಿಂದೂ, ಮುಸ್ಲಿಂ ಯಾರೊಂದಿಗೆ ಇಂತಹ ಘಟನೆ ಆಗಬಾರದು' ಎಂದರು.

ಪರಿಹಾರ ಬೇಕಿಲ್ಲ. 'ಗಂಡ ವರ್ಷ ವರೆಗೆ ವಿಶ್ರಾಂತಿ ಪಡೆಯಬೇಕು. ಯಾರೂ ಸಹಾಯ ಮಾಡುತ್ತಾರೆ. ನಮ್ಮ ತಪ್ಪಿದೆ ಎಂದರೆ ಶರಣಾಗಲು ಸಿದ್ಧ' ಎಂದರು.

'ಮಾನವೀಯ ದೃಷ್ಟಿಯಿಂದ ಕೊಟ್ಟಿದ್ದು': ಮಾನವೀಯತೆ ದೃಷ್ಟಿಯಿಂದ ಹಣ ನೀಡಲಾಗಿತ್ತು ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.

'ಇದು ಪರಿಹಾರ ಅಲ್ಲ. ಕಷ್ಟದಲ್ಲಿ ಇರುವವರಿಗೆ ಅನುಕೂಲ ಆಗಲಿ ಎಂದು ನೀಡಿದ್ದೇನೆ. ಗಲಭೆಯಲ್ಲಿ ಮೃತಪಟ್ಟವರ ಕುಟುಂಬಗಳ ಸದಸ್ಯರಿಗೂ ಹಣ ನೀಡುತ್ತೇವೆ' ಎಂದರು.

ಸಿದ್ದರಾಮಯ್ಯ ಭೇಟಿಗೆ ನಿರಾಕರಣೆ


ಬಾಗಲಕೋಟೆ: ಕೆರೂರು ಗಲಭೆಯಲ್ಲಿ ಗಾಯಗೊಂಡು, ಕೆರೋಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಿಂದೂ ಜಾಗರಣ ವೇದಿಕೆ ಕಾರ್ಯದರ್ಶಿ ಅರುಣ ಕಟ್ಟಿಮನಿ ಹಾಗೂ ಇನ್ನಿಬ್ಬರು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಭೇಟಿಯಾಗಲು ನಿರಾಕರಿಸಿದರು. ಅದರಿಂದಾಗಿ ಸಿದ್ದರಾಮಯ್ಯ ಅವರ ಕೆರೋಡಿ ಆಸ್ಪತ್ರೆ ಭೇಟಿ ರದ್ದುಗೊಂಡಿತು.

'ಸಿದ್ದರಾಮಯ್ಯ ಅವರಿಗೆ ಭೇಟಿಯಾಗಲು ಬರಬೇಡ ಎಂದು ಹೇಳಿಲ್ಲ. ಗಲಭೆಗೆ ಕಾರಣರಾದವರನ್ನೆಲ್ಲ ಬಂಧಿಸಬೇಕು. ಘಟನೆಗೆ ಪರೋಕ್ಷವಾಗಿ ಕಾರಣರಾಗಿರುವ ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಬೇಕು. ಇದಕ್ಕೆ ಸಮ್ಮತಿ ಇದ್ದರೆ ಬರಲಿ ಎಂದಿದ್ದೆ' ಎಂದು ಅರುಣ ಹೇಳಿದರು. ಸಿದ್ದರಾಮಯ್ಯ ಅವರ ಭೇಟಿಗೆ ನಿರಾಕರಿಸಿದ್ದರಿಂದಲೇ ಅಲ್ಲಿಗೆ ಹೋಗಲಿಲ್ಲ ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದರು.

'ಶಾಂತಿಗೆ ಮುಖ್ಯಮಂತ್ರಿ ಕೇಳಿ'

ಮೈಸೂರು: ಬಾಗಲಕೋಟೆಯ ಕುಳಗೇರಿ ಕ್ರಾಸ್ ಡಾಬಾ ಬಳಿ ನಡೆದ ಹಲ್ಲೆಯಲ್ಲಿ ಗಾಯಗೊಂಡಿದ್ದ ಸಂತ್ರಸ್ತರಿಗೆ ನೀಡಿದ್ದ ₹2 ಲಕ್ಷವನ್ನು ಅವರ ಕುಟುಂಬದ ಸದಸ್ಯರು ಸಿದ್ದರಾಮಯ್ಯ ತೆರಳುತ್ತಿದ್ದ ವಾಹನದ ಮೇಲೆ ಎಸೆದ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಯಾರು ಶಾಂತಿ ಕದಡುತ್ತಿದ್ದಾರೆಯೋ ಅವರು ಇದನ್ನು ಗಮನಿಸಲಿ. ಕರ್ನಾಟಕದಲ್ಲಿನ ಶಾಂತಿ ಬೇಕಾದರೆ, ಆ ವಿಚಾರದ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಪ್ರಶ್ನಿಸಿ' ಎಂದರು.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆ ಮುಸ್ಲಿಂ ಮಹಿಳೆಯರು ಶಾಂತಿ ಕೇಳುವುದರಲ್ಲಿ ತಪ್ಪಿಲ್ಲ' ಎಂದರು.



ಗಾಯಾಳುಗಳ ಕುಟುಂಬದ ಸದಸ್ಯರು ಸಿದ್ದರಾಮಯ್ಯ ಅವರ ವಾಹನದತ್ತ ಎಸೆದ ಹಣ ರಸ್ತೆ ಮೇಲೆ ಬಿದ್ದಿತ್ತು

ಮಳೆಗಾಲದ ಹನಿಗಳು ಒಬ್ಬೊಬ್ಬರಿಗೆ ಒಂದೊಂದು ತರಹ. ಬೆಳ್ಳಿ ತೆರೆಯ ಮೇಲೆ ಮಳೆಯಲ್ಲಿ ನೆನೆದವರು, ತಮ್ಮ ಬದುಕಿನ ಮಳೆಯಲ್ಲಿ ಮಿಂದದ್ದು ಹೇಗೆಲ್ಲಾ ಇದೆ. ಬಣ್ಣ, ಬೆಳಕಿನಾಚೆಯ ನಿಜಮಳೆಯ ಸೊಬಗು, ಬದುಕಿನ ಅರ್ಥ ಕಲಿಸಿದ ಮಳೆಯ ಪಾಠಗಳ ಪುಟ್ಟ ಝರಿ ಇಲ್ಲಿದೆ. ನಿಮ್ಮಲ್ಲೂ ಇಂಥ ಕಥೆಗಳಿರಬಹುದಲ್ವಾ... ಓದುತ್ತಾ ನೆನಪಿಸಿಕೊಳ್ಳಿ

ಮಳೆ ನೆನಪಿನ ಹನಿಗಳು



ಕಣ್ಣಲ್ಲಿ ಹನಿ ಜಿನುಗಿಸುವ ಮಳೆ



ಶಾಲೆ ಮುಗಿಸಿ ಬರೋ ಸಂಜೆಗಳಲ್ಲಿ ಎದೆಹರಿದು ಕಿರುಚಿದ್ರು 'ಏನಾಯ್ತು' ಅಂತ ಕೇಳಲು ಒಬ್ಬರಿರದ ಹಸಿರೇರಿದ ಬತ್ತದ ಗದ್ದೆ ಬದುವಿನಲ್ಲಿ ದಿನ ನಾನು ನಡೆದು ಮನೆಗೆ ಬರುತ್ತಿದ್ದೆ. ಕೆಲವೊಮ್ಮೆ ತಡವಾದಾಗ ಅದೇ ಗದ್ದೆಯಂಚಲ್ಲಿ ಸೈಕಲ್ ಓಡಿಸಿ ಹೋದ ದಿನಗಳು ಇವೆ. ಅಂತಲ್ಲಿ ಮಳೆಯಾದ್ರೆ ಅದರ ಮಜವೇ ಬೇರೆ. ಚಿಟಿ ಪಿಟಿ ಮಳೆ ಕೊಡೆಯ ಮೇಲೆ ಬಿದ್ದಾಗ ಅದೊಂತರ ಪದ್ಯ. ಹಾಗೆ ಅದಕ್ಕೆ ಗಾಳಿಯ ಕೋರಸ್, ಒದ್ದೆಯಾದ ಚಪ್ಪಲಿಯಿಂದ ಎದ್ದೆದ್ದು ಕೇಳೋ ಚರಪರ ಮ್ಯೂಸಿಕ್. ಪ್ರಕೃತಿ ತನ್ನಷ್ಟಕ್ಕೆ ತಯಾರು ಮಾಡಿಕೊಂಡ ಸಂಗೀತ ಕಚೇರಿ ಅಂದ್ರೆ ಓವರ್ ಆಗಿ ಹೇಳ್ತಿದಾಳೆ ಅಂದ್ಕೊಡತೀರೇನೋ. ಆದ್ರೂ ಆಗಿನ ಮಳೆ ಹಾಗೆಯೇ...

ಮನೆ ಸೇರುತ್ತಿದ್ದ ಹಾಗೆಯೇ ಅಜ್ಜಿ ಕೊಡುತ್ತಿದ್ದ ಎಣ್ಣೆಯಲ್ಲಿ ಹುರಿದ ಗೆಣಸಿನ ಹಪ್ಪಳ. ಮತ್ತು ಬೆಚ್ಚಗೆ ಒಂದಷ್ಟು ಹಾಲು. ಹೀಗೆ ಆವತ್ತಿನ ಆ ಮುಗ್ಧ ಮನಸ್ಸಿಗೆ, ಮಳೆಗೆ ತಾಗಿ ಬರೋ ಒಂದಷ್ಟು ಸವಲತ್ತುಗಳು ಮಜಾ ಕೊಡ್ತಿದ್ವು. ಅದಿಕ್ಕೆ ಅವುಗಳನ್ನ ಮರೆಯೋಕಾಗಲ್ಲ .. ಆದ್ರೆ ನಾವು ಬೆಳೆದಂತೆ ಬಹುಶಃ ಮಳೆಯನ್ನು ನೋಡುವ ರೀತಿ ಅದನ್ನು ಆಸ್ವಾದಿಸುವ ರೀತಿ ಎಲ್ಲವೂ ಬದಲಾಗುತ್ತಾ ಹೋಗುತ್ತವೆ. ತಣ್ಣನೆ ಹನಿಗಳು ಯಾವ ಮನಸ್ಸಿಗೆ ಮುದ ಕೊಡುತ್ತಿದ್ವೋ ಅದೇ ಹನಿಗಳು ಸಾಕೆನ್ನಿಸಿ ಬಿಡುತ್ತವೆ.

ನಾನು ಮಲೆನಾಡ ಮಳೆ, ಕರಾವಳಿಯ ಮಳೆ ಇವತ್ತಿಗೆ ಕಾಂಕ್ರೀಟ್ ಕಾಡಾದ ಬೆಂಗಳೂರಿನ ಮಳೆ.. ಎಲ್ಲವನ್ನು ಜೀವಿಸಿದ್ದೇನೆ, ಅನುಭವಿಸಿದ್ದೇನೆ. ವ್ಯತ್ಯಾಸವಿಷ್ಟೇ, ಮಲೆನಾಡಿನ ಮಳೆಗೆ ಶಾಲೆಗೆ ಹೋಗೋ ಪುಟ್ಟ ಹುಡುಗಿ ಶೀತಲ್‌ಳ ಕಂದು ಬಣ್ಣದ ಸ್ಕೂಲ್ ಯೂನಿಫಾರ್ಮ್ ನೆನೆಯುತಿತ್ತು, ಕರಾವಳಿಯ ಮಳೆಗೆ ಕಾಲೇಜಿಗೆ ಹೋಗೋ ಶೀತಲ್‌ಳ ಚೂಡಿದಾರದ ದುಪಟ್ಟಾ ನೆನೆಯುತಿತ್ತು. ಈಗ ಬೆಂಗಳೂರಿನ ಕಿಟಕಿಯಾಚೆಗೆ ನೋಡುವ ಮಳೆ ಹಳೇ ಮಳೆಗಳನ್ನ ನೆನಪಿಸಿ ಕಣ್ಣಾಲಿಗಳನ್ನು ನೆನೆಸುತ್ತಿದೆ...ಒಟ್ಟಿನಲ್ಲಿ ಮಳೆ ನನಗೆ ಒಂದೊಳ್ಳೆ ಸಂಗೀತ. ಭಾವ... ಮಳೆ ಸುರಿಯುವ ಆ ಕ್ಷಣಕ್ಕೆ ಸ್ವಂತ.

ಶೀತಲ್ ಶೆಟ್ಟಿ, ನಟಿ, ನಿರ್ದೇಶಕಿ

ಮಳೆ: ಪ್ರೀತಿ, ಅನುಭವದ ಪ್ರವಾಹ



ಮಳೆ ಒಂದು ಕಡೆ ಆಶೀರ್ವಾದ. ಅದೇ ಮಳೆ ತನ್ನ ಆಕ್ರೋಶ ವ್ಯಕ್ತಪಡಿಸಿದರೆ... ಭಯಾನಕ. ಅಂಥ ಮಳೆಯ ಅನುಭವ ನನಗೆ, ನಮ್ಮ ಕೊಡಗಿನ ಜನರಿಗೆ ಆಗಿದೆ.

ಮಳೆ ಎಂದರೆ ನನಗೆ ಮರೆಯಲಾಗದ ನೆನಪು. ನಮಗೆ ಇಂಥದ್ದೊಂದು ಅನುಭವ ಕೊಡಬಹುದು ಎಂದು ಊಹಿಸದ ರೀತಿಯಲ್ಲಿ ಬಂದ ಮಳೆ, ಪ್ರವಾಹ, ಮಳೆಗಾಲದಲ್ಲೇ ಉಲ್ಬಣಿಸಿದ ಕೋವಿಡ್ ಪ್ರಕರಣಗಳು ಬಹಳಷ್ಟು ಕಲಿಸಿವೆ.

ಸುಮಾರು ನಾಲ್ಕು ವರ್ಷಗಳ ಹಿಂದೆ ಕೊಡಗಿನಲ್ಲಿ ಬಂದ ಪ್ರವಾಹ ಈ ಅನುಭವ ನೀಡಿತು. ನಮ್ಮ ಬಂಧುಗಳು ಸಹಿತ ನೂರಾರು ಜನರು ತಮ್ಮ ಮನೆ, ಭೂಮಿ ಕಳೆದುಕೊಂಡು ಗಂಜಿ ಕೇಂದ್ರಗಳಲ್ಲಿ ಆಸರೆ ಪಡೆದಿದ್ದರು. ಅವರಿಗೆ ಸಾಧ್ಯವಾದಷ್ಟು ಸಹಾಯ ಮಾಡಬೇಕು ಎಂದು ನಾನು ಮತ್ತು ಭುವನ್ ಧಾವಿಸಿದೆವು. ನಮ್ಮ ಕೈಲಾದಷ್ಟು ಸಹಾಯ ಮಾಡಲು ಮುಂದಾದೆವು ಅಷ್ಟೇ.

ಆ ಬಳಿಕ ಕೋವಿಡ್ ಎರಡನೇ ಅಲೆ ಬಂದಾಗಲೂ ಭಾರೀ ಮಳೆ. ಆ ಹೊತ್ತಿನಲ್ಲಿ ಕೊಡಗಿನಲ್ಲಿ ಕೋವಿಡ್ ಪೀಡಿತರ ಅಷ್ಟೂ ಮನೆಗಳನ್ನು ತಲುಪಿದ್ದೆವು. ಆಗ ಸೀಲ್‌ಡೌನ್ ಆದ ಪ್ರದೇಶವೊಂದಕ್ಕೆ ಭೇಟಿ ಕೊಟ್ಟು ಅಗತ್ಯ ವಸ್ತುಗಳನ್ನು ಕೊಟ್ಟೆವು. ಅಲ್ಲಿಂದ ವಾಪಸಾಗುವಾಗ ಒಬ್ಬಳು ಹೆಣ್ಣುಮಗಳು ಬಂದು ನನ್ನನ್ನು ಮಾತನಾಡಿಸಿದಳು.

'ಮೇಡಂ ನನ್ನ ಪರಿಚಯ ಆಯ್ತಾ?. ನಾಲ್ಕು ವರ್ಷಗಳ ಹಿಂದೆ ಕೊಡಗಿನ ಪ್ರವಾಹದ ಸಂದರ್ಭದಲ್ಲಿ ನಾವಿದ್ದ ಗಂಜಿ ಕೇಂದ್ರಕ್ಕೆ ನೀವು ಬಂದಿದ್ರಿ. ನಮ್ಮ ಮಕ್ಕಳನ್ನೆಲ್ಲಾ ನೀವು ಆಟವಾಡಿಸಿದ್ರಿ. ನಮ್ಮೊಂದಿಗೆ ನಗುನಗುತ್ತಾ ಕಾಲ ಕಳೆದಿರಿ. ನಮಗೆ ಬೇಕಾದ ವಸ್ತುಗಳನ್ನೆಲ್ಲಾ ಕೊಟ್ಟು ಸಹಾಯ ಮಾಡಿದ್ರಿ. ಈಗ ನೋಡಿ ಆ ಮಕ್ಕಳೆಲ್ಲಾ ದೊಡ್ಡವರಾಗಿದ್ದಾರೆ...' ಎಂದು ಮಕ್ಕಳನ್ನು ತೋರಿಸಿದಳು.

ಅವಳ ಮಾತು ಕೇಳಿ, ನಾವು ಅಲ್ಲಿಗೆ ಭೇಟಿ ನೀಡಲು ಪಟ್ಟ ಕಷ್ಟವೆಲ್ಲಾ ಮರೆತುಹೋಯಿತು. ನನ್ನ ಸಿನಿಮಾಗಳನ್ನು ನೋಡಿಯೋ ಅಥವಾ ಇನ್ನೆಲ್ಲೋ ಪರಿಚಯವಾದಾಗಲೋ ನೆನಪಿಟ್ಟು ಮಾತನಾಡುವುದು ಬೇರೆ. ಆದರೆ, ನಾಲ್ಕು ವರ್ಷಗಳ ಹಿಂದೆ ಯಾವತ್ತೋ ಒಂದು ದಿನ ಭೇಟಿ ನೀಡಿದ್ದನ್ನೇ ನೆನಪಿಟ್ಟುಕೊಂಡು ಕೃತಜ್ಞತೆಯಿಂದ ಮಾತನಾಡುವುದಿದೆಯಲ್ಲಾ... ಅದನ್ನು ಮರೆಯಲಾಗದು.

ನಾವು ಮಾತು ಮುಗಿಸಿ ವಾಪಸಾಗುವಾಗ ನಮ್ಮ ಜೀಪಿನ ತುಂಬಾ ನಾಲ್ಕೈದು ಹಲಸಿನ ಹಣ್ಣು, ಜೇನುತುಪ್ಪ, ಮತ್ತೊಂದಿಷ್ಟು ಹಣ್ಣುಗಳು... ಹೀಗೆ ಏನೇನೋ ತುಂಬಿ ಕಳುಹಿಸಿದ್ದರು. ಅಂಥ ಜನರಿಗೆ ನಾವು ತುಂಬಾ ಹತ್ತಿರವಾಗಿದ್ದೇವೆ. ಇನ್ನೂ ಹೇಳಬೇಕಾ... ಅದೇ ಮಳೆಗಾಲದಲ್ಲಿ ಹುಟ್ಟಿದ ಮಗುವಿಗೆ ನನ್ನ ಹೆಸರನ್ನಿಟ್ಟು ಜನ ಪ್ರೀತಿ ತೋರಿದ್ದರು. ಹೌದು ಜಗತ್ತಿನಲ್ಲಿ ಪ್ರೀತಿಗೆ, ನಿಸ್ವಾರ್ಥತೆಗೆ ಇನ್ನೂ ಮೌಲ್ಯವಿದೆ. ಅದೂ ನಮ್ಮ ಹಳ್ಳಿಗಳಲ್ಲಿ...

ಹರ್ಷಿಕಾ ಪೂಣಚ್ಚ, ನಟಿ

ಮಳೆ: ಮಂಗಳೂರು ಟು ಬೆಂಗಳೂರು

ಮಳೆ ಎಂದರೆ ನನಗೆ ಮಂಗಳೂರು ತುಂಬಾ ನೆನಪಾಗುತ್ತದೆ. ಮಂಗಳೂರಿನ ಮಳೆ ಕಾಲ ಕಳೆಯಲು ಒಳ್ಳೆಯದು. ಏಕೆಂದರೆ ಒಮ್ಮೆ ದೋ ಎಂದು ಶುರುವಾದ ಮಳೆ ಬಿಡುವುದೇ ಇಲ್ಲ. ಬೆಂಗಳೂರಿನ ಮಳೆ ಉದ್ಯೋಗಕ್ಕೆ ಒಳ್ಳೆಯದು. ಏಕೆಂದರೆ ಒಮ್ಮೆ ಬಂದು ಆಗಾಗ ಬ್ರೇಕ್ ಕೊಟ್ಟು ನಮ್ಮ ಕೆಲಸಗಳು ಮುಂದುವರಿಯಲು ಅವಕಾಶ ಕೊಡುತ್ತದೆ. ವರ್ಕ್‌ಲೈಫ್‌ಗೆ ಬೆಂಗಳೂರಿನ ಮಳೆ ಇಷ್ಟ.

ಮಂಗಳೂರಿನಲ್ಲಿ ಮಳೆನೋಡುತ್ತಾ ಬಿಂದಾಸ್ ಆಗಿ ಕಾಲ ಕಳೆಯುತ್ತಿದ್ದೆವು. ಶಾಲೆಗೆ ಹೋಗಿ ಬರುವಾಗ ಅಮ್ಮ ಫಿಷ್ ಕಟ್ಲೆಟ್, ಸ್ಯಾಂಡ್‌ವಿಚ್, ಪಾವ್ ಬಾಜಿ ಮಾಡುತ್ತಿದ್ದರು. ಹಾಗೆ ಮಳೆ ಸುರಿಯುವಾಗ ಕೋರಿ ಸುಕ್ಕ, ನೀರ್‌ದೋಸೆ ತಿನ್ನುವುದು ತುಂಬಾ ಇಷ್ಟ.

ಬೆಂಗಳೂರಿನ ಮಳೆ ವೇಳೆ ಬಾಲ್ಕನಿಯಲ್ಲಿ ಕುಳಿತು ಬಿಸಿ ಬಿಸಿ ಬಜ್ಜಿ, ಬೋಂಡ ಸವಿಯುತ್ತಾ ಚಹಾ ಕುಡಿಯುವುದು ನನಗಿಷ್ಟ. ಚಹಾ ಅಂತೂ ಬೇಕೇ ಬೇಕು. ಎಷ್ಟೋ ವೇಳೆ ಬೋಂಡ ಬಜ್ಜಿ ತರಿಸಿ ತಿನ್ನುವುದೂ ಇದೆ.

ಬೆಂಗಳೂರಿನ ಮಳೆ ಏನೋ ಇಷ್ಟ. ಆದರೆ, ನಮ್ಮ ರಸ್ತೆ, ಚರಂಡಿಗಳನ್ನು ವ್ಯವಸ್ಥಿತವಾಗಿಡಬೇಕು. ಈ ಅವ್ಯವಸ್ಥೆಯಿಂದ ಮಾತ್ರ ಬೆಂಗಳೂರಿನ ಮಳೆ ಸಮಸ್ಯೆ ಎಂಬಂತೆ ಅನಿಸುತ್ತದೆ. ಸುಮ್ಮನೆ ಮಳೆಯನ್ನೇಕೆ ದೂರಬೇಕು.

ಮಳೆ ಇರಲಿ ಬಿಸಿಲಿರಲಿ. ದೇಹ ಸಹಜವಾಗಿಯೇ ಫಿಟ್ ಆಗಿಯೇ ಇದೆ. ಸಣ್ಣ ಪುಟ್ಟ ವ್ಯಾಯಾಮಗಳನ್ನಷ್ಟೇ ಮಾಡುತ್ತೇನೆ. ಹಾಗೆಂದು ತುಂಬಾ ತಲೆಕೆಡಿಸಿಕೊಳ್ಳುವುದಿಲ್ಲ.

ಅದ್ವಿತಿ ಶೆಟ್ಟಿ, ನಟಿ



ಮಳೆ ನೆನಪುಗಳ ಎರಡು ಚರಣ

ಮಳೆಗಾಲದ ಎರಡು ಘಟನೆಗಳನ್ನು ನೆನೆಸಿಕೊಳ್ಳುತ್ತೇನೆ. ಒಂದನ್ನಂತೂ ನೆನೆಸಿಕೊಂಡರೆ ಈಗಲೂ ಮೈ ನವಿರೇಳುತ್ತದೆ.

1. ಕೆಳದಿಯ ಶಿವಪ್ಪ ನಾಯಕರು ಬಿದನೂರು ಸಂಸ್ಥಾನವನ್ನು ಆಳುತ್ತಿದ್ದ ಕಾಲದಲ್ಲಿ ಎಲ್ಲೆಲ್ಲೋ ಚಿನ್ನವನ್ನು ಹೂತಿಟ್ಟಿದ್ದರು ಎನ್ನುವ ವದಂತಿಗಳಿದ್ದವು. ಅದನ್ನು ಹುಡುಕಲೆಂದು ಕೆಲವರು ಹೊಳೆಯ (ಶರಾವತಿ ಹಿನ್ನೀರು ಪ್ರದೇಶ) ಇಕ್ಕೆಲಗಳಲ್ಲೆಲ್ಲಾ ಭೂಮಿಯನ್ನು ತೋಡಿ ಆಳವಾದ ಗುಂಡಿಗಳನ್ನು ಮಾಡಿ ನಂತರ ಮುಚ್ಚದೇ ಹಾಗೇ ಬಿಟ್ಟು ಹೋಗಿರುತ್ತಿದ್ದರು. ಒಮ್ಮೆ ನನ್ನ ಮೂರು ವರ್ಷದ ತಮ್ಮನನ್ನು ಕರೆದುಕೊಂಡು ಸ್ನೇಹಿತರೊಂದಿಗೆ ಹೊಳೆಯಲ್ಲಿ ಆಡಲು ಹೋಗಿದ್ದಾಗ ಮಳೆ ನೀರಿನಿಂದ ತುಂಬಿಕೊಂಡಿದ್ದ ಒಂದು ಆಳವಾದ ಗುಂಡಿಯೊಳಗೆ ನನ್ನ ತಮ್ಮ ಜಾರಿ ಬಿದ್ದು ಮುಳುಗಿ ಮೇಲೆ ಬರಲಾಗದೇ ಒದ್ದಾಡುತ್ತಿದ್ದ. ಭಯದಿಂದ ನನ್ನ ಕೈಕಾಲು ಮರಗಟ್ಟಿ ಹೋಗಿತ್ತು. ನನ್ನ ಸಾಹಸಿ ಸ್ನೇಹಿತೆ ಲಲಿತೆಯು ಅಂದು ಧೈರ್ಯ ಮಾಡಿ ಗುಂಡಿಯಲ್ಲಿ ಇಳಿದು ಅವನನ್ನು ಈಚೆಗೆ ಎಳೆದು ಹಾಕಿದ್ದಳು.
2. 36 ವರ್ಷಗಳ ಹಿಂದೆ ಇದೇ ಹುಚ್ಚು ಮಳೆಯಲ್ಲಿ ಕೆಂಪು ಬಸ್ ಹತ್ತಿಕೊಂಡು ಅಪ್ಪನ ತೊಡೆಯ ಮೇಲೆ ಮಲಗಿ ನಿದ್ದೆ ಮಾಡಿಕೊಂಡು ಬೆಂಗಳೂರಿಗೆ ಬಂದಿಳಿದು ಆಕಾಶವಾಣಿಗೆ ಹೋಗಿ ನನ್ನ ಮೊಟ್ಟ ಮೊದಲ ಹಾಡು ಹಾಡಿ ಧ್ವನಿ ಮುದ್ರಿಸಿ ಬಂದಿದ್ದನ್ನು ಮನಸ್ಸು ಮತ್ತೊಮ್ಮೆ ಮಗುವಾಗುತ್ತದೆ. ಮಳೆಯೊಂದಿಗೆ ನನ್ನ ಸಂಗೀತದ ಪ್ರಥಮಗಳು ಅದೆಷ್ಟಿವೆಯಲ್ಲಾ ಎಂದು ಅಚ್ಚರಿಪಡುತ್ತೇನೆ.




ಈಗಲೂ ಮೋಡ ಕವಿದ ಕೂಡಲೇ, ಮಳೆ ಹನಿದ ಕೂಡಲೇ ಮಣ್ಣಿನ ಘಮ ಮೂಗಿಗೆ ಬಡಿದ ಕೂಡಲೇ ಮನಸ್ಸು ನನ್ನೂರಿಗೆ ಓಡುತ್ತದೆ. ಮಲೆನಾಡಿನ ಗದ್ದೆ- ತೋಟಗಳಿಗೆ ಬೆಟ್ಟ ಗುಡ್ಡಗಳಿಗೆ ಸ್ನಾನ ಮಾಡಿಸಿ ಚೈತನ್ಯ ತುಂಬುವ ಮಳೆಯೆಂದರೆ ಒಂದು ಮಹಾ ದೃಶ್ಯ ಕಾವ್ಯ.

ಅರ್ಚನಾ ಉಡುಪ, ಗಾಯಕಿ

(ಪೂರ್ಣ ಬರಹ ಓದಲು: www. prajavani.net ನೋಡಿ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಇನ್ನೊಬ್ಬರ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ ನಮ್ಮದೇ ಹುಚ್ಚುತನ ನಮಗೆ ಕಾಣಿಸುತ್ತದೆಯೇ?

ಶಿವರಾಮ ಕಾರಂತ

ಗ್ರಾಹಕನಿಗೆ ರಿಪೇರಿ ಹಕ್ಕು ಆಶಯವು ಅನುಷ್ಠಾನಕ್ಕೆ ಬರಲಿ

ಮೊಬೈಲ್ ಫೋನ್‌ಗಳು, ಕೃಷಿ ಉಪಕರಣಗಳು ಸೇರಿದಂತೆ ದೈನಂದಿನ ಬದುಕಿನ ಭಾಗವಾಗಿರುವ ಕೆಲವು ಉಪಕರಣಗಳ ರಿಪೇರಿಯನ್ನು 'ಗ್ರಾಹಕರ ಹಕ್ಕು' ಎಂಬುದಾಗಿ ಪರಿಗಣಿಸುವ ದಿಸೆಯಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯು ಮುಂದಡಿ ಇರಿಸಿದೆ. ಕಾರು ತಯಾರಕರು, ಮೊಬೈಲ್ ತಯಾರಿಕಾ ಕಂಪನಿಗಳು ಸೇರಿದಂತೆ ಹಲವು ಕಂಪನಿಗಳು ರಿಪೇರಿ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಸಾಧಿಸುವುದನ್ನು ತಡೆಯುವ ಉದ್ದೇಶವು ಕೇಂದ್ರ ಸರ್ಕಾರಕ್ಕೆ ಇರುವಂತಿದೆ. ಹೀಗಾಗಿ ಈ ವಲಯದ ಕಂಪನಿಗಳು, ತಮ್ಮ ಉತ್ಪನ್ನಗಳನ್ನು ಖರೀದಿಸುವ ಗ್ರಾಹಕರಿಗೆ ಅವುಗಳ ರಿಪೇರಿ ಮಾಡಿಕೊಳ್ಳಲು ಅಗತ್ಯವಿರುವ ಮಾಹಿತಿಯನ್ನು ಒದಗಿಸುವುದು ಕಡ್ಡಾಯ ಎಂಬ ನಿಯಮವನ್ನು ರೂಪಿಸುವ ಇರಾದೆ ಕೇಂದ್ರಕ್ಕೆ ಇದೆ. ಹತ್ತು ಹಲವು ಉಪಕರಣಗಳ ಗ್ರಾಹಕರು ಅವುಗಳನ್ನು ಕಂಪನಿಗಳು ಹೇಳಿದ ಸೇವಾ ಕೇಂದ್ರಗಳಲ್ಲೇ ರಿಪೇರಿ ಮಾಡಿಸಬೇಕು ಎಂಬ ಷರತ್ತನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವುದು ಈಚಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಆದರೆ, ಕೆಲವು ವರ್ಷಗಳ ಹಿಂದೆ ಇಂತಹ ಸ್ಥಿತಿ ಇರಲಿಲ್ಲ. ಜನಪ್ರಿಯ ಕಂಪನಿಯೊಂದರ ರೇಡಿಯೊ ಖರೀದಿಸಿದವರು, ಅದರ ರಿಪೇರಿಯನ್ನು ಹೋಬಳಿ ಕೇಂದ್ರದಲ್ಲಿಯೋ ತಾಲ್ಲೂಕು ಕೇಂದ್ರದಲ್ಲಿಯೋ ಮೂರನೆಯ ವ್ಯಕ್ತಿಯ ಬಳಿ ಮಾಡಿಸಿಕೊಳ್ಳುತ್ತಿದ್ದರು. ಅಂದರೆ, ತಯಾರಿಕಾ ಕಂಪನಿಯ ಅಥವಾ ಆ ಕಂಪನಿಯ ಪ್ರತಿನಿಧಿಯ ಸಹಾಯ ಇಲ್ಲದೆಯೂ ಉಪಕರಣಗಳ ರಿಪೇರಿ ಸಾಧ್ಯವಾಗುತ್ತಿತ್ತು. ಪರಿಸ್ಥಿತಿ ಈಗ ಬದಲಾಗಿದೆ. ಮೂರನೆಯ ವ್ಯಕ್ತಿಯಿಂದ ರಿಪೇರಿ ಮಾಡಿಸಿಕೊಂಡರೆ ವಾರಂಟಿ ಸೌಲಭ್ಯಗಳು ಲಭ್ಯವಾಗುವುದಿಲ್ಲ ಎಂದು ಕೂಡ ಕೆಲವು ಕಂಪನಿಗಳು ಹೇಳುತ್ತಿವೆ.



ರಿಪೇರಿಯನ್ನು ಇಂಥಲ್ಲೇ ಮಾಡಿಸಿಕೊಳ್ಳಬೇಕು ಎಂದು ಕಂಪನಿಗಳು ಷರತ್ತು ಒಡ್ಡುವುದು ಗ್ರಾಹಕನ ಮಾಲೀಕತ್ವವನ್ನೇ ಪ್ರಶ್ನಿಸುವುದಕ್ಕೆ ಸಮ

ಇಂತಹ ಪರಿಸ್ಥಿತಿಯಲ್ಲಿ ಉಪಕರಣಗಳ ರಿಪೇರಿಯನ್ನು ಗ್ರಾಹಕರ ಹಕ್ಕು ಎಂಬಂತೆ ಪರಿಗಣಿಸುವುದು ಸ್ವಾಗತಾರ್ಹ. ಕೆಲವು ದೇಶಗಳಲ್ಲಿ ರಿಪೇರಿ ಹಕ್ಕನ್ನು ಖಾತರಿಪಡಿಸುವಂತೆ ಅಲ್ಲಿನ ಸರ್ಕಾರವನ್ನು ಆಗ್ರಹಿಸಿ ಜನಸಮುದಾಯ ಚಳವಳಿ ನಡೆಸಿದ ನಿದರ್ಶನಗಳು ಇವೆ. ಯುರೋಪ್, ಅಮೆರಿಕದಲ್ಲಿ ರಿಪೇರಿ ಹಕ್ಕಿನ ಪರವಾಗಿ ಬಲವಾದ ಜನಾಭಿಪ್ರಾಯ ಕೂಡ ಇದೆ ಎಂದು ಕೆಲವು ವರದಿಗಳು ಹೇಳುತ್ತವೆ. ಆದರೆ, ಭಾರತದಲ್ಲಿ ಇದು ಇನ್ನೂ ಒಂದು ಜನಾಂದೋಲನದ ರೂಪ ಪಡೆದಿಲ್ಲ. ಉಪಕರಣವನ್ನು ಖರೀದಿಸುವ ಗ್ರಾಹಕರಿಗೆ ಅದನ್ನು ತಾವೇ ರಿಪೇರಿ ಮಾಡಿಕೊಳ್ಳುವ ಅಥವಾ ಕಂಪನಿಗೆ ಸಂಬಂಧಪಡದ ವ್ಯಕ್ತಿಯೊಬ್ಬನ ಮೂಲಕ ರಿಪೇರಿ ಮಾಡಿಸಿಕೊಳ್ಳುವ ಅವಕಾಶ ಇರಲೇಬೇಕು ಎಂಬ ಆಗ್ರಹದ ಹಿಂದೆ ತರ್ಕ ಇದೆ. ಗ್ರಾಹಕನು ಒಂದು ಉಪಕರಣವನ್ನು ಖರೀದಿಸಿದ ನಂತರ ಅದರ ಪೂರ್ಣ ಮಾಲೀಕತ್ವ ಅವನದ್ದಾಗುತ್ತದೆ. ಹೀಗಿರುವಾಗ, ರಿಪೇರಿಯನ್ನು ಇಂಥವರಲ್ಲಿಯೇ ಮಾಡಿಸಿಕೊಳ್ಳಬೇಕು, ತಾವು ಹೇಳುವ ಸೇವಾ ಕೇಂದ್ರದಲ್ಲಿಯೇ ಅದನ್ನು ಸರಿಪಡಿಸಿಕೊಳ್ಳಬೇಕು ಎಂದು ಕಂಪನಿಗಳು ಷರತ್ತು ಒಡ್ಡುವುದು ಅವನ ಮಾಲೀಕತ್ವವನ್ನೇ ಪ್ರಶ್ನಿಸುವುದಕ್ಕೆ ಸಮ. ರಿಪೇರಿ ಮಾಡಿಕೊಳ್ಳುವುದು ಅಥವಾ ಮಾಡಿಸಿಕೊಳ್ಳುವುದು ಗ್ರಾಹಕನ ಹಕ್ಕಾದಾಗ, ಕಂಪನಿಗಳು ಈ ರೀತಿ ಷರತ್ತು ಒಡ್ಡುವುದಕ್ಕೆ ಅವಕಾಶ ಇರುವುದಿಲ್ಲ. ಕೇಂದ್ರ ಸರ್ಕಾರ ಈಗ ಇರಿಸಿರುವುದು ತೀರಾ ಪ್ರಾಥಮಿಕ ಹೆಜ್ಜೆ. ಕೇಂದ್ರದ ಆಲೋಚನೆಯು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬಂದಿದ್ದೇ ಆದಲ್ಲಿ ಗ್ರಾಹಕರಿಗೆ ಅನುಕೂಲ ವಾಗುವುದರಲ್ಲಿ ಅನುಮಾನವಿಲ್ಲ.

ರಿಪೇರಿ ಹಕ್ಕನ್ನು ಗ್ರಾಹಕರಿಗೆ ಖಾತರಿಪಡಿಸಬೇಕು ಎಂದಾದರೆ ಸರ್ಕಾರವು ಕೆಲವು ಅಂಶಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕು. ಉಪಕರಣಗಳ ವಿನ್ಯಾಸವು, ಅವುಗಳನ್ನು ಮುಂದೊಂದು ದಿನ ಸುಲಭವಾಗಿ ರಿಪೇರಿ ಮಾಡಿಕೊಳ್ಳಲು ಸಾಧ್ಯವಾಗುವಂತೆ ಇರಬೇಕು. ಉಪಕರಣಗಳ ಬಿಡಿಭಾಗಗಳು ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಾಗುವಂತೆ ಮಾಡಬೇಕು. ಬಿಡಿಭಾಗಗಳು ಕಂಪನಿ ಹೇಳಿದ ವರ್ತಕರಲ್ಲಿ ಮಾತ್ರ ಸಿಗುವಂತೆ ಆಗಬಾರದು. ಅವುಗಳನ್ನು ಯಾವುದೇ ವರ್ತಕ ತನ್ನ ಗ್ರಾಹಕನಿಗೆ ತರಿಸಿಕೊಡಲು ಸಾಧ್ಯವಾಗಬೇಕು. ಉಪಕರಣಗಳ ರಿಪೇರಿಗೆ ಅಗತ್ಯವಿರುವ ಸಲಕರಣೆಗಳು ಕೂಡ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಿರಬೇಕು. ಉಪಕರಣವನ್ನು ರಿಪೇರಿ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಸುವ ಕೈಪಿಡಿಗಳು ಗ್ರಾಹಕರಿಗೆ ಹಾಗೂ ರಿಪೇರಿ ವೃತ್ತಿಯಲ್ಲಿ ತೊಡಗಿಕೊಂಡಿರುವವರಿಗೆ ಸುಲಭವಾಗಿ ಸಿಗುವಂತೆ ಆಗಬೇಕು. ದ್ವಿಚಕ್ರ ವಾಹನಗಳು, ಕೆಲವು ಪ್ರಯಾಣಿಕ ವಾಹನಗಳು, ರೇಡಿಯೊ, ಟೇಪ್ ರೆಕಾರ್ಡರ್ ಮುಂತಾದ ನಿತ್ಯ ಬಳಕೆಯ ವಾಹನ, ಉಪಕರಣಗಳ ರಿಪೇರಿ ಹೇಗೆ ಎಂಬುದನ್ನು ವಿವರಿಸುವ ಪುಸ್ತಿಕೆಗಳು ಮಾರುಕಟ್ಟೆಯಲ್ಲಿ ಲಭಿಸುತ್ತಿದ್ದವು. ಆದರೆ, 'ನಮ್ಮ ಸೇವಾ ಕೇಂದ್ರಗಳಲ್ಲಿ ಮಾತ್ರ ರಿಪೇರಿ' ಎಂಬ ಪರಿಪಾಟ ವ್ಯಾಪಕವಾದಂತೆಲ್ಲ ಈ ಬಗೆಯ ಪುಸ್ತಿಕೆಗಳು ಮರೆಯಾಗಿವೆ. ಈ ಮಾತುಗಳನ್ನು ರಿಪೇರಿ ಹಕ್ಕಿನ ಪರವಾಗಿ ದನಿ ಎತ್ತಿದವರು ಕಾಲಕಾಲಕ್ಕೆ ಹೇಳುತ್ತಲೇ ಬಂದಿದ್ದಾರೆ. ರಿಪೇರಿಯನ್ನು ಹಕ್ಕಿನ ನೆಲೆಯಲ್ಲಿ ಜಾರಿಗೆ ತಂದರೆ, ಕಂಪನಿ ಸೇವಾ ಕೇಂದ್ರಗಳ ಆಚೆಗೂ ರಿಪೇರಿ ಮಾಡುವ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ ಎಂಬುದನ್ನು ಮರೆಯುವಂತಿಲ್ಲ.

ದಿನದ ಟ್ವೀಟ್

ಚುನಾವಣಾ ಗಿಮಿಕ್



ಚುನಾವಣೆಗಳು ಸಮೀಪಿಸುತ್ತಿರುವಾಗ ನಿಮ್ಮ ಕ್ಷೇತ್ರಗಳಲ್ಲಿ ನೀವು ಏನನ್ನು ನಿರೀಕ್ಷಿಸಬಹುದೆಂದರೆ: ಆರೋಗ್ಯ ಶಿಬಿರಗಳು, ಕ್ರಿಕೆಟ್ ಟೂರ್ನಮೆಂಟ್, ಹಿರಿಯ ನಾಗರಿಕರ ಸಭೆ, ಉದ್ಯೋಗ ಮೇಳ, ಕಲ್ಯಾಣೋತ್ಸವ ಕಾರ್ಯಕ್ರಮಗಳು, ಉಚಿತ ಆಹಾರ ವಿತರಣೆ, ತೀರ್ಥಯಾತ್ರೆ ಪ್ರವಾಸ, ಆರ್ಕೆಸ್ಟ್ರಾ, ವಿವಿಧ ಬಗೆಯ ಹೋಮಗಳು, ಪುಸ್ತಕ ಕೊಡುಗೆ. ಸೇರಿಸಲು ಇನ್ನೇನಾದರೂ ಉಳಿದಿದೆಯೇ?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಸರ್ಕಾರಿ ಕಚೇರಿಗಳಲ್ಲಿ ಮೊಬೈಲ್ ಮತ್ತು ಕ್ಯಾಮೆರಾ ಮೂಲಕ ಚಿತ್ರೀಕರಣ ಮಾಡುವುದಕ್ಕೆ ನಿಷೇಧ ಹೇರುವ ಮೂಲಕ ರಾಜ್ಯ ಸರ್ಕಾರವು ಭ್ರಷ್ಟಾಚಾರಕ್ಕೆ ಮತ್ತಷ್ಟು ಪ್ರೋತ್ಸಾಹ ನೀಡಿದೆ. ಜನಪರ ಸಂಘಟನೆಗಳ, ರಾಜಕೀಯ ಪಕ್ಷಗಳ ಹೋರಾಟಕ್ಕೆ ಹೆದರಿ ಇಂತಹ ನಿರ್ಧಾರಕ್ಕೆ ಬಂದಂತಿದೆ. ಪ್ರಜಾಪ್ರಭುತ್ವ ವಿರೋಧಿ ಆದೇಶವನ್ನು ಹಿಂಪಡೆಯಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಎ.ಪಿ.ರಂಗನಾಥ, ವಕೀಲ

25 ವರ್ಷಗಳ ಹಿಂದೆ

ಬುಧವಾರ, 16-7-1997

• **ವೀರಪ್ಪನ್‌ನಿಂದ ಸಂದೇಶ ಇಲ್ಲ: ಪಟೇಲ್ ಸ್ಪಷ್ಟನೆ**

ಬೆಂಗಳೂರು, ಜುಲೈ 15– ಒಂಬತ್ತು ಮಂದಿ ಒತ್ತೆಯಾಳುಗಳ ಬಗ್ಗೆ ಕಾಡುಗಳ್ಳ ವೀರಪ್ಪನ್‌ನಿಂದ ಇನ್ನೂ ಯಾವುದೇ ಸಂದೇಶ ಬಂದಿಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಇಲ್ಲಿ ತಿಳಿಸಿದರು.

ಒತ್ತೆಯಾಳುಗಳು ಎಲ್ಲಿದ್ದಾರೆ ಗೊತ್ತಿಲ್ಲ. ಆದರೆ, ಒಂಬತ್ತು ಮಂದಿಯೂ ಸುರಕ್ಷತೆಯಿಂದ ಇದ್ದಾರೆ ಎಂದು ತಿಳಿಸಲಾಗಿದೆ ಎಂದ ಅವರು, ಈ ಮಾಹಿತಿಯ ಮೂಲವನ್ನು ತಿಳಿಸಲು ಬಯಸಲಿಲ್ಲ.

ತಮಿಳುನಾಡು ಸರ್ಕಾರದೊಂದಿಗೆ ಈ ವಿಚಾರದಲ್ಲಿ ಸತತವಾಗಿ ಸಂಪರ್ಕವನ್ನು ಇಟ್ಟುಕೊಂಡಿದ್ದು, 'ಈಗ ವೀರಪ್ಪನ್ ಪ್ರತಿಕ್ರಿಯಿಸಬೇಕಾಗಿದೆ' ಎಂದರು.

50 ವರ್ಷಗಳ ಹಿಂದೆ

ಭಾನುವಾರ, 16-7-1972

• **ತಲೆಯ ಮೇಲೆ ಮಲ ಒಯ್ಯುವ ಪದ್ಧತಿಯಿಂದ ಮುಕ್ತಿ: ಮನೆಗಳಲ್ಲಿ ಶೌಚಸ್ಥಳ ನಿರ್ಮಾಣ ಕಡ್ಡಾಯ**

ಬೆಂಗಳೂರು, ಜುಲೈ 15– ಮಲ– ಹೊಲಸನ್ನು ಜಾಡಮಾಲಿಗಳು ತಲೆಯ ಮೇಲೆ ಹೊತ್ತು ಒಯ್ಯುವುದನ್ನು ನಿಲ್ಲಿಸುವುದೇ ಅಲ್ಲದೆ ಮನೆಗಳಲ್ಲಿ ಶೌಚ ಸ್ಥಳಗಳ ನಿರ್ಮಾಣವನ್ನು ಕಡ್ಡಾಯ ಮಾಡಲು ಪುರಸಭೆಗಳಿಗೆ ಸಂಬಂಧಿಸಿದ ಶಾಸನವನ್ನು ಸೂಕ್ತವಾಗಿ ತಿದ್ದುಪಡಿ ಮಾಡಲಾಗುವುದು.

ಸ್ವಾತಂತ್ರ್ಯದ ರಜತ ಮಹೋತ್ಸವದ ಅಂಗವಾಗಿ ಕೈಗೊಳ್ಳುವ ಕಾರ್ಯಕ್ರಮದಂತೆ, ಶೌಚ ಸೌಕರ್ಯವಿಲ್ಲದ ಮನೆಗಳ ನಿರ್ಮಾಣಕ್ಕೆ ಲೈಸೆನ್ಸ್ ನೀಡಲಾಗುವುದಿಲ್ಲ. ಈಗಿರುವ ಮನೆಗಳೂ ಈ ಸೌಕರ್ಯ ಕಲ್ಪಿಸಿಕೊಳ್ಳಬೇಕೆಂದು ಕಡ್ಡಾಯ ಮಾಡಲಾಗುವುದು.

• **ದುರ್ವ್ಯವಹಾರಿ ಅಧಿಕಾರಿಗಳ ವಿರುದ್ಧ ತೀವ್ರ ಕ್ರಮ**

ಬೆಂಗಳೂರು, ಜುಲೈ 15– ನಗರ ಕಾರ್ಪೊರೇಷನ್ ಆಡಳಿತದ ದುರ್ವ್ಯವಹಾರದಲ್ಲಿ ತೊಡಗಿರುವ ಅಧಿಕಾರಿ ಯಾರೇ ಆಗಲಿ ಅವರ ಮೇಲೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ಪೌರಾಡಳಿತ ಸಚಿವ ಶ್ರೀ ಬಿ. ಬಸವಲಿಂಗಪ್ಪನವರು ಇಂದು ವಿಧಾನಸಭೆಯಲ್ಲಿ ಹೇಳಿದರು.

ಈಗಾಗಲೇ ಕೆಲವರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಬೇರೆಯವರು ಅದರಿಂದ ತಪ್ಪಿಸಿಕೊಂಡೆವೆಂಬ ಭಾವನೆ ಹೊಂದಬೇಕಾಗಿಲ್ಲ. ವಿಜಿಲೆನ್ಸ್ ಕಮಿಷನ್ ವರದಿಯಲ್ಲಿ ಇರುವವರ ಮೇಲೆಲ್ಲಾ ಶೀಘ್ರದಲ್ಲೇ ಕ್ರಮ ಕೈಗೊಳ್ಳುತ್ತೇವೆ. ನಗರಸಭೆಗೆ ಯಾರು ಲಕ್ಷಾಂತರ ರೂಪಾಯಿ ನಷ್ಟ ಮಾಡಿದ್ದಾರೋ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದರು.

ಲಂಚದ ಚಟ ಇರುವ ಅಧಿಕಾರಿಗಳು ಹೇಗೆ ತಪ್ಪಿಸಿದರೂ ಒಂದಲ್ಲಾ ಒಂದು ರೀತಿ ಅದನ್ನು ತೆಗೆದುಕೊಳ್ಳುತ್ತಾರೆ. ಅವರನ್ನು ಹಿಡಿದು ಪೊಲೀಸರಿಗೆ ಕೊಡೋಣ ಎಂದರು.

ಸಂವಿಧಾನಕ್ಕಿಂತ 'ಸಂಘ'ವೇ ಘನವೆಂದು ಘೋಷಿಸಿದರೆ 'ಸಂತೋಷ'

ಹುಸಿ ಪಠ್ಯವೂ ಹಸಿ ಸುಳ್ಳೂ



ಗತಿಬಿಂಬ

ವೈ.ಗ.ಜಗದೀಶ್

ಸತ್ಯದ ಬದಲು ಸುಳ್ಳಿನ ವಿಜೃಂಭಣೆ, ವಿವೇಕದ ಮೇಲೆ ಅವಿವೇಕದ ಆಕ್ರಮಣ, ಧರ್ಮದ ಮಾರ್ಗದಲ್ಲಿ ಅಧರ್ಮದ ತಾಂಡವ ಶುರುವಾದರೆ, ಅಂತಹ ಸಮಾಜ ನರಳುವಿಕೆಯ ಕಡೆಗೆ, ಜನಾಂಗೀಯ ದ್ವೇಷದ ದಿಕ್ಕಿಗೆ ಸಾಗಿದ್ದನ್ನು ಚರಿತ್ರೆ ತೋರಿಸಿದೆ. ಸರಿಸುಮಾರು ನೂರು ವರ್ಷಗಳ ಹಿಂದೆ ವಿಶ್ವವನ್ನೇ ತನ್ನ ಅಂಗೈಯಲ್ಲಿ ಕುಣಿಸಲು ಮುಂದಾಗಿದ್ದ ಹಿಟ್ಲರ್, ಇಂತಹದೇ ದಾರಿಯಲ್ಲಿ ನಡೆದಿದ್ದ. ಆತನ ಆಪ್ತ ಜೋಸೆಫ್ ಗೋಬೆಲ್ಸ್, ಸುಳ್ಳುಗಳನ್ನು ಹೆಣೆದು ಜನರನ್ನು ಮರುಳು ಮಾಡಿ ನಾಜಿ ಪಂಥವನ್ನು ಗಟ್ಟಿಗೊಳಿಸಿದ್ದ. ಆ ಉದ್ದೇಶಕ್ಕಾಗಿಯೇ ಗೋಬೆಲ್ಸ್‌ನಿಗೆ 'ಪ್ರಾಪಗ್ಯಾಂಡ' ಸಚಿವ ಸ್ಥಾನವೂ ಸಿಕ್ಕಿತ್ತು. ಪ್ರಾಪಗ್ಯಾಂಡ ಎಂದರೆ ಪ್ರಚಾರ, ಪ್ರಸರಣ ಎಂಬ ಅರ್ಥವಿದೆಯಾದರೂ ಎದುರಾಳಿಗಳ ಬಗ್ಗೆ ಸುಳ್ಳು ಹೇಳುವುದು, ತಮ್ಮ ಸಿದ್ಧಾಂತವನ್ನು ಪ್ರಚಾರ ಮಾಡುವುದು ಎಂಬ ವಿಶಾಲಾರ್ಥವೂ ಇದೆ.


ಒಂದು ವರ್ಷದ ಈಚೆಗಿನ ಕರ್ನಾಟಕದ ವಿದ್ಯಮಾನಗಳನ್ನು ಗಮನಿಸಿದರೆ, ಗೋಬೆಲ್ಸ್‌ನ ಉತ್ತರಾಧಿಕಾರಿಗಳು ಹೇಗೆ ನಾಡನ್ನು ವಿಭ್ರಮೆಯ ಕಡೆಗೆ ಕರೆದೊಯ್ದು, ತಮ್ಮ ಕೋಮುವಾದಿ ಸಿದ್ಧಾಂತವನ್ನು ಮುಗ್ಧರ ನರನಾಡಿಗಳಲ್ಲಿ ತುಂಬುತ್ತಿದ್ದಾರೆ ಎಂಬುದು ಗೋಚರಿಸುತ್ತದೆ. ಸರ್ಕಾರದ ಕಾಮಗಾರಿಗಳಲ್ಲಿನ ಗುತ್ತಿಗೆಯಲ್ಲಿ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ಗುತ್ತಿಗೆದಾರರೇ ಹೇಳಿದಾಗ, 'ಅದೆಲ್ಲ ಸುಳ್ಳು; ಕಾಂಗ್ರೆಸ್‌ನವರ ಚಿತಾವಣೆ' ಎಂದು ಸಚಿವರಾದ ಗೋವಿಂದ ಕಾರಜೋಳ ಮತ್ತು ಸಿ.ಸಿ.ಪಾಟೀಲ ಸಮರ್ಥನೆಗೆ ಇಳಿದರು. ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದಾಗ 'ಅಕ್ರಮ ನಡೆದೇ ಇಲ್ಲ; ನಡೆದಿದ್ದರೆ ಕಾಂಗ್ರೆಸ್‌ನವರ ಪಿತೂರಿ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು. ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಪ್ರಮಾದಗಳನ್ನೇ ಎಸಗಲಾಗಿದೆ ಎಂದು ದಾಖಲೆ ಸಮೇತ ತೋರಿಸಿದಾಗ, 'ಯಾವುದೇ ಪಠ್ಯವನ್ನೂ ಬದಲಾವಣೆ ಮಾಡಿಲ್ಲ. ತಪ್ಪು ಮಾಡಿದ್ದು ಬರಗೂರರ ಸಮಿತಿ. ಅದನ್ನು ಸರಿಪಡಿಸುವ ಕೆಲಸ ಮಾಡಿದ್ದೇವೆ. ಇಲಾಖೆಯ ಸಾಧನೆ ಸಹಿಸಲಾಗದೆ ಪಠ್ಯಪುಸ್ತಕ ವಿವಾದವನ್ನು ಕಾಂಗ್ರೆಸ್ ಮುನ್ನೆಲೆಗೆ ತಂದಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಪ್ರತಿಪಾದಿಸಿದರು.

ಇದನ್ನೆಲ್ಲ ಕಾಂಗ್ರೆಸ್‌ನವರು ಮಾಡಿದ್ದರೆ ಅದು ಅಪರಾಧವೇ. ಕಾಂಗ್ರೆಸ್‌ನವರು ಭ್ರಷ್ಟರು, ಆಡಳಿತ ನಿರ್ವಹಿಸುವಲ್ಲಿ ಅಸಮರ್ಥರು ಎಂಬ ಕಾರಣಕ್ಕೆ, 2018ರಲ್ಲಿ ನಡೆದ ಚುನಾವಣೆಯಲ್ಲಿ ಅವರನ್ನು ಜನ ಅಧಿಕಾರದಿಂದ ಕೆಳಕ್ಕೆ ದೂಡಿದ್ದಲ್ಲವೇ? ಅಧಿಕಾರ ನಿಮ್ಮ ಬಳಿಯೇ ಇರುವಾಗ, ಕಾಂಗ್ರೆಸ್‌ನವರು ತಪ್ಪೆಸಗಿದ್ದರೆ ಅವರನ್ನು ಹೆಡೆಮುರಿ ಕಟ್ಟಲಾಗದಷ್ಟು ನಿಮ್ಮ ಕಾನೂನುಗಳು ದುರ್ಬಲವಾಗಿವೆಯೇ? ಅಥವಾ ಅವರಿಂತ ಹೆಚ್ಚು ತಪ್ಪು ಮಾಡಿದ್ದೇವೆ ಎಂಬ ಪಶ್ಚಾತ್ತಾಪದ ಬೇಗುದಿಯಲ್ಲಿ ನೀವೇ ಬೇಯುತ್ತಿದ್ದೀರಾ? ಈ ಪ್ರಶ್ನೆಗಳಿಗೆ ಸಚಿವರು, ಆಡಳಿತ ಪಕ್ಷದ ಶಾಸಕರು, ದೆಹಲಿಯಲ್ಲಿ ಕುಳಿತು ಕರ್ನಾಟಕ ಸರ್ಕಾರವನ್ನು ತಮ್ಮ ಮೂಗುದಾರದಡಿ ತಿರುಗಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರೇ ಉತ್ತರಿಸಬೇಕು.

ಪಠ್ಯಪುಸ್ತಕ ಪರಿಶೀಲನೆಗೆ ರಚಿಸಿದ್ದ ಸಮಿತಿಯು ಕಾನೂನುಬಾಹಿರವಾಗಿ ಪಠ್ಯಪರಿಷ್ಕರಣೆ ಮಾಡಿತಲ್ಲದೆ, ಉದ್ದೇಶಪೂರ್ವಕವಾಗಿ ಇತಿಹಾಸವನ್ನೇ ತಿರುಚಿತು. ಮಕ್ಕಳ ವಿದ್ಯಾರ್ಜನೆಗೆ ಪೂರಕವಾಗಬೇಕಾದ ಪಠ್ಯಪುಸ್ತಕಗಳನ್ನು 'ವೈದಿಕ' ಆಲೋಚನೆಗೆ ತಕ್ಕಂತೆ ಕೆಡವಿ ಕಟ್ಟಿದ್ದಲ್ಲದೆ, ಮಕ್ಕಳನ್ನು ಇರುಳಿನ ಕಡೆಗೆ ದೂಡಿತು. ತಪ್ಪನ್ನು ಸರಿಪಡಿಸುತ್ತೇವೆ ಎಂದು ಹೇಳಬೇಕಾಗಿದ್ದ ಸಚಿವರು, ಊರಬೀದಿಯಲ್ಲೆಲ್ಲ ಸುಳ್ಳನ್ನೇ ಬಿತ್ತುತ್ತಾ ಬಂದರು.

'ಹೊಸ ಧರ್ಮಗಳ ಉದಯ' ಎಂಬ ಪಾಠದ ಕುರಿತು ಪರಿಶೀಲನೆ ನಡೆಸಿ ವರದಿ ನೀಡಲು ರಚಿಸಿದ್ದ ಸಮಿತಿ, ಯಾವುದೇ ಆದೇಶ ಇಲ್ಲದಿದ್ದರೂ ತಾನೇ ಸರ್ಕಾರವೆಂದು ಭಾವಿಸಿಕೊಂಡು ಪರಿಷ್ಕರಣೆಯನ್ನೂ ಮಾಡಿತು. ಸಚಿವ ನಾಗೇಶ್, ಇದಕ್ಕೆ ಘಟನೋತ್ತರ ಅನುಮೋದನೆಯನ್ನೂ ಕೊಡಿಸಿದರು. ಇದನ್ನು ಗಮನಿಸಿದರೆ, ರಾಜ್ಯದಲ್ಲಿ ಸಾಂವಿಧಾನಿಕವಾಗಿ ಚುನಾಯಿತವಾದ ಸರ್ಕಾರ ಇದೆಯೇ ಅಥವಾ ಸಂವಿಧಾನಕ್ಕಿಂತ 'ಸಂಘ'ವೇ ಘನವೆಂದು ನಂಬುವವರು ಆಡಳಿತದಲ್ಲಿ ಇದ್ದಾರೆಯೇ ಎಂಬ ಗುಮಾನಿ ಹುಟ್ಟುತ್ತದೆ. ಯಾರನ್ನೋ 'ಸಂತೋಷ'ಪಡಿಸಲು ಸಂಘವೇ ಘನವೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಂಬುವುದಾದರೆ, ಅದನ್ನು ಸಾರ್ವಜನಿಕವಾಗಿ ಘೋಷಿಸಿಬಿಡಲಿ.

ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಅವಾಂತರ ಎಸಗಿರುವುದನ್ನು ಸಾಕ್ಷ್ಯಸಮೇತ ನೀಡಲಾಗಿತ್ತು. ಭಗತ್ ಸಿಂಗ್ ಕುರಿತ ಪಠ್ಯ ಕೈಬಿಟ್ಟಿರುವುದನ್ನು ಪರಿಶೀಲನಾ ಸಮಿತಿಯ ಅಧ್ಯಕ್ಷರೇ ದೃಢಪಡಿಸಿದ್ದರು. ವೈದಿಕ ಧರ್ಮದ ಆಚರಣೆಗಳನ್ನು ವಿರೋಧಿಸಿ ಹೋರಾಟ ನಡೆಸಿ, ಮಹಿಳೆಯರು ಹಾಗೂ ಹಿಂದುಳಿದವರಿಗೆ ಸ್ವಾಭಿಮಾನದ ಬದುಕು ಕಲ್ಪಿಸಿದ್ದ ನಾರಾಯಣ ಗುರು ಅವರ ಪಾಠವನ್ನು ಒಂದು ಪ್ಯಾರಾಕ್ಕೆ ಇಳಿಸಲಾಗಿತ್ತು. ಈ ಪಠ್ಯವು ಪಠ್ಯಪುಸ್ತಕ ಸಂಘದ ಅಂತರ್ಜಾಲದಲ್ಲೂ ಇತ್ತು. ಹಾಗಿದ್ದರೂ ಈ ಬಗ್ಗೆ ಪ್ರತಿಕ್ರಿಯಿಸಿದ್ದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, 'ಈ ಎಲ್ಲವೂ ಚುನಾವಣೆಯ ಗಿಮಿಕ್. ಶಾಲಾ ಪಠ್ಯಪುಸ್ತಕ ಇನ್ನೂ ಹೊರಗೆ ಬಂದಿಲ್ಲ. ಅದಾಗಲೇ ಭಗತ್ ಸಿಂಗ್, ನಾರಾಯಣ ಗುರು ಅವರ ಪಠ್ಯ ಕೈ ಬಿಡಲಾಗಿದೆ ಎಂದು ಹೇಳುತ್ತಿದ್ದಾರೆ' ಎಂದಿದ್ದರು. ಜೂನ್ 3ರಂದು ಪ್ರತಿಕ್ರಿಯಿಸಿದ್ದ ಬಿ.ಸಿ.ನಾಗೇಶ್, 'ಇದು ಕೇಸರೀಕರಣವೂ ಅಲ್ಲ, ಏನೂ ಅಲ್ಲ. ಪಠ್ಯದಲ್ಲಿ ನಾರಾಯಣ ಗುರು, ಭಗತ್ ಸಿಂಗ್ ಅವರ ವಿಚಾರವನ್ನು ಕೈಬಿಟ್ಟಿಲ್ಲ' ಎಂದು ಹೇಳಿದ್ದರು.



ಬಸವಣ್ಣ, ಕನಕದಾಸರನ್ನು ಕುರಿತ ಪಾಠವನ್ನು ಕಡಿತಗೊಳಿಸಿದ್ದಲ್ಲದೆ, ಮರುಪರಿಷ್ಕರಣೆ ಸಂದರ್ಭದಲ್ಲಿ ಸಿದ್ಧಗಂಗಾ ಹಾಗೂ ಆದಿಚುಂಚನಗಿರಿ ಶ್ರೀಗಳ ಕುರಿತ ವಿವರಗಳನ್ನು ಒಂದೇ ವಾಕ್ಯಕ್ಕೆ ಇಳಿಸಲಾಗಿತ್ತು.

'ಪರಿಷ್ಕರಣೆಯಾಗಿರುವ ಪಠ್ಯದಲ್ಲಿ ಬಸವಣ್ಣ ಅವರ ವಿಚಾರಗಳು ಪೂರ್ಣ ಪ್ರಮಾಣದಲ್ಲಿಯೇ ಇವೆ' ಎಂದು ನಾಗೇಶ್ ಹೇಳಿದ್ದರು. 'ತಿರುಚಿದ ಇತಿಹಾಸವನ್ನೇ ಮಕ್ಕಳಿಗೆ ಓದಿಸುತ್ತಿದ್ದರು. ಅದನ್ನೇ ಎಷ್ಟು ದಿನ ಸಹಿಸಿಕೊಳ್ಳಲು ಸಾಧ್ಯ' ಎಂದು ಸಚಿವ ಸುನಿಲ್ ಕುಮಾರ್ ಪ್ರಶ್ನಿಸಿದ್ದರೆ, 'ನಾರಾಯಣ ಗುರು ಅವರ ಪರಿಚಯ ಕುರಿತ ಪಾಠ ಕೈಬಿಟ್ಟಿಲ್ಲ' ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ವಾದಿಸಿದ್ದರು.

ಲಿಂಗಾಯತ, ಕುರುಬ ಸಮುದಾಯದ ಮಠಾಧೀಶರು ಹೋರಾಟದ ಎಚ್ಚರಿಕೆ ಕೊಟ್ಟ ಮೇಲೆ, ಬಸವಣ್ಣ ಹಾಗೂ ಕನಕದಾಸರ ಕುರಿತ ಪೂರ್ಣಪಾಠ ಸೇರಿಸುವಂತೆ ಮುಖ್ಯಮಂತ್ರಿ ಅವರೇ ಷರಾ ಬರೆದರು. ನಾರಾಯಣ ಗುರು ಕುರಿತ ಪಠ್ಯವನ್ನು ಮೊದಲಿದ್ದಂತೆ ಸಮಾಜವಿಜ್ಞಾನದಲ್ಲೇ ಸೇರಿಸಬೇಕು ಎಂದು ಸಚಿವ ಸುನಿಲ್ ಕುಮಾರ್ ಅವರ ಆಗ್ರಹ ಪತ್ರಕ್ಕೆ ನಾಗೇಶ್ ಅನುಮೋದನೆಯನ್ನೂ ಕೊಟ್ಟರು. ಪರಿಶಿಷ್ಟ ಜಾತಿಯನ್ನು ಪ್ರತಿನಿಧಿಸುವ ಶಾಸಕರು, ದಲಿತ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ ಮೇಲೆ, ಅಂಬೇಡ್ಕರ್ ಅವರ ಹೆಸರಿನ ಮೊದಲು, ಹಿಂದಿನ ಪಠ್ಯಗಳಲ್ಲಿದ್ದ 'ಸಂವಿಧಾನಶಿಲ್ಪಿ' ಎಂಬ ಪದ ಸೇರಿಸಲು ಸರ್ಕಾರ ಒಪ್ಪಿಕೊಂಡಿತು.

ಹೀಗೆ ಸುಳ್ಳುಗಳ ಸರಮಾಲೆಯನ್ನೇ ಪೋಣಿಸಿ ಸತ್ಯ ಮರೆಮಾಚುವ ಯತ್ನವನ್ನು ಸಚಿವರೇ ಮಾಡಿದರು. ಅದರಲ್ಲಿ ಪೂರ್ಣ ಜಯ ಸಿಗಲಿಲ್ಲ; ಆದರೆ ತಪ್ಪು ಮಾಹಿತಿಗಳಿರುವ ಪಾಠವನ್ನು ಮಕ್ಕಳಿಗೆ ಬೋಧಿಸುವುದಕ್ಕೆ ತಡೆಯನ್ನೂ ಹಾಕಲಿಲ್ಲ. 'ಸತ್ಯವೇ ದೇವರು' ಎಂದು ಗಾಂಧೀಜಿ ಹೇಳಿದ್ದರು. ಆದರೆ, ಗಾಂಧೀಜಿ ಮಾತುಗಳು ಇವರಿಗೆ ರುಚಿಸುವುದು ಕಡುಕಷ್ಟ.

ಗೋವನ್ನು ಮಾತೆ ಎಂದು ಪೂಜಿಸುವುದಾಗಿಯೂ ಅದರ ರಕ್ಷಣೆಗೆ ಪ್ರಾಣತ್ಯಾಗಕ್ಕೂ ಸಿದ್ಧ ಎಂಬುದಾಗಿಯೂ ಬಿಜೆಪಿಯವರು ಮಾತುಮಾತಿಗೆ ಹೇಳುತ್ತಾರೆ. ರಾಜ್ಯದಲ್ಲಿ ಮನೆಮಾತಾಗಿರುವ ಗೋವಿನ ಹಾಡಿನ 'ಸತ್ಯವೇ ನಮ್ಮ ತಾಯಿತಂದೆ, ಸತ್ಯವೇ ನಮ್ಮ ಬಂಧು ಬಳಗ, ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂಬ 'ಪುಣ್ಯಕೋಟಿ'ಯ ಮಾತು ಜನಜನಿತ. ಗೋವಿನ ಸತ್ಯವನ್ನು ಕಂಡು ಬದಲಾದ ಅರ್ಬುತನೆಂಬ ವ್ಯಾಘ್ರ, ತನ್ನ ಆಹಾರವೇ ಆಗಿದ್ದ ಹಸುವನ್ನು ತಿನ್ನುವುದು ಬಿಟ್ಟು ಬೆಟ್ಟದಿಂದ ಹಾರಿ ಪ್ರಾಣ ಬಿಡುತ್ತದೆ. ಗೋಮಾತೆಯನ್ನು ಪೂಜಿಸುವವರು ಇಂತಹ ವ್ಯಾಘ್ರರಾಗುವುದು ಬೇಡ; ಗೋವಿನ ಸತ್ಯನಿಷ್ಠೆಯನ್ನಾದರೂ ಪಾಲಿಸಲಿ.

ಚುರುಮುರಿ



ಸಮನ್ವಯ ಸಂಘರ್ಷ!

• ಚಂದ್ರಕಾಂತ ವಡ್ಡು

'ವಿಜ್ಞಾನ ಎಲ್ಲವನ್ನೂ ವಿಂಗಡಿಸಿದರೆ ನಮ್ಮ ಪಾರಂಪರಿಕ ಶಿಕ್ಷಣ ಜೋಡಿಸುತ್ತದೆ; ಶರೀರ, ಮನಸ್ಸು ಮತ್ತು ಬುದ್ಧಿಯ ಜೋಡಣೆಯಿಂದ ಸಮನ್ವಯ ಸಾಧ್ಯ...' ಎಂಬ ಆರ್‌ಎಸ್‌ಎಸ್ ಮುಖಂಡರೊಬ್ಬರ ಹೇಳಿಕೆಯ ಆಳ-ಅಗಲ ತಿಳಿಯದೆ ತಿಂಗಳೇಶ ಕಂಗಾಲಾಗಿದ್ದ. ಇವೆಲ್ಲವನ್ನೂ ಧಾರ್ಮಿಕ ಶಿಕ್ಷಣ, ಶೈಕ್ಷಣಿಕ ಧರ್ಮ ತಲೆಗೆ ಹೋಗಿಸಿಕೊಳ್ಳದ ಮಗನಿಗೆ ಹೇಳಿದರೆ, 'ಆಳ-ಅಗಲ ಅಳೆಯಲು ಪುಸ್ತಕ ಯಾಕೆ...?' ಎಂದು ಕಪಾಟಿನಲ್ಲಿರುವ ಟೇಪು ತಂದಿಡುತ್ತಾನೆ ಎಂಬುದು ಗೊತ್ತಿದ್ದದ್ದೇ. ಹಾಗಾಗಿ ತಿಂಗಳೇಶ ಹೆಂಡತಿಯೆದುರು ಅನುಮಾನ ಪ್ರಸ್ತಾಪಿಸಿದ.

'ಹೌದುರೀ... ವಿಜ್ಞಾನ ಕಣಕಣವನ್ನು ಅಣುವಾಗಿ ವಿಂಗಡಿಸುವುದರಿಂದಲೇ ಬಾಂಬು ಸಿಡಿಯುವುದು, ನಿಮಗೆ ಹಿರೋಶಿಮಾ-ನಾಗಸಾಕಿ ವಿನಾಶ ನೆನಪಿಲ್ಲವೇ?'

'ವಿ-ನಾಶ ಅಂದ್ರೆ ವಿ-ಜ್ಞಾನದಿಂದ ಆಗುವ ನಾಶ ಅರ್ಥಾತ್ ವಿ-ಘಟನೆಯಿಂದಾಗುವ ನಾಶ ಅಂತೀಯಾ?'

'ಅಷ್ಟೆಲ್ಲಾ ಭಾಷಾ ಪ್ರವೀಣೆಯೂ ವಿಜ್ಞಾನ ವಿಶಾರದೆಯೂ ನಾನಲ್ಲ! ಮಾತೃಭಾಷೆಗೆ ಜನರನ್ನು ಒಗ್ಗೂಡಿಸುವ ಶಕ್ತಿಯಂತೂ ಇದೆ'.

'ಅದ್ಹೇಗೆ ಹೇಳ್ತೀಯಾ?'

'ಅದನ್ನು ಹೇಳಿದ್ದು ನಾನಲ್ಲ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು 'ಕೆನಡಾದ ಕನಡಾ ಸಂಸದ' ಚಂದ್ರ ಅವರಿಗೆ ಸದಸ್ಯತ್ವ ನೀಡಿ ಭಾಷೆಯ ಈ ಶಕ್ತಿ ಗುರುತಿಸಿದ್ದಾರೆ'.

'ಒಗ್ಗೂಡಿಸುವ ಶಕ್ತಿ ಇರೋದು ಧರ್ಮ, ಭಾಷೆಗೆ ಮಾತ್ರವಲ್ಲ. ಹಣ-ಅಧಿಕಾರಕ್ಕೆ ಇರುವ ಒಗ್ಗೂಡಿಸುವ ಶಕ್ತಿಯ ಆಳ-ಅಗಲ ಕಡಿಮೆಯೇನಲ್ಲ. ಏಕನಾಥ ಹೆಸರಿಗೆ ತಕ್ಕಂತೆ ಶಾಸಕರನ್ನು ಏಕತ್ರಗೊಳಿಸಿದ ಶಿಂದೆ ಗೊತ್ತು ತಾನೇ?'

'ಶಿಂದೆ ಅಷ್ಟೇ ಅಲ್ಲ, ಕರ್ನಾಟಕದಲ್ಲಿ ಕೈ-ತೆನೆಯ 17 ಶಾಸಕರು ಒಗ್ಗಟ್ಟಾಗಿ ಕಮಲ ಅರಳಿಸಿದ್ದನ್ನೂ ಬಲ್ಲೆ. ಅದು ಸರಿ. ದಾವಣಗೆರೆ ಸಿದ್ದರಾಮೋತ್ಸವದಲ್ಲಿ ಭಿನ್ನ ಪರಂಪರೆಯ ಕೈಗಳೆಲ್ಲಾ ಕೂಡಿ ತಟ್ಟುವ ಚಪ್ಪಾಳೆ ಸದ್ದು ಹೇಗೆ ಕೇಳಿಸುತ್ತದೋ?' ಹೆಂಡತಿಯ ಕೆಟ್ಟ ಕುತೂಹಲ.

'ಅಲ್ಲಿ ವಿಜ್ಞಾನ ಮತ್ತು ಪರಂಪರೆಗಳ 'ಸಮನ್ವಯ ಸಂಘರ್ಷ' ಇದೆ. ಇನ್ನಷ್ಟೇ ಆಳ-ಅಗಲದ ಅಳತೆಯಾಗಬೇಕು!'

ಸಂಗತ

ಉತ್ತಮ ಶಿಕ್ಷಕ ಮತ್ತು ಪ್ರಶಸ್ತಿಯ ಗೌರವ

ಉತ್ತಮ ಶಿಕ್ಷಕನ ಆಯ್ಕೆಗೆ ಪಾರದರ್ಶಕ ವ್ಯವಸ್ಥೆಯೊಂದು ರೂಪುಗೊಳ್ಳಬೇಕಾದ ತುರ್ತಿದೆ

• ಸದಾಶಿವ್ ಸೊರಟೂರು

'ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಕರೆದಿದ್ದಾರೆ ನೋಡು, ನೀನು ಈ ಶಾಲೇನ ಅದ್ಭುತವಾಗಿ ಕಟ್ಟಿದ ಪರಿಗೆ ನಿನಗೊಂದು ಪ್ರಶಸ್ತಿ ಬರಬೇಕಾದದ್ದು ಧರ್ಮ. ಅರ್ಜಿ ಹಾಕು' ಅಂತ ಮೊನ್ನೆಯಷ್ಟೆ ನನ್ನ ಶಿಕ್ಷಕ ಮಿತ್ರರೊಬ್ಬರಿಗೆ ಹೇಳಿದೆ. ಇಡೀ ಊರು ಅವನ ಬಗ್ಗೆ ಹೆಮ್ಮೆಪಡುತ್ತದೆ, ವರ್ಗಾವಣೆ ಮಾಡಿಸಿಕೊಂಡು ಹೊರಟಿದ್ದ ಅವನನ್ನು ಕೋರಿ ಉಳಿಸಿಕೊಂಡಿದೆ. ಅವನ ಕೈಕೆಳಗೆ ಕಲಿತ ಮಕ್ಕಳು ಒಳ್ಳೆಯ ಬದುಕು ಕಟ್ಟಿಕೊಂಡಿದ್ದಾರೆ. ಶಾಲೆ ನಳನಳಿಸುತ್ತಿದೆ. 'ಇಂತಹ ಪ್ರಾಮಾಣಿಕ ಮೇಷ್ಟ್ರುಬ್ಬರನ್ನು ಗುರುತಿಸುವುದು ವ್ಯವಸ್ಥೆಯ ಕರ್ತವ್ಯ. ನೀನು ಅರ್ಜಿ ಹಾಕು' ಅಂತ ಬಲವಂತ ಮಾಡಿದೆ. ಅವನು ನಕ್ಕು ಒಂದು ಮಾತು ಹೇಳಿದ:

'ಬಹುಶಃ ಪ್ರಶಸ್ತಿ ಹುಚ್ಚು ನನ್ನ ತಲೆಗೆ ಏರಿದರೆ ಮಕ್ಕಳ ಕಾಳಜಿಗಿಂತ ಹೆಚ್ಚಾಗಿ ದಾಖಲೆ ನಿರ್ವಹಣೆ ಕಡೆ ನನ್ನ ಗಮನ ಹೋಗುತ್ತೆ. ನಿನಗೆ ಗೊತ್ತಾ, ಈಗ ಶಿಕ್ಷಕರಿಗೆ ಕೊಡುವ ಪ್ರಶಸ್ತಿ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ. ಲಾಬಿ ಮಾಡಿ ಪಡೆದುಕೊಂಡವರು ಅಂತಲೇ ನೋಡುತ್ತೆ ಸಮಾಜ. ಪ್ರಶಸ್ತಿಯೂ ಬೇಡ ಜನ ನನ್ನನ್ನು ಗುಮಾನಿಯಿಂದ ನೋಡುವುದೂ ಬೇಡ' ಅಂದ. ನನ್ನ ಮನಸ್ಸು ಮ್ಲಾನವಾಯಿತು.

ನಾರ್ವೆಯ ಕವಯತ್ರಿ ಆನ್‌ಸೆಟ್ ಸಿಗ್ರಿಡ್ ನೆನಪಾದರು. ಅವರಿಗೆ ಆ ದೇಶದ ಅತ್ಯುನ್ನತ ಪ್ರಶಸ್ತಿ ಪ್ರಕಟವಾಗುತ್ತಲೇ ಪತ್ರಕರ್ತರು ಸಂದರ್ಶನಕ್ಕೆ ಅವರ ಮನೆಗೆ ತೆರಳಿದಾಗ ಸಿಗ್ರಿಡ್ ಹೇಳಿದರು: 'ಕ್ಷಮಿಸಿ, ನನಗೀಗ ಮಾತನಾಡಲು ಸಮಯವಿಲ್ಲ. ನನ್ನ ಮಗುವನ್ನು ಮಲಗಿಸುತ್ತಿದ್ದೇನೆ. ನಾನು ಲಾಲಿ ಹಾಡಿದಾಗಲೇ ಅದು ಮಲಗುತ್ತದೆ. ಪ್ರಶಸ್ತಿ ಪಡೆದ ಸಂತೋಷ ನನಗಿದೆ. ಆದರೆ ಅದಕ್ಕಿಂತ ಹೆಚ್ಚಿನ ಸಂತೋಷ ನನ್ನ ಮಗುವಿನ ಪಾಲನೆ, ಪೋಷಣೆಯಲ್ಲಿ ಸಿಗುತ್ತದೆ...' ಪ್ರಶಸ್ತಿ ತಲೆಗೇರಬಾರದು ಅನ್ನುವುದಕ್ಕೆ ಇದೊಂದು ನಿದರ್ಶನ ಸಾಕು.

ವ್ಯವಸ್ಥೆಯಲ್ಲಿ ಭ್ರಷ್ಟತೆ ಯಾವ ಕ್ಷೇತ್ರವನ್ನೂ ಬಿಟ್ಟಿಲ್ಲ ಎಂಬುದು ದಿಟ. ಮಕ್ಕಳ ಮುಖದಲ್ಲಿ ಜ್ಞಾನದ ನಗು ತಂದವರನ್ನು ಪ್ರಾಮಾಣಿಕವಾಗಿ ಗುರುತಿಸಬೇಕಾದದ್ದು ವ್ಯವಸ್ಥೆಯ ಕರ್ತವ್ಯ. ಆದರೆ ಇಲ್ಲೂ ಲಾಬಿಗಳ ಸದ್ದು ಕೇಳುತ್ತಿದೆ. ಪ್ರಶಸ್ತಿ ತಂಟೆಗೆ ಹೋಗದೆ ತಮ್ಮ ಪಾಡಿಗೆ ತಾವು ಮಕ್ಕಳಿಗಾಗಿ ದುಡಿಯುತ್ತಿರುವವರು ಬಹಳಷ್ಟು ಜನರಿದ್ದಾರೆ. ಆದರೆ ಈ ಸಂಖ್ಯೆಯನ್ನು ಮೀರಿಸುವಷ್ಟು ಪ್ರಮಾಣದಲ್ಲಿ ಬರೀ ಪ್ರಶಸ್ತಿಗಾಗಿ ಕೆಲಸ ಮಾಡುವವರು ಇದ್ದಾರೆ. ಹೀಗಾದಾಗ ಪ್ರಶಸ್ತಿಯ ಗೌರವವಾದರೂ ಹೇಗೆ ಉಳಿದೀತು?

'ಪಾಪ ಕೊಟ್ಟುಬಿಡಿ, ಇನ್ನೆರಡು ವರ್ಷ ಅಷ್ಟೇ, ಆಮೇಲೆ ರಿಟೈರ್ ಆಗ್ಬಿಡ್ತಾರೆ', 'ಕಳೆದ ಬಾರಿ ಆ ವರ್ಗಕ್ಕೆ ಕೊಟ್ಟಿದ್ದೀರಿ, ಈ ಸಾರಿ ನಮ್ಮ ವರ್ಗಕ್ಕೆ ಸಿಗಬೇಕು', 'ಪ್ರಶಸ್ತಿ ಏನ್ರೀ, ಕೊಡ್ಸೋಣ ಬಿಡ್ರಿ, ಒಂದು ಫೋನ್ ಅಷ್ಟೇ' ಅನ್ನುವ ಕುತೂಹಲಕಾರಿ ಮಾತುಗಳು ನನ್ನ ಕಿವಿಗೆ ಬಿದ್ದಿವೆ.

ವ್ಯಕ್ತಿಯಿಂದ ಪ್ರಶಸ್ತಿಗೊಂದು ಗೌರವ ದೊರಕಬೇಕು, ಅದೇ ಸರಿಯಾದ ಕ್ರಮ. ವ್ಯಕ್ತಿಯಿಂದ ಪ್ರಶಸ್ತಿಗಿರುವ ಗೌರವ ಹಾಳಾದರೆ ಅದಕ್ಕಿಂದ ದುರ್ದೈವ ಮತ್ತೊಂದಿಲ್ಲ. ಪಂಪ ಪ್ರಶಸ್ತಿ ಬಂದಾಗ ಪೂರ್ಣಚಂದ್ರ ತೇಜಸ್ವಿ ಅವರು ಆಡಿದ ಮಾತುಗಳು ಇಲ್ಲಿ ನೆನಪಾಗುತ್ತಿವೆ: 'ನಮ್ಮ ತಂದೆಯವರಿಗಾಗ್ಲಿ, ಶಿವರಾಮ ಕಾರಂತರಿಗಾಗ್ಲಿ ಪ್ರಶಸ್ತಿ ಬಂದಾಗ ಅದು ಪ್ರಶಸ್ತಿಗೇ ಮರ್ಯಾದೆ. ಯಾಕಂದ್ರೆ ಅಷ್ಟು ದೊಡ್ಡ ವ್ಯಕ್ತಿಗಳಿಗೆ ಮರ್ಯಾದೆ ಕೊಟ್ಟಾಗ ಮರ್ಯಾದೆ ಕೊಟ್ಟವರಿಗೇ ಮರ್ಯಾದೆ ಬರುತ್ತೆ' ಅಂದಿದ್ದರು.

ಹಾಗೆಂದು ಪ್ರಶಸ್ತಿಗಳೆಲ್ಲಾ ಅನರ್ಹರ ಪಾಲಾಗುತ್ತವೆ ಎಂದು ಹೇಳಲಾಗುವುದಿಲ್ಲ. ಅದರಲ್ಲಿ ಅರ್ಹರೂ ಇರುತ್ತಾರೆ. ಆದರೆ ಸಮಾಜವು ಅನರ್ಹರು ಪಡೆದ ಪ್ರಶಸ್ತಿಯನ್ನು ನೋಡಿ ಅರ್ಹರನ್ನೂ ಅನುಮಾನದಿಂದಲೇ ನೋಡುತ್ತದೆ. ಅದಾಗಬಾರದು.

'ನಾನು ಉತ್ತಮ ಶಿಕ್ಷಕ, ನನಗೊಂದು ಪ್ರಶಸ್ತಿ ಕೊಡಿ' ಎಂದು ಅರ್ಜಿ ಬರೆದುಕೊಟ್ಟು ಕಾಯುವುದು ಎಂತಹ ಮುಜುಗರದ ವಿಷಯ. ಎಷ್ಟೋ ಅರ್ಹ ಶಿಕ್ಷಕರು ಇಂತಹ ಮುಜುಗರದ ಕಾರಣಕ್ಕಾಗಿಯೇ ಅರ್ಜಿ ಸಲ್ಲಿಸುವುದಿಲ್ಲ. ಅರ್ಹರು ಅರ್ಜಿ ಸಲ್ಲಿಸದೇ ಇದ್ದಾಗ ಅದು ಅನರ್ಹರ ಪಾಲಾಗುವುದು ಅನಿವಾರ್ಯ. ಆಗ ಪ್ರಶಸ್ತಿಯ ಮೌಲ್ಯ ಕುಸಿದು ಹೋಗುತ್ತದೆ.



ಉತ್ತಮ ಶಿಕ್ಷಕ ಪ್ರಶಸ್ತಿಯ ಆಯ್ಕೆಯ ವಿಧಾನ ಬದಲಾಗಬೇಕಿದೆ. ಅರ್ಜಿ ಹಾಕಿ ಪ್ರಶಸ್ತಿ ಕೊಡಿ ಅನ್ನುವುದು ಖಂಡಿತ ನಿಲ್ಲಬೇಕಾಗಿದೆ. ಒಂದು ಸೋಜಿಗವೆಂದರೆ, ಶಿಕ್ಷಕನಾದವನು ಪ್ರಶಸ್ತಿಗಾಗಿ ತನ್ನ ಸೇವೆಯ ಪೂರ್ತಿ ದಾಖಲೆಗಳನ್ನು ಜೋಡಿಸುತ್ತಾ ಕೂರಬೇಕೇ? ಅದ್ಭುತ ತಂತ್ರಜ್ಞಾನದ ಈ ಕಾಲದಲ್ಲಿ ಎಂತಹ ದಾಖಲೆಗಳನ್ನು ಬೇಕಾದರೂ ಒಂದು ದಿನದಲ್ಲಿ ಸಿದ್ಧಗೊಳಿಸಬಹುದು. ದಾಖಲೆಗಳಷ್ಟೇ ಶಿಕ್ಷಕನೊಬ್ಬ ಉತ್ತಮ ಎಂದು ನಿರ್ಧರಿಸಲಾರವು.

ಉತ್ತಮ ಶಿಕ್ಷಕನನ್ನು ಆಯ್ಕೆ ಮಾಡಲು ಪ್ರಾಮಾಣಿಕ ವ್ಯವಸ್ಥೆಯೊಂದು ರೂಪುಗೊಳ್ಳುವ ತುರ್ತಿದೆ. ಇದು ಬದಲಾಗದೇ ಹೋದರೆ ಪ್ರಶಸ್ತಿ ತನ್ನ ಗೌರವವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ಅಪಾಯವಿದೆ. 'ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ?' ಎಂಬ ಮನಸ್ಸಿನ ಒಳ್ಳೆಯ ಶಿಕ್ಷಕರು ನಮ್ಮ ನಡುವೆ ತುಂಬಾ ಜನ ಇದ್ದಾರೆ. ಖಂಡಿತ ಅವರ ಹಾಡಿಗೆ ಒಂದು ಬಿರುದು, ಸನ್ಮಾನ ಸಲ್ಲಲೇಬೇಕು.

ವಾಚಕರ ವಾಣಿ

ಬರಹಗಾರರಿಗೆ ಭದ್ರತೆ: ಸರ್ಕಾರದ ಬಾಧ್ಯತೆ

ಬರಹಗಾರರಿಗೆ ಜೀವಬೆದರಿಕೆ ಪತ್ರ ಬಂದಿರುವ ಕುರಿತು ಸರ್ಕಾರ ನಿರ್ಲಕ್ಷ್ಯ ವಹಿಸಿರುವುದು ಕಳವಳಕಾರಿ ಸಂಗತಿ. ಭಾರತ ತನ್ನ ನೆಲದೊಳಗೆ ಹಲವು ತತ್ವ- ಸಿದ್ಧಾಂತಗಳಿಗೆ ಜನ್ಮ ನೀಡಿದೆ. ತನ್ನ ವೈವಿಧ್ಯಮಯ ಜನಸಂಸ್ಕೃತಿ, ಆಚಾರ, ವಿಚಾರಕ್ಕೆ ಜಾಗತಿಕವಾಗಿ ಹೆಸರುವಾಸಿಯಾಗಿದೆ. ಆದರೆ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದು ಹೇಳಿಕೊಳ್ಳುವ ನಾವು, ಇತ್ತೀಚಿನ ದಿನಗಳಲ್ಲಿ ನಮ್ಮಲ್ಲಿನ ಅಭಿಪ್ರಾಯಭೇದಗಳನ್ನು ಸಹಿಸದಿರುವುದು ನಮ್ಮ ವೈಚಾರಿಕತೆಯ ಕೇಡಾಗಿದೆ.

ಪರಸ್ಪರ ಅಭಿಪ್ರಾಯಭೇದಗಳನ್ನು ಗೌರವಿಸುವ ವಿಶಾಲ ದೃಷ್ಟಿಕೋನವನ್ನು ಭಾರತೀಯರಾದ ನಾವು ಹೊಂದುವುದು ಅವಶ್ಯಕ. ನಾಡಿನ ಬರಹಗಾರರು ಸಾಮಾಜಿಕ ಕಳಕಳಿಯಿಂದ ಮುಖ್ಯಮಂತ್ರಿಗೆ ಪತ್ರ ಬರೆದಿರುವುದು ಅವರ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ. ಭಿನ್ನದನಿಗಳನ್ನು ಹತ್ತಿಕ್ಕಲು ಯತ್ನಿಸುವ ಶಕ್ತಿಗಳ ವಿರುದ್ಧ ಪ್ರಭುತ್ವವು ಕಂಡೂ ಕಾಣದಂತೆ ಮೌನ ವಹಿಸುವುದನ್ನು ಬಿಟ್ಟು, ಬೆದರಿಕೆ ಒಡ್ಡಿದವರಿಗೆ ಈ ನೆಲದ ಕಾನೂನಿನ ಪಾಠ ಹೇಳಿಕೊಡಬೇಕಾಗಿದೆ. ಬೆದರಿಕೆ ಪತ್ರ ಬಂದಿರುವ ಎಲ್ಲ ಬರಹಗಾರರಿಗೂ ಸೂಕ್ತ ಭದ್ರತೆ ಒದಗಿಸುವುದು ಸರ್ಕಾರದ ಕಾನೂನಾತ್ಮಕ ಬಾಧ್ಯತೆಯಾಗಿದೆ.

ನಿರಂಜನ್ ಮೂರ್ತಿ ಆರ್.ಕೆ., ಶಿವಮೊಗ್ಗ

ಮನನ ಮಾಡಿಕೊಳ್ಳಬೇಕಾದ ಪ್ರಶ್ನೆಗಳು

'ಪ್ರಶ್ನೆಗಳು ಬೇಡವಾದ ಹೊತ್ತಿನಲ್ಲಿ' ಎಂಬ ಬರಹದಲ್ಲಿ (ಸಂಗತ, ಜುಲೈ 15) ಎಚ್.ಕೆ.ಶರತ್ ಅವರು ಎತ್ತಿರುವ ಪ್ರಶ್ನೆಗಳು ಓದು, ಬರಹದ ಶಿಕ್ಷಣ ಪಡೆದಿರುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನಲ್ಲಿ ತಾನೇ ಕೇಳಿಕೊಳ್ಳಬೇಕಾದಂತಹವಾಗಿವೆ: 1. ವಿಜ್ಞಾನದಿಂದ ನೀವು ಇದುವರೆಗೂ ಕಲಿತಿರುವುದೇನು? 2. ಧಾರ್ಮಿಕ ಪಠ್ಯಗಳಿಗೂ ವಿಜ್ಞಾನದ ಪಠ್ಯಗಳಿಗೂ ಇರುವ ವ್ಯತ್ಯಾಸವೇನು? 3. ಪ್ರಶ್ನೆಗಳು ಮತ್ತು ಬದಲಾವಣೆಗೆ ತನ್ನನ್ನು ತೆರೆದುಕೊಂಡಿರುವ ವಿಜ್ಞಾನ ಮತ್ತು ಪ್ರಶ್ನೆಗಳನ್ನು ಸಹಿಸದ ಹಾಗೂ ಬದಲಾವಣೆಗೆ ತೆರೆದುಕೊಳ್ಳದ ಧರ್ಮ- ಇವೆರಡರಲ್ಲಿ ಯಾವುದು ಮನುಕುಲಕ್ಕೆ ಸೂಕ್ತವೆಂದು ನೀವೇ ನಿರ್ಧರಿಸಿ.

ಮೇಲು ಕೀಳಿನ ಜಾತಿ ವ್ಯವಸ್ಥೆಯಲ್ಲಿ ಹುಟ್ಟಿ ಬೆಳೆದಿರುವ ನಮ್ಮೆಲ್ಲರ ಮೈಮನದಲ್ಲಿ ಜಾತಿಯ ವಿಷಬೇರು ಆಳವಾಗಿ ಬೇರೂರಿದೆ. ಶಿಕ್ಷಣವನ್ನು ಪಡೆಯದ ವ್ಯಕ್ತಿಗಳ ಪಾಲಿಗೆ ಜಾತಿ ಮತ್ತು ಧರ್ಮ ಎಂಬುದು ಬದುಕಿನ ಒಂದು ವಾಸ್ತವವಾಗಿದೆ. ಆದ್ದರಿಂದಲೇ ಅವರು ಅದರ ಎಲ್ಲೆಯೊಳಗೆ ಬದುಕನ್ನು ನಡೆಸುತ್ತಿದ್ದಾರೆ. ಆದರೆ ಶಿಕ್ಷಿತರ ಪಾಲಿಗೆ ಜಾತಿ ಮತ್ತು ಧರ್ಮ ಎಂಬುದು ಸಂಪತ್ತು ಮತ್ತು ಅಧಿಕಾರವನ್ನು ಪಡೆಯಲು, ಪಡೆದುದನ್ನು ಉಳಿಸಿಕೊಳ್ಳಲು ಒಂದು ಪ್ರಮುಖವಾದ ಆಯುಧವಾಗಿದೆ. ಆದ್ದರಿಂದಲೇ ಶಿಕ್ಷಿತರಾದ ನಮ್ಮೆಲ್ಲರಿಗೂ ವಿಜ್ಞಾನದ ಉಪಕರಣಗಳು ಬದುಕಿನ ಅನುಕೂಲಕ್ಕೆ ಬೇಕು. ಸಹಮಾನವರನ್ನು ಸುಲಿಗೆ ಮಾಡುವುದಕ್ಕೆ, ವಂಚಿಸುವುದಕ್ಕೆ ಮತ್ತು ಅತ್ಯಂತ ಕ್ರೌರ್ಯದ ನಡೆನುಡಿಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ ಧರ್ಮ ಬೇಕು.

ಸಿ.ಪಿ.ನಾಗರಾಜ, ಬೆಂಗಳೂರು

ಬ್ರಾಹ್ಮಣರಲ್ಲೂ ಬಡವರಿದ್ದಾರೆ

ಆರ್ಥಿಕವಾಗಿ ಹಿಂದುಳಿದ ಎಲ್ಲ ಜಾತಿಯ ಬಡವರಿಗೂ ಮೀಸಲಾತಿ ನೀಡುವುದರಲ್ಲಿ ತಪ್ಪೇನೂ ಇಲ್ಲ. ಸಮಾಜೋ-ಧಾರ್ಮಿಕ ಗೌರವಾದರಗಳನ್ನು ಹೊರತುಪಡಿಸಿದರೆ ಬ್ರಾಹ್ಮಣರಲ್ಲೂ ಕಡು ಬಡವರಿದ್ದಾರೆ ಎನ್ನುವುದು ಸತ್ಯ. ಈ ದಿಸೆಯಲ್ಲಿ ವಾದಿರಾಜ್ ಅವರ ಲೇಖನದಲ್ಲಿ (ಸಂಗತ, ಜುಲೈ 13) ಮಂಡಿತವಾಗಿರುವ ವಿಚಾರವು ಸಮತೋಲನದಿಂದ ಕೂಡಿದೆ ಮತ್ತು ತರ್ಕಬದ್ಧವಾಗಿಯೂ ಇದೆ. ಆದರೆ ಎಲ್ಲ ಜಾತಿಯ ಬಡವರ ಬಡತನ, ದಲಿತರ ಬಡತನ, ಬ್ರಾಹ್ಮಣರ ಬಡತನ ಒಂದೇ ಅಲ್ಲ ಎಂಬ ಅರಿವೂ ನಮಗಿರಬೇಕು.

ಎಲ್ಲ ಜಾತಿಯ ಬಡವರಿಗೆ ಮೀಸಲಾತಿ ಇರಲಿ, ಆದರೆ ತಲೆತಲಾಂತರದಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ತುಳಿತಕ್ಕೊಳಗಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಅನ್ಯಾಯವಾಗುವಂತೆ ಇರಬಾರದೆಂಬ ಎಚ್ಚರವೂ ಇರಬೇಕು. ಸಮ ಸಮಾಜದ ಆಶಯದಂತೆ ಸಮಾಜದ ಸಕಲ ಮಾನವ ಕುಲವೂ ಸುಖ, ಸಂತೋಷ, ನೆಮ್ಮದಿಯಿಂದ ಬದುಕಬೇಕೆಂದರೆ ಈ ನಿಲುವು ಮುಖ್ಯವಲ್ಲವೇ?

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಸಾಮಾಜಿಕ ನ್ಯಾಯ ಪಡೆಯಲಾಗದ ಅನಾಥಪ್ರಜ್ಞೆ

ಶೇಕಡ 10 ಹೊಸ ಮೀಸಲಾತಿ ಕುರಿತ ವಾದಿರಾಜ್ ಅವರ ಲೇಖನ (ಸಂಗತ, ಜುಲೈ 13) ಮಾಹಿತಿಪೂರ್ಣವಾಗಿದೆ. ಹಳದಿ ಕನ್ನಡಕದವರಿಗೆ ಹಾಗೂ ದ್ವಿಮುಖ ನೀತಿ ಹೊಂದಿದವರಿಗೆ ಪಾಠ ಹೇಳಿದಂತಿದೆ. ಮತ್ತೊಂದು ಅಂಶ ಗಮನಕ್ಕೆ ತರಲೇಬೇಕು. ಕರ್ನಾಟಕದ ಮೀಸಲಾತಿಯಲ್ಲಿ ಒಬಿಸಿ ಕೋಟಾ ಕತ್ತರಿಸಿ ಕೊಟ್ಟಿರುವುದರ ನಿಜ ಬೇನೆ ಅನುಭವಿಸುತ್ತಾ ವಂಚನೆಗೆ ಒಳಗಾಗಿರುವವರು ಕಸುಬು ಆಧಾರಿತ ಅತಿ ಹಿಂದುಳಿದ ಕಾಯಕ ಸಮುದಾಯಗಳಿಗೆ ಸೇರಿದವರು. ಇದರ ಜತೆಗೇ 'ಆದಾಯ ಮಿತಿ' ಎಂಬುದು ಅಪರೂಪಕ್ಕೆ ಅವಕಾಶಕ್ಕಾಗಿ ಪ್ರಯತ್ನಿಸುವ ಪ್ರತಿಭೆಗಳ ಕತ್ತು ಕೊಯ್ಯುತ್ತಿದೆ.

ನಾನು ಮಡಿವಾಳ. ಆದರೆ ಆದಾಯದ ಕಾರಣಕ್ಕಾಗಿ ನನ್ನ ಮಕ್ಕಳು ಸರ್ಕಾರಿ ಕೆಲಸ ಪಡೆಯಲು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಮಾನ್ಯ ವರ್ಗದಲ್ಲೇ ಪೈಪೋಟಿ ನಡೆಸಬೇಕಿದೆ. ಜಾತಿಯ ಕಾರಣಕ್ಕೆ ಶೋಷಣೆ, ದಬ್ಬಾಳಿಕೆಗಳನ್ನು ಇಂದಿಗೂ ಅನುಭವಿಸುತ್ತಿರುವ ನಾವು, ಮೀಸಲಾತಿಯಲ್ಲೂ ಮೂಲೋತ್ಪಾಟನೆಯಾಗಿ ಶೋಷಣೆ ಅನುಭವಿಸುವಂತಾಗಿದೆ. ಸಾಮಾಜಿಕ ನ್ಯಾಯ ಪಡೆಯಲು ವಕೀಲರಿಲ್ಲದ ಕಕ್ಷಿದಾರರ ಅನಾಥ ಪ್ರಜ್ಞೆಯನ್ನು ನಾವು ಅನುಭವಿಸುತ್ತಿದ್ದೇವೆ. ಆದಾಯಮಿತಿ ನಿಗದಿ ಮಾಡುವುದಾದರೆ ಮೀಸಲಾತಿ ಪಡೆಯುವ ಎಲ್ಲಾ ಸಮುದಾಯ ಹಾಗೂ ವರ್ಗಗಳಿಗೂ ನಿಗದಿ ಮಾಡಲಿ. ಈ ಬಗೆಯ ತಾರತಮ್ಯ ಯಾವ ನ್ಯಾಯ?

ಇದರಿಂದ ಮೀಸಲಾತಿ ಸವಲತ್ತು ಪಡೆಯುತ್ತಿರುವ ಸಂಘಟಿತ ಜಾತಿಗಳಿಗೆ ಮಾತ್ರ ಸಿಂಹಪಾಲು ದೊರೆಯುತ್ತದೆ. ಬಲಹೀನ ಅಸಂಘಟಿತ ಸಮುದಾಯವು ಮೀಸಲಾತಿಯಿಂದ ಬಲುದೂರ ಉಳಿದಿದೆ. ಸದಾ ದಲಿತರ ಪರ ದನಿಯಾಗಿ ಮಾತನಾಡುವ ದೇವನೂರ ಮಹಾದೇವ ಅವರು ನಮ್ಮಂಥವರ ಬಗ್ಗೆ ಎಂದಾದರೂ ಸಂಶೋಧನಾತ್ಮಕವಾಗಿ ಚಿಂತಿಸಿದ್ದಾರೆಯೇ? ಆ ಕುರಿತು ಎಲ್ಲಾದರೂ ಬರೆದಿದ್ದಾರೆಯೇ?

ಆರ್.ರಘು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರೂಪಾಯಿ ಮೌಲ್ಯ ಕುಸಿಯಲು ಸರ್ಕಾರ, ಆರ್‌ಬಿಐ ನೀತಿಯಲ್ಲಿನ ವೈಫಲ್ಯ ಕಾರಣವೇ?

ರೂಪಾಯಿ ಮೌಲ್ಯ ಕುಸಿದ ಸರ್ಕಾರ, ಆರ್‌ಬಿಐ ನಿಷ್ಕ್ರಿಯತೆ



ಡಾಲರ್ ಎದುರು ರೂಪಾಯಿ ಮೌಲ್ಯವು ₹80ರ ಆಸುಪಾಸಿಗೆ ಕುಸಿದಿರುವುದು ಅರ್ಥವ್ಯವಸ್ಥೆಯ ಮೂಲಭೂತ ನೆಲೆಗಟ್ಟುಗಳು ದುರ್ಬಲವಾಗಿವೆ ಎಂಬುದರ ಸೂಚನೆಯಾಗಿದೆ. ಬಡ್ಡಿದರ, ಅಂತರರಾಷ್ಟ್ರೀಯ ವ್ಯಾಪಾರ, ಹಣದುಬ್ಬರ, ಸರ್ಕಾರದ ಸಾಲ, ನಿರುದ್ಯೋಗ, ಹೂಡಿಕೆಯು ಅರ್ಥವ್ಯವಸ್ಥೆಯ ಆರೋಗ್ಯದ ಮುಖ್ಯ ಸೂಚಕಗಳಾಗಿವೆ. ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ಸಂಪೂರ್ಣ ನಿಷ್ಕ್ರಿಯತೆಯು ಅರ್ಥವ್ಯವಸ್ಥೆಯ ಮೂಲಭೂತ ನೆಲೆಗಟ್ಟುಗಳನ್ನು ಶಿಥಿಲಗೊಳಿಸಿದೆ

ಪ್ರಜಾವಾಣಿ ಚರ್ಚೆ

• ಡಾ. ಕೃಷ್ಣರಾಜ್

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಮೆರಿಕ ಡಾಲರ್ ಎದುರು ಭಾರತೀಯ ರೂಪಾಯಿಯ ವಿನಿಮಯ ಮೌಲ್ಯವು ಭಾರಿ ಕುಸಿತಕ್ಕೆ ಸಾಕ್ಷಿಯಾಗಿದ್ದು, ಅರ್ಥ ವ್ಯವಸ್ಥೆ ಮತ್ತು ಅಂತರರಾಷ್ಟ್ರೀಯ ಹಣ ವರ್ಗಾವಣೆಯನ್ನು ಬಾಧಿಸಿದೆ. ಡಾಲರ್ ಎದುರು ರೂಪಾಯಿಯ ಮೌಲ್ಯವು ಈ ವರ್ಷ ಶೇ 5.9ರಷ್ಟು ಕೆಳಕ್ಕೆ ಇಳಿದಿರುವುದರಿಂದ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿಯು ಬಲ ಕುಂದಿದೆ. ಅಂದರೆ, ಈಗ ಒಂದು ಡಾಲರ್ ಖರೀದಿಸಬೇಕಿದ್ದರೆ ಹೆಚ್ಚು ರೂಪಾಯಿ ನೀಡಬೇಕಿದೆ. ಡಾಲರ್ ಎದುರು ರೂಪಾಯಿ ಮೌಲ್ಯವು ₹80ರ ಆಸುಪಾಸಿಗೆ ಕುಸಿದಿರುವುದು ಅರ್ಥವ್ಯವಸ್ಥೆಯ ಮೂಲಭೂತ ನೆಲೆಗಟ್ಟುಗಳು ದುರ್ಬಲವಾಗಿವೆ ಎಂಬುದರ ಸೂಚನೆಯಾಗಿದೆ.

ಬಡ್ಡಿದರ, ಅಂತರರಾಷ್ಟ್ರೀಯ ವ್ಯಾಪಾರ, ಹಣದುಬ್ಬರ, ಸರ್ಕಾರದ ಸಾಲ, ನಿರುದ್ಯೋಗ, ಹೂಡಿಕೆಯು ಅರ್ಥವ್ಯವಸ್ಥೆಯ ಆರೋಗ್ಯದ ಮುಖ್ಯ ಸೂಚಕಗಳಾಗಿವೆ. ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಸಂಪೂರ್ಣ ನಿಷ್ಕ್ರಿಯತೆಯು ಅರ್ಥವ್ಯವಸ್ಥೆಯ ಮೂಲಭೂತ ನೆಲೆಗಟ್ಟುಗಳನ್ನು ಶಿಥಿಲಗೊಳಿಸಿದೆ. ಅಂತರರಾಷ್ಟ್ರೀಯ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು ಪಾತಾಳಕ್ಕೆ ಕುಸಿಯಲು ಇದು ಕಾರಣವಾಗಿದೆ.

ಡಾಲರ್ ಎದುರು ರೂಪಾಯಿಯ ವಿನಿಮಯ ದರವು ಹೇಗೆ ನಿರ್ಧಾರವಾಗುತ್ತದೆ ಎಂಬುದು ಅರ್ಥವ್ಯವಸ್ಥೆಯ ಮೂಲ ನೆಲೆಗಟ್ಟುಗಳನ್ನು ಅವಲಂಬಿಸಿರುತ್ತದೆ. ಭಾರತದ ಅರ್ಥವ್ಯವಸ್ಥೆಗೆ ಸದ್ಯದಲ್ಲಿಯೇ ದೊಡ್ಡ ಗಂಡಾಂತರ ಕಾದಿದೆ ಎಂಬುದನ್ನು ರೂಪಾಯಿಯ ಕುಸಿತದ ವೇಗವು ತೋರಿಸುತ್ತದೆ.

ಅಂತರರಾಷ್ಟ್ರೀಯ, ದೇಶೀಯ ಅರ್ಥಿಕತೆಯ ಮೂಲಭೂತ ಅಂಶಗಳು ಮತ್ತು ವಿದ್ಯಮಾನಗಳು ವಿನಿಮಯ ದರದ ಏರಿಳಿತದ ಮೇಲೆ ನೇರ ಪ್ರಭಾವ ಬೀರುತ್ತವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಏರಿಕೆ ಮತ್ತು ಭಾರತವು ಕಚ್ಚಾ ತೈಲಕ್ಕಾಗಿ ಆಮದನ್ನೇ ಮುಖ್ಯವಾಗಿ ನೆಚ್ಚಿಕೊಂಡಿರುವುದು ರೂಪಾಯಿ ಮೌಲ್ಯ ಕುಸಿಯಲು ಕಾರಣವಾದ ಅಂಶಗಳಲ್ಲಿ ಒಂದು. ಭಾರತದ ಕಚ್ಚಾ ತೈಲ ಬೇಡಿಕೆಯ ಶೇ 85ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಅತಿ ಹೆಚ್ಚು ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತಿರುವ ದೇಶಗಳಲ್ಲಿ ಭಾರತವು ಮೂರನೇ ಸ್ಥಾನದಲ್ಲಿದೆ. 2021–22ರಲ್ಲಿ ಭಾರತವು 21.2 ಕೋಟಿ ಟನ್ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿತ್ತು. ಇದಕ್ಕೆ ತಗುಲಿದ ವೆಚ್ಚ ಸುಮಾರು ₹9.50 ಲಕ್ಷ ಕೋಟಿ. ಬ್ರೆಂಟ್ ಕಚ್ಚಾ ತೈಲದ ದರವು ಪ್ರತಿ ಬ್ಯಾರಲ್‌ಗೆ 110 ಡಾಲರ್‌ಗೆ (₹8,789) ಏರಿಕೆಯಾದದ್ದು ಅಮೆರಿಕ ಡಾಲರ್‌ನ ಬೇಡಿಕೆಯನ್ನು ಹೆಚ್ಚಿಸಿತು. ಏಕೆಂದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲವನ್ನು ಡಾಲರ್‌ನಲ್ಲಿ ಮಾರಾಟ ಮಾಡಲಾಗುತ್ತಿದೆ.

ಭಾರತವು ಈಗಾಗಲೇ ₹76,704 ಕೋಟಿ ಚಾಲ್ತಿ ಖಾತೆ ಕೊರತೆಯನ್ನು ಎದುರಿಸುತ್ತಿದೆ. ಇದು ಒಟ್ಟು ದೇಶಿ ಉತ್ಪನ್ನದ (ಜಿಡಿಪಿ) ಶೇ 1.3ರಷ್ಟಾಗುತ್ತದೆ. ರೂಪಾಯಿ ಮೌಲ್ಯ ಕುಸಿತದಿಂದಾಗಿ ಚಾಲ್ತಿ ಖಾತೆ ಕೊರತೆಯು ಇನ್ನಷ್ಟು ಹೆಚ್ಚಾಗಬಹುದು. ಆರ್ಥಿಕ ಕೊರತೆಯು ಜಿಡಿಪಿಯ ಶೇ 6.4ರಷ್ಟಕ್ಕೆ ತಲುಪಿರುವ ಕಾರಣ ದೇಶವು ಭಾರಿ ಮೊತ್ತದ ವಿದೇಶಿ ಸಾಲವನ್ನು ಅವಲಂಬಿಸುವಂತಹ ಸ್ಥಿತಿ ಉಂಟಾಗಿದೆ. ಸಾಲಕ್ಕೆ ಪಾವತಿಸಬೇಕಾದ ವಾರ್ಷಿಕ ಬಡ್ಡಿಯೇ ₹9.41 ಲಕ್ಷ ಕೋಟಿಯಷ್ಟು ಎಂದು ಅಂದಾಜಿಸಲಾಗಿದೆ.



ಇದು ಒಟ್ಟು ರೆವೆನ್ಯೂ ವೆಚ್ಚದ ಶೇ 29ರಷ್ಟಾಗುತ್ತದೆ. ಇದರಿಂದಾಗಿ ರೂಪಾಯಿ ಅಪಮೌಲ್ಯ ಮಾಡಬೇಕಾದ ಸ್ಥಿತಿ ಉಂಟಾಗುತ್ತದೆ. ಅದಲ್ಲದೆ, ಚಿಲ್ಲರೆ ಹಣದುಬ್ಬರವು ಶೇ 7ರಷ್ಟಕ್ಕೆ ಏರಿಕೆಯಾಗಿರುವುದು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು 2022ರಲ್ಲಿ ₹2.26 ಲಕ್ಷ ಕೋಟಿ ಮೊತ್ತವನ್ನು ಹಿಂದಕ್ಕೆ ಪಡೆದಿರುವುದು ಕೂಡ ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಡಾಲರ್‌ನಲ್ಲಿ ಮಾಡಿದ್ದ ಹೂಡಿಕೆಯನ್ನು ಹಿಂದಕ್ಕೆ ಪಡೆಯಲು ಹೂಡಿಕೆ ಮೇಲೆ ಕಡಿಮೆ ಲಾಭಾಂಶ ಅಥವಾ ಉತ್ಪಾದನಾ ವೆಚ್ಚ ಹೆಚ್ಚಳದಿಂದಾಗಿ ಲಾಭದಲ್ಲಿ ಕುಸಿತ ಕಾರಣವಾಗಿದೆ. ಲಾಭ ಮಾತ್ರವಲ್ಲದೆ, ಅರ್ಥ ವ್ಯವಸ್ಥೆಯು ಪ್ರಬಲ ಮತ್ತು ಸ್ಥಿರವಾಗಿರುವ ದೇಶದಲ್ಲಿ ಹೂಡಿಕೆ ಮಾಡಲು ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಯಸುತ್ತಾರೆ.

ದೇಶದ ಆರ್ಥಿಕ ಶಕ್ತಿಯು ಡಾಲರ್ ಎದುರು ಆ ದೇಶದ ಕರೆನ್ಸಿ ಮೌಲ್ಯದ ಮೇಲೆ ನಿರ್ಧಾರವಾಗುತ್ತದೆ. 2025ರ ಹೊತ್ತಿಗೆ ಅರ್ಥವ್ಯವಸ್ಥೆಯನ್ನು 5 ಲಕ್ಷ ಕೋಟಿ ಡಾಲರ್‌ಗೆ ಏರಿಸಬೇಕು ಎಂಬ ಆಕಾಂಕ್ಷೆಯನ್ನು ದೇಶವು ಹೊಂದಿದೆ. ಆದರೆ, ವಿದೇಶಿ ವಿನಿಮಯ ಮಾರುಕಟ್ಟೆಯು ಇತರ ದೇಶಗಳ ಹೋಲಿಕೆಯಲ್ಲಿ ಭಾರತದ ಆರ್ಥಿಕ ಶಕ್ತಿಯನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವನ್ನು ಹೊಂದಿದೆ.

ಸರ್ಕಾರವು ಮಧ್ಯಪ್ರವೇಶಿಸಿ ರೂಪಾಯಿ ಮೌಲ್ಯ ಕುಸಿತವನ್ನು ತಡೆಯದೇ ಇದ್ದರೆ ಕ್ರಮೇಣ ಆರ್ಥಿಕ ಬಿಕ್ಕಟ್ಟು ಎದುರಾಗಬಹುದು ಎನ್ನಲಾಗುತ್ತಿದೆ. ರೂಪಾಯಿ ಮೌಲ್ಯ ಕುಸಿತವು ಪಾವತಿ ಸಮತೋಲನ ಸ್ಥಿತಿಯನ್ನು ಬಾಧಿಸಬಹುದು, ಅಂತರರಾಷ್ಟ್ರೀಯ ವ್ಯಾಪಾರಕ್ಕೆ ತೊಡಕು ಉಂಟು ಮಾಡಬಹುದು, ಹಣದುಬ್ಬರವನ್ನು ಇನ್ನಷ್ಟು ಹೆಚ್ಚಿಸಬಹುದು, ಉದ್ಯಮವನ್ನು ಸಂಕಷ್ಟಕ್ಕೆ ದೂಡಬಹುದು ಮತ್ತು ಲಾಭ ಕುಸಿಯಲು ಕಾರಣವಾಗಬಹುದು, ಜೀವನವೆಚ್ಚವನ್ನು ಹೆಚ್ಚಿಸಬಹುದು, ವಿದೇಶಕ್ಕೆ ಹೋಗುವ ಭಾರತೀಯರ ವೆಚ್ಚ ಹೆಚ್ಚಿಸಬಹುದು, ವಿದೇಶಿ ಸಾಲಕ್ಕೆ ನೀಡಬೇಕಾದ ಬಡ್ಡಿಯ ಹೊರೆ ಹೆಚ್ಚಬಹುದು, ನಿರುದ್ಯೋಗ ದರ ಹೆಚ್ಚಿಸಬಹುದು, ವಿದೇಶಿ ನೇರ ಹೂಡಿಕೆ ಕಡಿಮೆ ಆಗಬಹುದು, ಅಂತರರಾಷ್ಟ್ರೀಯ ಹಣಕಾಸು ವರ್ಗಾವಣೆಯು ದುರ್ಬಲಗೊಳ್ಳಬಹುದು ಮತ್ತು ಬೇಡಿಕೆ ಕುಸಿಯಬಹುದು.

ಭಾರತ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಸಕಾಲದಲ್ಲಿ ಕೈಗೊಳ್ಳುವ ಗಟ್ಟಿಯಾದ ನೀತಿಯು ರೂಪಾಯಿ ಮೌಲ್ಯ ಕುಸಿತವನ್ನು ತಡೆಯಬಹುದು. ಹಣದುಬ್ಬರವು ನಾಗಾಲೋಟ ತಲುಪುವ ಮುನ್ನವೇ ಅದನ್ನು ನಿಯಂತ್ರಿಸಬೇಕಾದುದು ಬಹಳ ಮುಖ್ಯ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಎಕ್ಸೈಸ್ ಸುಂಕವು ಬಹಳ ಹೆಚ್ಚು ಇದೆ. ಹಣದುಬ್ಬರ ಕಡಿಮೆ ಮಾಡಲು ಈ ದರವನ್ನು ಗಣನೀಯವಾಗಿ ತಗ್ಗಿಸಬೇಕು. ಆರ್‌ಬಿಐಯು 60 ಸಾವಿರ ಕೋಟಿ ಡಾಲರ್ (ಸುಮಾರು ₹47.95 ಲಕ್ಷ ಕೋಟಿ) ವಿದೇಶಿ ವಿನಿಮಯ ಮೀಸಲು ಹೊಂದಿದೆ. ವಿದೇಶಿ ವಿನಿಮಯ ಮೀಸಲಿನ ಒಂದು ಭಾಗವನ್ನು ಮಾರಾಟ ಮಾಡುವ ಮೂಲಕ ಆರ್‌ಬಿಐ ಸಕಾಲದಲ್ಲಿ ಕ್ರಮ ಕೈಗೊಂಡದರೆ ರೂಪಾಯಿಯ ಸ್ಥಿರತೆ ಸಾಧ್ಯವಾಗಬಹುದು. ಇದು ಅಲ್ಪಾವಧಿ ಕ್ರಮ.

ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿಯನ್ನು ಸ್ಥಿರಗೊಳಿಸಿ, ಆ ಮೂಲಕ ಮೌಲ್ಯ ಹೆಚ್ಚಿಸಲು ಸರ್ಕಾರ ಮತ್ತು ಆರ್‌ಬಿಐ ಗಂಭೀರ ಪ್ರಯತ್ನ ನಡೆಸಬೇಕು. ರೂಪಾಯಿಯ ಮೌಲ್ಯಕ್ಕೆ ಸ್ಥಿರತೆ ತಂದುಕೊಟ್ಟು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ಅನಿವಾಸಿ ಭಾರತೀಯರ ಆತ್ಮವಿಶ್ವಾಸವನ್ನು ಆರ್‌ಬಿಐ ಹೆಚ್ಚಿಸಬೇಕು. ವಿದೇಶಿ ಕರೆನ್ಸಿ ಮತ್ತು ಇತರ ಆರ್ಥಿಕ ಅಪಾಯಗಳು ಭಾರತದ ಮಾರುಕಟ್ಟೆ ಅಥವಾ ಜಾಗತೀಕರಣಗೊಂಡ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತದೆ ಮತ್ತು ಅವು ಅರ್ಥವ್ಯವಸ್ಥೆಯ ಮೂಲಭೂತ ಅಂಶಗಳನ್ನೂ ನಡೆಸುತ್ತವೆ. ಆದ್ದರಿಂದ ಅಂತರರಾಷ್ಟ್ರೀಯ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿಯನ್ನು ಬಲಪಡಿಸುವುದರ ಜತೆಗೆ, ಡಾಲರ್ ಎದುರು ರೂಪಾಯಿಯ ಮೌಲ್ಯದ ಅಸ್ಥಿರತೆಯನ್ನು ಕಡಿಮೆ ಮಾಡಬೇಕು. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿಯ ಮೌಲ್ಯಕ್ಕೆ ಎದುರಾಗುವ ಆಘಾತಗಳನ್ನು ನಿಭಾಯಿಸುವುದಕ್ಕಾಗಿ ಅಂತರರಾಷ್ಟ್ರೀಯ ಮತ್ತು ದೇಶೀಯ ರೂಪಾಯಿ ವಿನಿಮಯ ಮಾರುಕಟ್ಟೆಯನ್ನು ಗಟ್ಟಿಗೊಳಿಸಲು ಉಷಾ ಥೋರಟ್ ಅವರ ಅಧ್ಯಕ್ಷತೆಯ ಸಮಿತಿಯು ನೀಡಿದ ವರದಿಯ ಶಿಫಾರಸುಗಳನ್ನು ಆರ್‌ಬಿಐ ಅನುಸರಿಸಬೇಕು.

ಲೇಖಕ: ಪ್ರಾಧ್ಯಾಪಕ ಮತ್ತು ಡೀನ್, ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಆ್ಯಂಡ್ ಇಕನಾಮಿಕ್ ಚೇಂಜ್, ಬೆಂಗಳೂರು



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 174



ದಾಕ್ಷಾಯಣಿ ಹೆಸರು ಬಯಸದ ಸತಿ

ತಂದೆಯ ದುರ್ವರ್ತನೆಯಿಂದ ನೊಂದ ಸತೀದೇವಿ, 'ಎಲೈ ತಂದೆಯೇ, ಮಹಾದೇವನನ್ನು ನಿಂದಿಸುವವನು ಮತ್ತು ನಿಂದೆಯನ್ನು ಕೇಳುವವನು ಇಬ್ಬರೂ ಚಂದ್ರಸೂರ್ಯರಿರುವವರೆಗೆ ನರಕವನ್ನು ಅನುಭವಿಸುವರು. ಆದುದರಿಂದ ಶಿವನ ನಿಂದೆಯನ್ನು ಕೇಳಿರುವ ನಾನು ಈಗ ಶರೀರವನ್ನು ತ್ಯಜಿಸುವೆ. ಅಗ್ನಿಯಲ್ಲಿ ಪ್ರವೇಶ ಮಾಡುವೆ. ನನ್ನ ಸ್ವಾಮಿಯ ನಿಂದೆಯನ್ನು ಕೇಳಿದ ಮೇಲೆ ನಾನು ಬದುಕಿದ್ದು ಪ್ರಯೋಜನವಿಲ್ಲ. ಈಗ ರುದ್ರನನ್ನು ನಿಂದಿಸುತ್ತಿರುವ ನೀನು, ಕೊನೆಗೊಮ್ಮೆ ಪಶ್ಚಾತ್ತಾಪವನ್ನು ಪಡುವೆ. ಮೂರು ಲೋಕಗಳಿಗೂ ಪ್ರಿಯನಾದ ಶಿವನನ್ನು ನೀನೋರ್ವನೇ ನಿಂದಿಸುತ್ತಿರುವುದು. ಪರಿಶುದ್ಧರಾದ ಸತ್ಪುರುಷರು ಮಹಾತ್ಮರನ್ನು ನಿಂದಿಸಿದರೆ ಆಶ್ಚರ್ಯವಾಗುತ್ತದೆ. ಆದರೆ ತಿಳಿವಳಿಕೆಯಿಲ್ಲದ ಮೂರ್ಖನಾದ ನಿನ್ನಂಥವನು ಮಹಾತ್ಮರನ್ನು ನಿಂದಿಸುವುದು ಅಚ್ಚರಿಯಾಗುವುದಿಲ್ಲ. ನಿನ್ನಂಥ ಕಡುಮೂರ್ಖರ ಸ್ವಭಾವವೇ ಹಾಗಿರುತ್ತದೆ. 'ಶಿವ' ಎಂಬ ಎರಡಕ್ಷರಗಳನ್ನು ಒಂದು ಬಾರಿ ಮಾತ್ರ ಜಪಿಸಿದರೂ ಸಕಲ ಪಾಪಗಳೂ ನಾಶವಾಗುತ್ತವೆ. ಅಂತಹ ಪರಮ ಪವಿತ್ರನಾದ ನನ್ನ ಪತಿ ಶಿವನನ್ನು ನಿನ್ನ ನೀಚ ನಾಲಿಗೆಯಿಂದ ಹೀಯಾಳಿಸಿದ್ದೀಯ.

'ಭೋಗ ಮತ್ತು ಮೋಕ್ಷಗಳನ್ನು ಅಪೇಕ್ಷಿಸುವವರ ಮನಸ್ಸೆಂಬ ದುಂಬಿಯು ಶಿವನ ಪಾದಗಳೆಂಬ ಕಮಲಗಳನ್ನು ಸೇವಿಸುವುದು. ಅದರಿಂದ ಸಕಲ ಇಷ್ಟಾರ್ಥಗಳೂ ಸಿದ್ಧಿಸುವುವು. ಶಿವನು ತನ್ನ ಭಕ್ತರು ಯಾವುದನ್ನು ಕೇಳಿದರೂ ಕೂಡಲೇ ಅದನ್ನು ಅನುಗ್ರಹಿಸುವ ಭಕ್ತವತ್ಸಲ. ಸಕಲ ಜನಗಳಿಗೆ ಬಂಧುವಾದ ಶಿವನನ್ನು ನೀನು ಕಾರಣವಿಲ್ಲದೆ ದ್ವೇಷಿಸುತ್ತಲಿರುವೆ. ನಿನ್ನ ಹೊರತು ಬೇರಾರೂ ಶಿವನನ್ನು ಅಪಮಾನಿಸಿಲ್ಲ. ದೇವತೆಗಳು ಮತ್ತು ದೇವಮುನಿಗಳು ಸಹ ಶಿವನನ್ನು ಅಪವಿತ್ರನೆಂದು ಭಾವಿಸಿಲ್ಲ. ನೀನೋರ್ವನೇ ತಿಳಿವಳಿಕೆಯಿಲ್ಲದೆ ದುರಹಂಕಾರದಿಂದ ದೂಷಿಸುತ್ತಿದ್ದೀಯ. ಕಪಾಲಧಾರಿಯಾದ ಶಂಕರನು, ಸ್ಮಶಾನದಲ್ಲಿ ಭೂತಗಳೊಂದಿಗೆ ತಲೆಗೂದಲನ್ನು ಕೆದರಿಕೊಂಡು ವಿಹರಿಸುವುದು, ಚಿತಾಭಸ್ಮವನ್ನು ಧರಿಸುವುದು ಲೋಕಕ್ಷೇಮಕ್ಕಾಗಿಯೇ ಹೊರತು, ನೀನು ಭಾವಿಸಿದಂತೆ ಅದು ಅಪವಿತ್ರವಲ್ಲ. ಶಿವನ ಪಾದಸ್ಪರ್ಶದಿಂದ ಪವಿತ್ರವಾಗುವ ಚಿತಾಭಸ್ಮವನ್ನು ಯಾರು ಶಿರಸ್ಸಿನಲ್ಲಿ ಧರಿಸುವರೋ ಅವರು ಶಿವನ ಸ್ವರೂಪವನ್ನು ಹೊಂದುವರು. ಸದಾ ಸ್ಮಶಾನದಲ್ಲಿ ಚಿತಾಭಸ್ಮದ ಮೇಲೆಯೇ ಸಂಚರಿಸುವಂತಹ ನಮ್ಮ ಗಣಗಳ ಹೆಜ್ಜೆಗಳು ಈ ನಿನ್ನ ಯಜ್ಞಶಾಲೆಗೆ ಬಂದರೆ, ನಿನ್ನ ಮತ್ತು ನಿನ್ನ ಯಜ್ಞ ಎರಡೂ ನಾಶವಾಗುವುದು ನಿಶ್ಚಿತ.

'ವೇದದಲ್ಲಿ ಜೀವನ್ಮುಕ್ತಿಗೆ ಪ್ರವೃತ್ತಿಮಾರ್ಗ ಮತ್ತು ನಿವೃತ್ತಿಮಾರ್ಗ ಎಂಬ ಬದುಕಿನ ಎರಡು ಕರ್ಮಗಳನ್ನು, ಮಾರ್ಗಗಳನ್ನು ಹೇಳಲಾಗಿದೆ. ತಿಳಿವಳಿಕೆಯುಳ್ಳವರು ಅವರೆಡು ಕರ್ಮಗಳನ್ನೂ ವಿಮರ್ಶಿಸಿ ಒಂದನ್ನು ಆಯ್ದುಕೊಳ್ಳಬೇಕು. ಪರಸ್ಪರ ವಿರುದ್ಧವಾಗಿರುವ ಆ ಎರಡು ಕರ್ಮಗಳನ್ನು ಒಂದು ಜೀವಿತಾವಧಿಯಲ್ಲಿ ಮಾಡಲು ಸಾಧ್ಯವಿಲ್ಲ. ಆದರೆ ಪರಬ್ರಹ್ಮನಾದ ಪರಮೇಶ್ವರನಲ್ಲಿ ಭಕ್ತಿಯುಳ್ಳವನಿಗೆ ಈ ಎರಡು ಕರ್ಮಗಳ ಅವಶ್ಯಕತೆಯೇ ಬರುವುದಿಲ್ಲ. ಅವನಿಗೆ ಶಿವಜ್ಞಾನದಿಂದಲೇ ಮುಕ್ತಿ ಪಡೆಯಬಲ್ಲ. ನೀನು ಅಹಂಕಾರವನ್ನು ತ್ಯಜಿಸು, ದುರ್ಬುದ್ಧಿಯನ್ನು ಬಿಡು.

'ಯಾರು ಮಹಾತ್ಮರನ್ನು ನಿಂದಿಸುವರೋ ಅವರ ಜನ್ಮಕ್ಕೆ ಧಿಕ್ಕಾರವಿರಲಿ. ಅಂತಹ ದುಷ್ಟನ ಸಂಬಂಧವನ್ನೂ ಬಿಟ್ಟುಬಿಡಬೇಕು. ಆದ್ದರಿಂದ ನಿನ್ನ ಮಗಳೆಂಬ ಕಾರಣಕ್ಕೆ ನನ್ನ 'ದಾಕ್ಷಾಯಣಿ' ಎಂದು ಕರೆಯುವುದನ್ನು ನಾನು ಬಯಸುವುದಿಲ್ಲ. ನಿನಗೆ ಹೆಚ್ಚು ಹೇಳಿ ಪ್ರಯೋಜನವಿಲ್ಲ. ಸರ್ವಥಾ ನೀನು ದುಷ್ಟ. ಇಂತಹ ದುಷ್ಟನಿಂದ ಜನಿಸಿದ ಈ ನನ್ನ ಶರೀರದಿಂದ ನನಗೆ ಪ್ರಯೋಜನವಿಲ್ಲ. ಈ ಅಪವಿತ್ರವಾದ ಶರೀರವನ್ನು ತ್ಯಜಿಸಿ ಸುಖವನ್ನು ಹೊಂದುವೆ' ಎಂದು ಹೇಳಿದ ಸತೀದೇವಿ ಮನಸ್ಸಿನಲ್ಲಿ ತನ್ನ ಪ್ರಾಣಪ್ರಿಯನಾದ ಶಂಕರನನ್ನು ಸ್ಮರಿಸಿದಳು ಎಂಬಲ್ಲಿಗೆ ಸತೀಖಂಡದ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯುತ್ತದೆ.

ಸರ್ಕಾರ, ಆರ್‌ಬಿಐ ನಿಯಂತ್ರಣದಲ್ಲಿಲ್ಲ

• ಡಿ. ಮುರಳೀಧರ್

ಕಳೆದ ಕೆಲವು ತಿಂಗಳುಗಳಲ್ಲಿ ಜಾಗತಿಕ ಮಾರುಕಟ್ಟೆಯು ಕೆಲವು ವ್ಯಾಪಕ ಮತ್ತು ಕ್ಷಿಪ್ರ ಬದಲಾವಣೆಗಳಿಗೆ ಗುರಿಯಾಗಿದೆ. ಬದಲಾದ ಈ ಸನ್ನಿವೇಶಗಳಿಗೆ ಹೊಂದಿಕೊಳ್ಳಲು ಬಹುತೇಕ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಹಳ ಪ್ರಯಾಸಪಟ್ಟಿವೆ.

ಕೋವಿಡ್ ಸಾಂಕ್ರಾಮಿಕದ ಹೊಡೆತದಿಂದ ಜಾಗತಿಕ ಮಾರುಕಟ್ಟೆಯು ಚೇತರಿಸಿಕೊಳ್ಳುವ ಹಂತದಲ್ಲಿದ್ದಾಗಲೇ ರಷ್ಯಾ–ಉಕ್ರೇನ್ ಯುದ್ಧವು ಬಂದೆರಗಿದೆ. ಇದರಿಂದ ಜಾಗತಿಕ ಇಂಧನ, ಸರಕು ಮತ್ತು ಆಹಾರ ಪದಾರ್ಥಗಳ ಮಾರುಕಟ್ಟೆಗೆ ಧಕ್ಕೆಯಾಗಿದೆ. ಯುದ್ಧದ ಬೆನ್ನಲ್ಲೇ ಹಲವು ದೇಶಗಳು ಆರ್ಥಿಕ ನಿರ್ಬಂಧದಂತಹ ಪ್ರಬಲ ಅಸ್ತ್ರವನ್ನು ಪ್ರಯೋಗಿಸಿವೆ. ಈ ಅಸ್ತ್ರವನ್ನು ಪ್ರಯೋಗಿಸಿದ ದೇಶಗಳೂ ಸೇರಿ, ಬಹುತೇಕ ದೇಶಗಳಲ್ಲಿ ಅಗತ್ಯ ವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯ ಮತ್ತು ಕೊರತೆ ಉಂಟಾಗಿದೆ. ಈ ಸ್ವರೂಪದ ಪ್ರತಿಕ್ರಿಯೆ ಕಂಡುಬಂದಿದ್ದು, ಎರಡನೇ ವಿಶ್ವ ಯುದ್ಧದ ನಂತರ ಇದೇ ಮೊದಲು.

ಈ ನಿರ್ಬಂಧಗಳ ಭಾಗವಾಗಿ ಹಣಕಾಸು ಸಂಸ್ಥೆಗಳು ಮತ್ತು ಅವುಗಳ ವಹಿವಾಟುಗಳನ್ನು ಸ್ಥಗಿತಗೊಳಿಸಿದ್ದರಿಂದ ಜಾಗತಿಕ ಮಾರುಕಟ್ಟೆಯು ಅಲ್ಲೋಲಕಲ್ಲೋಲವಾಗಿದೆ. ಇದರ ಪರಿಣಾಮವು 100ಕ್ಕೂ ಹೆಚ್ಚು ದೇಶಗಳನ್ನು ಬಾಧಿಸಬಹುದು ಮತ್ತು ಜಾಗತಿಕ ವಹಿವಾಟು ನಡೆಸಲು ಅಗತ್ಯವಿರುವ ನಿಧಿಯನ್ನು ಹೊಂದಿಸಿಕೊಳ್ಳಲು ಆ ದೇಶಗಳಿಗೆ ತೊಡಕಾಗಬಹುದು ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಕಳವಳ ವ್ಯಕ್ತಪಡಿಸಿತ್ತು. ಅದರ ಬೆನ್ನಲ್ಲೇ ಜಾಗತಿಕ ಆರ್ಥಿಕತೆಯ ಬೆಳವಣಿಗೆಯ ಅಂದಾಜನ್ನು ಐಎಂಎಫ್ ಇಳಿಸಿತ್ತು. 2021ರಲ್ಲಿ ಶೇ 5.7ರಷ್ಟಿದ್ದ ಆರ್ಥಿಕ ಬೆಳವಣಿಗೆಯ ದರವು, 2022ರಲ್ಲಿ ಶೇ 2.9ರಷ್ಟಕ್ಕೆ ಕುಸಿಯಬಹುದು ಎಂದು ಐಎಂಎಫ್ ಅಂದಾಜಿಸಿದೆ. ಜಗತ್ತಿನಾದ್ಯಂತ ಆರ್ಥಿಕತೆಗಳು ಕಠಿಣ ಪರಿಸ್ಥಿತಿಯಲ್ಲಿ ಇವೆ ಎಂಬುದನ್ನು ಈ ಅಂದಾಜು ದೃಢಪಡಿಸುತ್ತದೆ. ಹಲವು ದೇಶಗಳ ಆರ್ಥಿಕತೆಯೇ ಸ್ಥಗಿತವಾಗಿ ಬಿಡುವ ಅಪಾಯವಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಅಮೆರಿಕದ ಹಣದುಬ್ಬರವು ಶೇ 10ರ ಗಡಿಯನ್ನು ಸಮೀಪಿಸಿದೆ. ಹೀಗಿದ್ದೂ ಜಗತ್ತಿನ ಹೆಚ್ಚಿನ ಕರೆನ್ಸಿಗಳ ಎದುರು ಅಮೆರಿಕದ ಡಾಲರ್‌ನ ಮೌಲ್ಯ ಏರಿಕೆಯಾಗುತ್ತಿದೆ ಎಂಬುದು ಗಮನಿಸಬೇಕಾದ ಅಂಶ. ಡಾಲರ್ ಎದುರು ಭಾರತದ ರೂಪಾಯಿಯ ಮೌಲ್ಯ ಉತ್ತಮವಾಗೇ ಇತ್ತು. ಆದರೆ ಈಚೆಗೆ ರೂಪಾಯಿಯ ಮೌಲ್ಯ ₹80ರಷ್ಟಕ್ಕೆ ಕುಸಿದಿದೆ. ಈ ಸ್ವರೂಪದ ಅಪಮೌಲ್ಯಕ್ಕೆ ಗುರಿಯಾಗಿದ್ದು ಭಾರತದ ರೂಪಾಯಿ ಮಾತ್ರವಲ್ಲ. ಯೂರೊವಿನ ಮೌಲ್ಯ ಡಾಲರ್ ಎದುರು 20 ವರ್ಷಗಳ ಕನಿಷ್ಠಮಟ್ಟಕ್ಕೆ ಕುಸಿದಿದೆ. ಪ್ರಬಲ ಕರೆನ್ಸಿಗಳಾದ ಜಪಾನಿನ ಯೆನ್ ಮತ್ತು ಚೀನಾದ ರೆನ್‌ಮಿನ್‌ಬಿಯ ಮೌಲ್ಯ ಸಹ ಕುಸಿದಿದೆ.



ಡಾಲರ್ ಮತ್ತು ರೂಪಾಯಿಯ ವಿನಿಮಯ ದರವು ಬೇಡಿಕೆ ಮತ್ತು ಪೂರೈಕೆಯನ್ನು ಅವಲಂಬಿಸಿದೆ. ಸರಳವಾಗಿ ಹೇಳುವುದಾದರೆ ಬೇಡಿಕೆ ಹೆಚ್ಚಿದ್ದು, ಪೂರೈಕೆ ಕಡಿಮೆ ಇದ್ದರೆ ಸಹಜವಾಗಿಯೇ ಬೆಲೆ ಏರಿಕೆಯಾಗುತ್ತದೆ. ಡಾಲರ್‌ಗೆ ಬೇಡಿಕೆ ಹೆಚ್ಚಿರುವುದರಿಂದ ಅದರ ಮೌಲ್ಯ ಹೆಚ್ಚಾಗಿದೆ. ಹೀಗಾಗಿ ರೂಪಾಯಿಯ ಎದುರು ಡಾಲರ್ ದುಬಾರಿಯಾಗಿ ಪರಿಣಮಿಸಿದೆ

ರೂಪಾಯಿ ಮೌಲ್ಯ ಕುಸಿಯಲು ಹಲವು ಕಾರಣಗಳು ಇವೆ. ಅಥವಾ ಬೇರೊಂದು ಮಾತಿನಲ್ಲಿ ಹೇಳುವುದಾದರೆ, ಈ ಪರಿಸ್ಥಿತಿಯನ್ನು ಅಮೆರಿಕದ ಡಾಲರ್‌ನ ಮೌಲ್ಯವರ್ಧನೆ ಎಂದು ವಿವರಿಸಬಹುದು.

ಅಮೆರಿಕದ ಹಣದುಬ್ಬರವನ್ನು ಶೇ 2ರಷ್ಟಕ್ಕೆ ನಿಯಂತ್ರಿಸುವ ಗುರಿಯನ್ನು ಫೆಡರಲ್ ಬ್ಯಾಂಕ್ ಹಾಕಿಕೊಂಡಿತ್ತು. ಆದರೆ, ಈ ಗುರಿಯನ್ನೂ ಮೀರಿ ಹಣದುಬ್ಬರವು ಶೇ 10ರ ಗಡಿಯನ್ನು ಸಮೀಪಿಸಿದೆ. ಇದನ್ನು ನಿಯಂತ್ರಿಸುವ ಸಲುವಾಗಿ ಫೆಡರಲ್ ಬ್ಯಾಂಕ್ ಬಡ್ಡಿದರವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿದೆ. ಅಮೆರಿಕದಲ್ಲಿ ಬಡ್ಡಿದರ ಏರಿಕೆಯಾದ ಕಾರಣ ಅಲ್ಲಿನ ಬಾಂಡ್ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವ ಉದ್ದೇಶದಿಂದ, ಭಾರತದ ಹಣಕಾಸು ಮಾರುಕಟ್ಟೆಯಲ್ಲಿ ಮಾಡಿದ್ದ ಹೂಡಿಕೆಯನ್ನು ಭಾರಿ ಪ್ರಮಾಣದಲ್ಲಿ ಹೊರತೆಗೆಯಲಾಗಿದೆ. ಕಳೆದ ಆರು ತಿಂಗಳಲ್ಲಿ ಸುಮಾರು ಎರಡು ಲಕ್ಷ ಕೋಟಿ ರೂಪಾಯಿಯಷ್ಟು ಬಂಡವಾಳವು ಭಾರತದ ಮಾರುಕಟ್ಟೆಯಿಂದ ಹೊರಹೋಗಿದೆ ಎಂದು ಸೆಬಿ ಅಂದಾಜಿಸಿದೆ. ಇದು ಡಾಲರ್‌ನ ಮೌಲ್ಯವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿದೆ.

ಜಾಗತಿಕ ಕಚ್ಚಾತೈಲದ ವಹಿವಾಟನ್ನು ಅಮೆರಿಕದ ಡಾಲರ್ ಮೂಲಕವೇ ನಡೆಸಲಾಗುತ್ತದೆ. ಹೀಗಾಗಿ ಕಚ್ಚಾತೈಲದ ಬೆಲೆ ಮತ್ತು ಡಾಲರ್‌ನ ಮೌಲ್ಯದ ನಡುವೆ ನೇರಾನೇರ ಸಂಬಂಧವಿದೆ. ಕೋವಿಡ್ ಸಾಂಕ್ರಾಮಿಕದ ನಂತರ ಭಾರತದಲ್ಲಿ ಇಂಧನದ ಬೇಡಿಕೆ ಹೆಚ್ಚಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿನ ಕಚ್ಚಾತೈಲದ ಬೆಲೆ ಏರಿಕೆಯೂ ಭಾರತಕ್ಕೆ ಪ್ರತಿಕೂಲವಾಗಿ ಪರಿಣಮಿಸಿದೆ. ಹೀಗಾಗಿ 2020–21ರಲ್ಲಿ ಕಚ್ಚಾತೈಲದ ಆಮದು ಮೌಲ್ಯ ಸುಮಾರು ₹4.96 ಲಕ್ಷ ಕೋಟಿ ಇದ್ದದ್ದು, 2021–22ರಲ್ಲಿ ಸುಮಾರು ₹9.50 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಇದೇ ಜನವರಿಯಲ್ಲಿ ಪ್ರತಿ ಬ್ಯಾರಲ್ ಕಚ್ಚಾತೈಲದ ಬೆಲೆಯು 100 ಡಾಲರ್‌ನ ಗಡಿಯನ್ನು ದಾಟಿತ್ತು ಮತ್ತು ಅದರ ಮೇಲೆಯೇ ಇತ್ತು. ಒಮ್ಮೆ 140 ಡಾಲರ್‌ನ ಗಡಿಯನ್ನೂ ಮುಟ್ಟಿತ್ತು. ರಷ್ಯಾದಿಂದ ರಿಯಾಯಿತಿ ದರದಲ್ಲಿ ಸ್ವಲ್ಪ ಪ್ರಮಾಣದ ಕಚ್ಚಾತೈಲವನ್ನು ಭಾರತ ಖರೀದಿಸಿದೆ. ಆದರೆ, ಜಾಗತಿಕ ಮಾರುಕಟ್ಟೆಯಲ್ಲಿ ಡಾಲರ್‌ಗೆ ಬೇಡಿಕೆ ಮತ್ತು ಅದರ ಮೌಲ್ಯ ಎರಡೂ ಹೆಚ್ಚಾಗುತ್ತಲೇ ಇದೆ. ಹೀಗಾಗಿ ಭಾರತದ ವ್ಯಾಪಾರ ಕೊರತೆಯು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. 2020–21ರಲ್ಲಿ ಭಾರತದ ವ್ಯಾಪಾರ ಕೊರತೆಯು ಸುಮಾರು ₹8.13 ಲಕ್ಷ ಕೋಟಿ ಇದ್ದದ್ದು, 2021–22ರಲ್ಲಿ ಸುಮಾರು ₹15.31 ಲಕ್ಷ ಕೋಟಿಗೆ ಏರಿಕೆಯಾಗಿದೆ. ಇದು ಶೇ 85ರಷ್ಟು ಏರಿಕೆ. ಇದು ಡಾಲರ್‌ಗೆ ಬೇಡಿಕೆಯನ್ನು ಹೆಚ್ಚಿಸಿದೆ.

2021–22ನೇ ಸಾಲಿನ ವಿದೇಶಿ ವ್ಯಾಪಾರಕ್ಕಾಗಿ ಭಾರತವು ಮಾಡಬೇಕಿರುವ ಪಾವತಿಯಲ್ಲಿ 1,000 ಕೋಟಿ ಡಾಲರ್‌ನಷ್ಟು (ಸುಮಾರು ₹79,771 ಕೋಟಿ) ಕೊರತೆಯಾಗಿದೆ. ಭಾರತದ ವಿದೇಶಿ ವಿನಿಮಯ ಮೀಸಲು ಕಡಿಮೆಯಾಗಿರುವುದನ್ನು ಇದು ಸೂಚಿಸುತ್ತದೆ. 2021ರ ಅಕ್ಟೋಬರ್‌ನಲ್ಲಿ ಭಾರತದ ವಿದೇಶಿ ವಿನಿಮಯ ಮೀಸಲು 64,200 ಕೋಟಿ ಡಾಲರ್‌ನಷ್ಟಿತ್ತು (ಸುಮಾರು ₹51.21 ಲಕ್ಷ). 2022ರ ಜುಲೈ ಆರಂಭದ ವೇಳೆಗೆ ಅದು 58,800 ಕೋಟಿ ಡಾಲರ್‌ಗೆ (ಸುಮಾರು ₹46.90 ಲಕ್ಷ ಕೋಟಿ) ಕುಸಿದಿದೆ. ಭಾರತವು ತಾನು ಗಳಿಸುತ್ತಿರುವುದಕ್ಕಿಂತ ಹೆಚ್ಚು ಡಾಲರ್ ಅನ್ನು ಪಾವತಿಸುತ್ತಿದೆ ಎಂಬುದನ್ನು ಇದು ಸೂಚಿಸುತ್ತದೆ.

ಡಾಲರ್ ಮತ್ತು ರೂಪಾಯಿಯ ವಿನಿಮಯ ದರವು ಬೇಡಿಕೆ ಮತ್ತು ಪೂರೈಕೆಯನ್ನು ಅವಲಂಬಿಸಿದೆ. ಸರಳವಾಗಿ ಹೇಳುವುದಾದರೆ ಬೇಡಿಕೆ ಹೆಚ್ಚಿದ್ದು, ಪೂರೈಕೆ ಕಡಿಮೆ ಇದ್ದರೆ ಸಹಜವಾಗಿಯೇ ಬೆಲೆ ಏರಿಕೆಯಾಗುತ್ತದೆ. ಡಾಲರ್‌ಗೆ ಬೇಡಿಕೆ ಹೆಚ್ಚಿರುವುದರಿಂದ ಅದರ ಮೌಲ್ಯ ಹೆಚ್ಚಾಗಿದೆ. ಹೀಗಾಗಿ ರೂಪಾಯಿಯ ಎದುರು ಡಾಲರ್ ದುಬಾರಿಯಾಗಿ ಪರಿಣಮಿಸಿದೆ.

ಇಂತಹ ಸಂದರ್ಭದಲ್ಲಿ ರೂಪಾಯಿಯನ್ನು ರಕ್ಷಿಸಲು ಆರ್‌ಬಿಐ ಮಧ್ಯಪ್ರವೇಶಿಸಬೇಕಿತ್ತು ಮತ್ತು ಇದಕ್ಕಾಗಿ ತನ್ನ ವಿದೇಶಿ ವಿನಿಮಯ ಮೀಸಲಿನಲ್ಲಿ ಸ್ವಲ್ಪ ಪ್ರಮಾಣವನ್ನು ಬಳಸಬಹುದಿತ್ತು ಎಂದು ಕೆಲವು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಈಗಿನ ಜಾಗತಿಕ ಅಸ್ಥಿರ ಪರಿಸ್ಥಿತಿಯನ್ನು ಗಮನಿಸಿದರೆ ಅಂತಹ ಕ್ರಮಗಳು ಅಪಾಯವನ್ನು ತಂದೊಡ್ಡಬಹುದಿತ್ತು. ಹೀಗಿದ್ದೂ ಜಾಗತಿಕ ಮಾರುಕಟ್ಟೆಯಲ್ಲಿ ರೂಪಾಯಿಯ ಮೂಲಕವೇ ವಹಿವಾಟು ನಡೆಸುವ ಅತ್ಯಂತ ದಿಟ್ಟವಾದ ಕ್ರಮವನ್ನು ಆರ್‌ಬಿಐ ತೆಗೆದುಕೊಂಡಿದೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ರೂಪಾಯಿಯ ವಹಿವಾಟಿನ ಸಾಧ್ಯತೆಗಳನ್ನು ವಿಸ್ತರಿಸಬಹುದು. ಡಾಲರ್‌ನ ಪ್ರಾಬಲ್ಯ ಇರುವ ಜಾಗತಿಕ ಮಾರುಕಟ್ಟೆಯಲ್ಲಿ, ಮಧ್ಯಮಾವಧಿಯಲ್ಲಿ ರೂಪಾಯಿಯನ್ನು ಬಲಗೊಳಿಸಲು ಇಂತಹ ಸಣ್ಣ ಕ್ರಮಗಳೂ ಕಾರಣವಾಗುತ್ತವೆ.


ಭಾರತದ ಆರ್ಥಿಕತೆಯ ಅಡಿಪಾಯಗಳು ದೃಢವಾಗಿವೆ ಮತ್ತು ಸ್ಥಗಿತತೆಯ ಅಪಾಯವನ್ನು ಮೀರಲಿವೆ ಎಂಬುದನ್ನು ಕೆಲವು ಸೂಕ್ಷ್ಮ ಸಂಗತಿಗಳು ಸೂಚಿಸುತ್ತಿವೆ. ಆದರೆ ಜಾಗತಿಕ ಆರ್ಥಿಕತೆಯ ಅಸ್ಥಿರತೆಯು ಮುಂದುವರಿಯಲಿದೆ ಮತ್ತು ಅದರ ಪರಿಣಾಮಗಳು ಏನು ಎಂಬುದು ಊಹಿಸಲು ಸಾಧ್ಯವಿಲ್ಲ. ಹೀಗಾಗಿ ದಿಟ್ಟವಾದ ನಿರ್ಧಾರ ತೆಗೆದುಕೊಂಡು ಪಶ್ಚಾತ್ತಾಪ ಪಡುವುದಕ್ಕಿಂತ, ರಕ್ಷಣಾತ್ಮಕವಾದ ಕ್ರಮಗಳ ಮೊರೆ ಹೋಗುವುದು ಹೆಚ್ಚು ಸುರಕ್ಷಿತ.

ಈ ಎಲ್ಲಾ ವಿದ್ಯಮಾನಗಳು ಕೇಂದ್ರ ಸರ್ಕಾರ ಮತ್ತು ಆರ್‌ಬಿಐನ ನಿಯಂತ್ರಣದ ವ್ಯಾಪ್ತಿಯಲ್ಲಿಲ್ಲ. ಅವುಗಳ ಮುಂದೆ ಇರುವ ಆಯ್ಕೆಗಳು ಸೀಮಿತವಾದವು. ಹೀಗಾಗಿ ಸರ್ಕಾರ ಮತ್ತು ಆರ್‌ಬಿಐ ವಿವೇಕಯುತವಾಗಿ ನಡೆಯುತ್ತಿವೆ ಮತ್ತು ಅವು ಅಜಾಗರೂಕವಾಗಿಲ್ಲ.

ಲೇಖಕ: ಉದ್ಯಮಿ, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ

ಪದಬಂಧ 5020

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1. ಹಣದ ನೆರವು (5)
3. ಕೈಯಲ್ಲಿ ಕಾಸಿದ್ರೆ ಶಿವನ ನೆಲೆ ಕಂಡೀತು! (3)
5. ಯಾವುದೇ ತಪ್ಪು ಮಾಡದವನು (5)
7. ವಚನ ವಿಭಕ್ತಿಗಳಿಗಾಗಿ ರೂಪಭೇದ ಹೊಂದದ ಶಬ್ದ (3)
8. ಈತ ಬೆಂಗಾಲಿನವನು (5)
10. ಬೆಂದಕ್ಕಿ ಕಾಳು ಇಲ್ಲಿದೆ (3)
11. ವ್ಯಾಕರಣದಲ್ಲಿ ವಸ್ತುವಿನ ಗುಣವನ್ನು ಹೇಳುವ ಪದ (5)
14. ಮುಚ್ಚಿಡಬೇಕಾದ ಗೌಪ್ಯ (3)
15. ಎಲ್ಲರನ್ನೂ ಒಂದುಗೂಡಿಸುವುದು (5)

ಮೇಲಿಂದ ಕೆಳಕ್ಕೆ

1. ಅಧಮನ ರಕ್ತನಾಳ! (3)
2. ಸರಸದ ಮಾತುಕತೆ (3)
4. ಸರಸಮಯದಲ್ಲೇ ಕಾಲವನ್ನು ಹುಡುಕಿ! (3)
6. ರಾಜ್ಯದ ಆಡಳಿತ ವ್ಯವಸ್ಥೆ (3)
7. ಸಡಿಲವಾದುದನ್ನು ಹೀಗೆನ್ನಿ (3)
8. ಕಿರು ನಾಲಿಗೆಯ ಪ್ರದೇಶ (3)
9. ಬೌದ್ಧ ಭಿಕ್ಷು ಇಲ್ಲಿದ್ದಾನೆ (3)
10. ಅಬ್ಬಾ! ಬರ ಬಂದರೂ ಇಷ್ಟು ಆರ್ಭಟವೇ? (3)
12. ವಾದ್ಯವನ್ನು ನುಡಿಸುವವನು (3)
13. ಕಣದಲ್ಲಿ ನಡೆದ ಲಗ್ನ! (3)

5019ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಬಾಲಬಡಿಕ
4.ಕಪೋಲ 5.ವಿನಯ
9.ಕನ್ನ 10.ಗುಲಾಬಿ
11.ಡಿಕಿಂ 12.ಕೆರೆತ
15.ಕುಟೀರ
16.ಪಕ್ಷಿಸಂಕುಲ

ಮೇಲಿಂದ ಕೆಳಕ್ಕೆ:
1.ಸಿಂಬಳ 2.ಬಾಲ
3.ಕವಿ 4.ಕರ್ಣಾಕರ್ಣಿಕೆ
6.ಯಮಕಿಂಕರ
7.ಉಂಗುರ 8.ನಂಬಿಕೆ
13.ತಪ 14.ಪ್ರಸಂಗ
15.ಕುಲ

ಸುಡೊಕು 5406

		7	1		2		6	
				3				9
2		4				1		
	6	8		5			4	1
						7	9	
9	4			2				
3	7			8		9		5
		6					8	
	8		3		5	6		2


5405 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ
ಋತು ತಿಥಿ: ಆಷಾಢ ಕೃಷ್ಣ ತೃತೀಯ ಗಂ. 13-28, ನಕ್ಷತ್ರ: ಧನಿಷ್ಠಾ ಗಂ. 15-11 ಯೋಗ: ಆಯುಷ್ಮಾನ್ ಗಂ 20-49 ಕರಣ: ವಿಷ್ಟಿ ಗಂ. 13-28, ಮಿಥುನ ಮಾಸದ 31 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-15 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 16 ಜುಲ್‌ಹಿಜಾನ್, ದಿನ ವಿಶೇಷ : ಸಂಕಷ್ಟಹರ ಚತುರ್ಥಿ ವ್ರತ (ಚಂದ್ರೋದಯ ರಾತ್ರಿ 09: 40) ಮಾನಸ ಪೂಜಾ ಪ್ರಾರಂಭ (ಬಂಗಾಳ) ಅದೃಷ್ಟ ಸಂಖ್ಯೆ : 1, 8

ಮೇಷ: ನೂತನವಾದ ಸ್ವತ್ತು ಖರೀದಿಯ ವ್ಯವಹಾರಗಳಲ್ಲಿ ಸಮರ್ಥನೀಯ ತೀರ್ಮಾನವನ್ನು ಕೈಗೊಳ್ಳುವುದು ಈ ದಿನದ ನಿಮ್ಮ ಅತೀ ಮುಖ್ಯ ಕೆಲಸವಾಗಿರುತ್ತದೆ.

ವೃಷಭ: ಲೆಕ್ಕಪತ್ರ ಪರಿಶೋಧಕ ವೃತ್ತಿಯವರಿಗೆ ಉದ್ಯೋಗದಲ್ಲಿ ದಿನೇ ದಿನೇ ಒತ್ತಡ ಹೆಚ್ಚಲಿದೆ. ಕುಟುಂಬದ ಸತ್ಕಾರ್ಯಗಳಲ್ಲಿ ಬಂಧುಗಳ ಸಕ್ರಿಯ ಪಾತ್ರವು ನಿಮ್ಮ ಜವಾಬ್ದಾರಿಯನ್ನು ಕಡಿಮೆ ಮಾಡಲಿದೆ.

ಮಿಥುನ: ಮಗನ ಕಾಲೇಜಿನ ಸೀಟಿಗಾಗಿ ಅಧಿಕಾರಿಯೊಬ್ಬರ ನೆರವು ಪಡೆಯಲು ಪ್ರಯತ್ನಿಸಿ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಅಪಾರ ಉತ್ಸಾಹ ಮೂಡುವುದು. ಉನ್ನತ ಸರ್ಕಾರಿ ನೌಕರರು, ವ್ಯವಸ್ಥಾಪಕರಿಗೆ ಸುಯೋಗ.

ಕರ್ಕಾಟಕ: ಕೋರ್ಟಿನ ಕಾರ್ಯಗಳಲ್ಲಿ ವಿನೂತನ ತಿರುವು ಹೊಂದಿ ನಿಮ್ಮ ಆಲೋಚನೆಗಳು ವ್ಯತ್ಯಾಸವಾಗಬಹುದು. ಕೌಟುಂಬಿಕ ಬಿಕ್ಕಟ್ಟುಗಳು ನಿವಾರಣೆ-ಯಾಗುವುದು. ವಿಷ್ಣುಸಹಸ್ರನಾಮವನ್ನು ಪಠಿಸಿ ಹೆಚ್ಚಿನ ಅಭಿವೃದ್ಧಿ ಹೊಂದಿ

ಸಿಂಹ: ಮುಂದಿನ ಶುಭಕಾರ್ಯಗಳ ಬಗ್ಗೆ ಹಿರಿಯರೊಡನೆ ಸಮಾಲೋಚನೆ ನಡೆಸಿ. ಸಹೋದರರ ಕಾರ್ಯಗಳಿಗೋಸ್ಕರ ಅಧಿಕ ಸುತ್ತಾಟವಾದರೂ ನೆಮ್ಮದಿ ಸಿಗಲಿದೆ. ವೈವಾಹಿಕ ಮಾತುಕತೆಗಳ ಭಿನ್ನಾಭಿಪ್ರಾಯಗಳು ದೂರಾಗುವುದು.

ಕನ್ಯಾ: ಉದ್ಯೋಗಾಕಾಂಕ್ಷಿಗಳಿಗೆ ಅಮೋಘ ಅವಕಾಶಗಳು ಲಭಿಸುವುದು. ಕಾರ್ಖಾನೆ ವೃತ್ತಿಯವರಿಗೆ ಹೆಚ್ಚಿನ ಲಾಭ ಇಲ್ಲವಾದರೂ, ದೈನಂದಿನ ನೆಮ್ಮದಿಗಾಗಲಿ, ಸಂತೋಷಕ್ಕಾಗಲಿ ಯಾವುದೇ ತೊಂದರೆ ಇರಲಾರದು.

ತುಲಾ: ಕಾಲಕ್ಕೆ ತಕ್ಕಂತೆ ಕೆಲವು ಬದಲಾವಣೆಯನ್ನು ಮಾಡಿಕೊಳ್ಳಲು ಸಿದ್ಧರಾಗಬೇಕಾಗುತ್ತದೆ. ನಿಮ್ಮ ಸ್ವಾರ್ಥದ ಕೆಲವು ನಿರ್ಧಾರದ ಫಲವಾಗಿ ಬಂಧುಗಳು ಅಥವಾ ಆತ್ಮೀಯರು ದೂರವಾಗುವ ಲಕ್ಷಣಗಳಿವೆ.

ವೃಶ್ಚಿಕ: ವಾಕ್ಚಾತುರ್ಯದಿಂದ ಸಹೋದರರ ಕೋಪವನ್ನು ಉಪಶಮನಗೊಳಿಸುವುದರಿಂದ ಕೌಟುಂಬಿಕ ಸೌಖ್ಯ ಹೆಚ್ಚುವುದು. ರೇಷ್ಮೆ ವ್ಯಾಪಾರಿಗಳಿಗೆ ಸಗಟು ಮಾರಾಟದಿಂದ ಅಧಿಕ ಲಾಭ ದೊರೆಯುವುದು.

ಧನು: ಮುಖ್ಯವಾಗಿ ಅಪರಿಚಿತ ಜಾಗದಲ್ಲಿ, ಅಪರಿಚಿತ ವ್ಯಕ್ತಿಗಳಲ್ಲಿ ತಾಳ್ಮೆಯಿಂದ ವ್ಯವಹರಿಸಿದರೆ ಹಾದಿ ಸುಗಮವಾಗಿ ಸಾಗುತ್ತದೆ. ಹೊಸಹೂಡಿಕೆ ಮತ್ತು ಒಪ್ಪಂದಗಳು ನಿಶ್ಚಿತ ಹಂತ ತಲುಪಿದ್ದಕ್ಕೆ ಸಂತೃಪ್ತಿಯ ಭಾವವಿರುವುದು.

ಮಕರ: ನೀವು ವ್ಯವಹಾರದಲ್ಲಿ ಹೆಚ್ಚು ಶ್ರಮವಹಿಸಿ ಕಾರ್ಯನಿರ್ವಹಿಸಬೇಕಾಗುತ್ತದೆ. ಮಗನಿಗೆ ವಿದೇಶದಲ್ಲಿ ವೃತ್ತಿ ದೊರೆಯುತ್ತದೆ. ಮನರಂಜನೆಗಾಗಿ ಹಣ ವ್ಯಯ ಮಾಡುವುದು ಈ ದಿನ ಸರಿಯಲ್ಲ.

ಕುಂಭ: ಕೆಲಸದಲ್ಲಿನ ನಿಮಗಿರುವ ಹೆಚ್ಚಿನ ದಕ್ಷತೆಯಿಂದಾಗಿ ಮೇಲಧಿಕಾರಿಗಳ ಮೆಚ್ಚುಗೆ ಗಳಿಸುವಿರಿ. ಅದರ ಫಲವಾಗಿ ಕಂಪನಿಯಲ್ಲಿ ಹೆಚ್ಚಿನ ಸ್ಥಾನಮಾನಗಳು ದೊರಕಲಿದೆ. ತುರ್ತು ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡುವ ಅಭ್ಯಾಸ ಒಳ್ಳೆಯದು.

ಮೀನ: ನೀವು ತೋರಿದ ಸಾಮಾಜಿಕ ಕಳಕಳಿಗಾಗಿ ಸಂಘ ಸಂಸ್ಥೆಗಳವರು ನಿಮ್ಮನ್ನು ಸಮಾಜದ ಆಸ್ತಿ ಎಂದು ಪರಿಗಣಿಸಲಿದ್ದಾರೆ. ಸ್ನೇಹಿತರೊಂದಿಗೆ ಪ್ರವಾಸ ಹೊರಡುವ ಸಾಧ್ಯತೆ ಇದೆ.

ರಾಷ್ಟ್ರಪತಿ ಚುನಾವಣೆಯಲ್ಲಿ ದ್ರೌಪದಿಗೆ ಬೆಂಬಲ: ಜಾರ್ಖಂಡ್ ಮೈತ್ರಿಕೂಟದಲ್ಲಿ ಬಿರುಕು

ಜೆಎಂಎಂ ಮೇಲೆ ಕಾಂಗ್ರೆಸ್ ಅಸಮಾಧಾನ


ಶಿಬು ಸೊರೇನ್

ರಾಂಚಿ (ಪಿಟಿಐ): ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರಿಗೆ ಬೆಂಬಲ ಘೋಷಿಸುವ ಮೂಲಕ ಬಿಜೆಪಿ ಹತ್ತಿರವಾಗುತ್ತಿರುವ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷವು, ಜಾರ್ಖಂಡ್‌ನಲ್ಲಿ ಆಡಳಿತಾರೂಢ ಯುಪಿಎ ಮೈತ್ರಿಯ ಪಾಲುದಾರ ಕಾಂಗ್ರೆಸ್‌ನ ತೀವ್ರ ಕೆಂಗಣ್ಣಿಗೆ ಗುರಿಯಾಗಿದೆ.

ಯುಪಿಎ ಪಾಲುದಾರ ಕಾಂಗ್ರೆಸ್ ಮತ್ತು ಆರ್‌ಜೆಡಿ ಪಕ್ಷಗಳು ಪ್ರತಿಪಕ್ಷಗಳ ಅಭ್ಯರ್ಥಿ ಯಶವಂತ ಸಿನ್ಹಾ ಅವರಿಗೆ ಬೆಂಬಲವಾಗಿ ನಿಂತಿವೆ. 'ಜಾರ್ಖಂಡ್ ಮಣ್ಣಿನ ಮಗ' ಯಶವಂತ ಸಿನ್ಹಾ ಅವರಿಗೇ ತನ್ನ ಬೆಂಬಲವೆಂದು ಜೆಎಂಎಂ ಪಕ್ಷ ಆರಂಭದಲ್ಲಿ ಹೇಳಿತ್ತು. ಆದರೆ, ಎನ್‌ಡಿಎ ದ್ರೌಪದಿ ಮುರ್ಮು ಅವರ ಹೆಸರು ಘೋಷಿಸಿ, ಅವರು ಗೆದ್ದರೆ ರಾಷ್ಟ್ರಪತಿ ಹುದ್ದೆಗೇರಿದ ದೇಶದ ಮೊದಲ ಬುಡಕಟ್ಟು ಮಹಿಳೆ ಎನಿಸಿಕೊಳ್ಳುತ್ತಾರೆ ಎಂದಾಗ, ಜೆಎಂಎಂ ತನ್ನ ನಿಲುವು ಬದಲಿಸಬೇಕಾಯಿತು ಎನ್ನುವುದು ಸ್ಪಷ್ಟ.

ಮುರ್ಮು ಮತ್ತು ಜೆಎಂಎಂ ನಾಯಕ ಶಿಬು ಸೊರೇನ್ ಇಬ್ಬರೂ ಬುಡಕಟ್ಟು ಸಮುದಾಯದ ನಾಯಕರು. ಈ ಇಬ್ಬರೂ ಜಾರ್ಖಂಡ್ ಮತ್ತು ನೆರೆಯ ಒಡಿಶಾ ರಾಜ್ಯದಲ್ಲಿ ಬಹುಸಂಖ್ಯೆಯಲ್ಲಿರುವ ಸಂತಾಲ್ ಜನಾಂಗಕ್ಕೆ ಸೇರಿದವರು. ಹಾಗಾಗಿಯೇ 'ಮಣ್ಣಿನ ಮಗ' ಅಥವಾ 'ಬುಡಕಟ್ಟು ಜನಾಂಗ' ಇದರಲ್ಲಿ ಆಯ್ಕೆ ಪ್ರಶ್ನೆಯೂ ಜೆಎಂಎಂಗೆ ಎದುರಾಯಿತು ಎನ್ನುವುದು ಕೆಲವು ವಿಶ್ಲೇಷಕರ ಅಭಿಪ್ರಾಯ.

ಜಾರ್ಖಂಡ್ ಮುಖ್ಯಮಂತ್ರಿ ಮತ್ತು ಪಕ್ಷದ ಕಾರ್ಯಾಧ್ಯಕ್ಷ ಹೇಮಂತ್ ಸೊರೇನ್ ಅವರು ಗಣಿ ಗುತ್ತಿಗೆಯಲ್ಲಿ ಹಿತಾಸಕ್ತಿ ಸಂಘರ್ಷ ಆರೋಪ ಪ್ರಕರಣದಲ್ಲಿ ಜಾರ್ಖಂಡ್ ಹೈಕೋರ್ಟ್ ಮುಂದೆ ವಿಚಾರಣೆ ಎದುರಿಸುತ್ತಿದ್ದಾರೆ. ಜತೆಗೆ ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನೂ ಎದುರಿಸುತ್ತಿದ್ದಾರೆ. ಈ ಕಾರಣಗಳಿಗಾಗಿಯೇ ಜೆಎಂಎಂ ಮುರ್ಮು ಅವರಿಗೆ ಬೇಷರತ್ ಬೆಂಬಲ ಘೋಷಿಸಿದೆ ಎನ್ನಲಾಗುತ್ತಿದೆ.

ಮುರ್ಮುಗೆ ಎಸ್‌ಬಿಎಸ್‌ಪಿ ಬೆಂಬಲ

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ಮೈತ್ರಿ ಕೂಟ ಸುಹೇಲ್‌ದೇವ್ ಭಾರತೀಯ ಸಮಾಜ ಪಾರ್ಟಿ (ಎಸ್‌ಬಿಎಸ್‌ಪಿ) ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರಿಗೆ ಬೆಂಬಲ ಘೋಷಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪಕ್ಷದ ನಾಯಕ ರಾಜ್‌ಭರ್ 'ಅಖಿಲೇಶ್ ಯಾದವ್ ನಮ್ಮ ಬೆಂಬಲ ಕೇಳಿಲ್ಲ. ಕೇಂದ್ರ ಗೃಹಸಚಿವ ಅಮಿತ್ ಶಾ ಅವರ ದೆಹಲಿಯಲ್ಲಿ ಇತ್ತೀಚೆಗಷ್ಟೆ ಸಭೆ ನಡೆಯಿತು. ಶಾ ಅವರು ಮುರ್ಮು ಅವರನ್ನು ಬೆಂಬಲಿಸುವಂತೆ ಕೇಳಿದರು. ಹಾಗಾಗಿ ಉತ್ತರಪ್ರದೇಶದಲ್ಲಿ ಪಕ್ಷದ ಆರೂ ಶಾಸಕರು ಮುರ್ಮು ಅವರನ್ನು ಬೆಂಬಲಿಸಲಿದ್ದಾರೆ' ಎಂದು ತಿಳಿಸಿದರು. ಅಖಿಲೇಶ್ ಅವರ ಚಿಕ್ಕಪ್ಪ ಮತ್ತು ಸಮಾಜವಾದಿ ಪಕ್ಷದ ಶಾಸಕ ಶಿವಪಾಲ್ ಸಿಂಗ್ ಯಾದವ್ ಕೂಡ ತಮ್ಮ ಬೆಂಬಲಿಗ ಶಾಸಕ, ಸಂಸದರು ಮುರ್ಮು ಅವರಿಗೆ ಮತ ನೀಡುವುದಾಗಿ ಹೇಳಿದ್ದಾರೆ.

ಇಂದು ಎಎಪಿ ನಿಲುವು ಪ್ರಕಟ

ನವದೆಹಲಿ: ಆಮ್ ಆದ್ಮಿ ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿ ಸಭೆ ಶನಿವಾರ ನಡೆಯಲಿದ್ದು, ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷದ ಅಭ್ಯರ್ಥಿ ಯಶವಂತ್ ಸಿನ್ಹಾ ಅವರನ್ನು ಬೆಂಬಲಿಸಬೇಕೇ, ಬೇಡವೇ ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದೆ.

ಒಮ್ಮತದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವ ಸಂಬಂಧ ಕಳೆದ ತಿಂಗಳು ನಡೆದ ವಿರೋಧ ಪಕ್ಷಗಳ ನಾಯಕರ ಸಭೆಗೆ ಅರವಿಂದ್ ಕೇಜ್ರಿವಾಲ್ ಗೈರು ಹಾಜರಾಗಿದ್ದರು. ಆದರೆ, ಯಶವಂತ ಸಿನ್ಹಾ ಅವರನ್ನು ವಿರೋಧ ಪಕ್ಷಗಳು ಅಭ್ಯರ್ಥಿಯನ್ನಾಗಿ ಘೋಷಿಸಿದ ಬಳಿಕ, ಅವರನ್ನು ಬೆಂಬಲಿಸುವುದಾಗಿ ಎನ್‌ಸಿಪಿ ನಾಯಕ ಶರದ್ ಪವಾರ್ ಅವರಿಗೆ ಎಎಪಿ ತಿಳಿಸಿತ್ತು ಎನ್ನಲಾಗಿದೆ.

ಕಾಂಗ್ರೆಸ್ ತೊರೆದು ಈಚೆಗೆ ಸಮಾಜವಾದಿ ಪಕ್ಷದ ಬೆಂಬಲದೊಂದಿಗೆ ಪಕ್ಷೇತರ ಅಭ್ಯರ್ಥಿಯಾಗಿ ರಾಜ್ಯಸಭೆಗೆ ಆಯ್ಕೆಯಾಗಿರುವ ಕಪಿಲ್ ಸಿಬಲ್ ಅವರನ್ನು ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿ ಮಾಡುವಂತೆ ಕೇಜ್ರಿವಾಲ್ ಈ ಹಿಂದೆ ಸೂಚಿಸಿದ್ದರು. ಆದರೆ, ವಿರೋಧ ಪಕ್ಷಗಳು ಇದಕ್ಕೆ ಒಪ್ಪಿಗೆ ನೀಡಲಿಲ್ಲ ಎಂದು ಮೂಲಗಳು ತಿಳಿಸಿವೆ. ಜೂನ್ 21ರಂದು ನಡೆದ ವಿರೋಧ ಪಕ್ಷಗಳ 2ನೇ ಸಭೆಗೂ ಮುಂಚೆ ಕೇಜ್ರಿವಾಲ್ ಅವರು ಸಿಬಲ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡುವಂತೆ ಪವಾರ್‌ಗೆ ಸಲಹೆ ಮಾಡಿದ್ದರು. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೂ ಈ ಬಗ್ಗೆ ತಿಳಿಸಿದ್ದರು ಎಂದು ತಿಳಿದುಬಂದಿದೆ.

ಸುದ್ದಿ 2 ನಿಮಿಷ


ಕೇಂದ್ರದ ನೀತಿ ವಿರುದ್ಧ ಹೋರಾಟ: ಸಹಕಾರ ಕೋರಿದ ಕೆಸಿಆರ್

ಹೈದರಾಬಾದ್: ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧದ ತಮ್ಮ ಹೋರಾಟದಲ್ಲಿ ಭಾಗಿಯಾಗುವಂತೆ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆ.ಸಿ.ಆರ್.) ಅವರು ಬಿಜೆಪಿಯೇತರ ಪಕ್ಷಗಳ ನಾಯಕರಲ್ಲಿ ಕೋರಿದ್ದಾರೆ ಎಂದು ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಮೂಲಗಳು ತಿಳಿಸಿವೆ.

ದೇಶದಲ್ಲಿ ಅಪಾಯದಲ್ಲಿರುವ ಒಕ್ಕೂಟ ವ್ಯವಸ್ಥೆ, ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳ ರಕ್ಷಣೆಗಾಗಿ ರಾವ್ ಅವರು ಪ್ರಯತ್ನಿಸುತ್ತಿದ್ದಾರೆ ಎಂದೂ ಹೇಳಿವೆ.

ಎನ್‌ಡಿಎ ಸರ್ಕಾರವು ದೇಶವನ್ನು ಆರ್ಥಿಕ ಬಿಕ್ಕಟ್ಟಿನತ್ತ ಕೊಂಡೊಯ್ಯುತ್ತಿದೆ. ಇಂತಹ ಹಲವು ವಿಷಯಗಳನ್ನು ಮುಂದಿಟ್ಟುಕೊಂಡು ದೇಶವ್ಯಾಪಿ ಪ್ರಚಾರಾಂದೋಲನ ಹಮ್ಮಿಕೊಳ್ಳಲು ರಾವ್ ಅವರು ಸಜ್ಜಾಗಿದ್ದಾರೆ ಎಂದಿವೆ.

ಈ ಕುರಿತು ರಾವ್ ಅವರು ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸೇರಿದಂತೆ ಹಲವರೊಂದಿಗೆ ಚರ್ಚಿಸಿದ್ದಾರೆ ಎಂದೂ ತಿಳಿಸಿವೆ.



ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಪ್ರಮುಖ ವಿರೋಧ ಪಕ್ಷಗಳ ನಾಯಕರಿಂದ ರಾವ್ ಅವರಿಗೆ ಸಕಾರಾತ್ಮಕ ಪ್ರತಿಕ್ರಿಯೆ ಲಭಿಸಿದೆ ಎಂದು ಹೇಳಿವೆ.

ಸಹೋದ್ಯೋಗಿಗಳ ಗುಂಡೇಟು: ಇಬ್ಬರು ಸೈನಿಕರ ಸಾವು

ಶ್ರೀನಗರ: ಇಬ್ಬರು ಯೋಧರು, ತಮ್ಮ ಪಡೆಯ ಸೈನಿಕರು ಸಿಡಿಸಿದ ಗುಂಡೇಟುಗಳಿಂದ ಹತರಾಗಿದ್ದು, ಮತ್ತಿಬ್ಬರು ಯೋಧರು ಗಾಯಗೊಂಡ ಘಟನೆ ಶುಕ್ರವಾರ ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ನಡೆದಿದೆ.

ಸುರಾನ್‌ಕೋಟೆ ಗಡಿಯಲ್ಲಿನ ಸೇನಾ ಶಿಬಿರದಲ್ಲಿ ಈ ಘಟನೆ ನಡೆದಿದೆ. ಗುಂಡಿನ ಚಕಮಕಿಯ ಹಿಂದಿನ ಕಾರಣ ಗೊತ್ತಾಗಿಲ್ಲ. ಗಾಯಾಳು ಯೋಧರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹಿರಿಯ ಸೇನಾ ಅಧಿಕಾರಿಯೊಬ್ಬರು 'ಮೃತರು ಮತ್ತು ಗಾಯಾಳು ಯೋಧರು ಪ್ರಾದೇಶಿಕ ಸೇನೆಯವರು. ರಸ್ತೆ ಸಂಚಾರ ಮುಕ್ತಗೊಳಿಸುವ ಕಾರ್ಯಕ್ಕೆ ನಿಯೋಜಿಸಿದ್ದಾಗ ಈ ಘಟನೆ ನಡೆದಿದೆ' ಎಂದು ತಿಳಿಸಿದ್ದಾರೆ.

ಸಂಘರ್ಷಪೀಡಿತ ವಲಯಗಳಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾದ ಸಶಸ್ತ್ರ ಪಡೆಗಳ ಸಿಬ್ಬಂದಿಯಲ್ಲಿ ಆತ್ಮಹತ್ಯೆ, ಶಸ್ತ್ರತ್ಯಾಗ ಹಾಗೂ ಸ್ವಂತ ಪಡೆಯ ಸೈನಿಕರ ಮೇಲೆ ಗುಂಡಿನ ದಾಳಿ ನಡೆಸುವ ಮನೋಭಾವಕ್ಕೆ ಹಲವು ಕಾರಣಗಳಿರುತ್ತವೆ. ಇವುಗಳಲ್ಲಿ ಒತ್ತಡ, ಮನೆಗೆ ತೆರಳಲು ರಜೆ ಸಿಗದಿರುವುದು, ಮೇಲಧಿಕಾರಿಗಳೊಂದಿಗಿನ ಸಂವಹನ ಅಂತರವೂ ಕಾರಣ ಎನ್ನುವುದು ತಜ್ಞರ ಅಭಿಮತ.

ಬಾಲಕಿ ಅಪಹರಿಸಿ ಸಾಮೂಹಿಕ ಅತ್ಯಾಚಾರ

ನವದೆಹಲಿ (ಪಿಟಿಐ): ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅಪಹರಿಸಿ, ಕಾರಿನಲ್ಲಿ ಸಾಮೂಹಿಕ ಅತ್ಯಾಚಾರ ಎಸಗಿದ ಘಟನೆ ಈಚೆಗೆ ನವದೆಹಲಿಯಲ್ಲಿ ನಡೆದಿದ್ದು, ಈ ಸಂಬಂಧ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

'ದಕ್ಷಿಣ ದೆಹಲಿಯ ಮಹಿಪಲ್‌ಪುರ ಪ್ರದೇಶದಲ್ಲಿ ಬಾಲಕಿಗೆ ಪರಿಚಯ ಇರುವವರೇ ಅತ್ಯಾಚಾರ ಎಸಗಿದ್ದಾರೆ ಎಂದು ಡಿಸಿಪಿ ಮನೋಜ್ ಸಿ. ಮಾಹಿತಿ ನೀಡಿದರು.

ಆಗಿದ್ದೇನು?: ಹತ್ತನೇ ತರಗತಿ ಓದುತ್ತಿರುವ ಬಾಲಕಿಯನ್ನು ಜುಲೈ 6ರಂದು, ಆಕೆಯ ಪರಿಚಯದ ಇಬ್ಬರು ವಸಂತ್ ವಿಹಾರ್ ಮಾರುಕಟ್ಟೆ ಪ್ರದೇಶದಿಂದ ರಾತ್ರಿ ಸುಮಾರು 8.30ರ ವೇಳೆಗೆ ಅಪಹರಿಸಿದರು. ಕಾರಿನಲ್ಲಿ ಸುತ್ತಾಡಿಸುವುದಾಗಿ ಆಸೆ ತೋರಿಸಿದರು. ಕಾರಿನಲ್ಲಿ ಮತ್ತೊಬ್ಬ ವ್ಯಕ್ತಿಯೂ ಇದ್ದ ಎಂದು ವಿಚಾರಣೆಯ ವೇಳೆ ಬಾಲಕಿಯು ಮಹಿಳಾ ಕೌನ್ಸಿಲರ್ ಬಳಿ ಘಟನೆಯ ಕುರಿತು ವಿವರಿಸಿದ್ದಾರೆ.

'ನಾಲ್ವರು ಮಹಿಪಲ್‌ಪುರಕ್ಕೆ ಹೋಗಿ ಮದ್ಯ ಸೇವಿಸಿದರು. ಅಲ್ಲಿಂದ ನಿರ್ಜನ ಪ್ರದೇಶಕ್ಕೆ ಕಾರಿನಲ್ಲಿ ಬಾಲಕಿಯನ್ನು ಕರೆದುಕೊಂಡ ಹೋದ ಆರೋಪಿಗಳು ಕಾರಿನಲ್ಲೇ ಅತ್ಯಾಚಾರ ನಡೆಸಿದ್ದಾರೆ' ಎಂದು ವಿವರಿಸಿದರು.

ಇಬ್ಬರು ಆಕೆಯ ಮೇಲೆ ಅತ್ಯಾಚಾರ ನಡೆಸುತ್ತಿದ್ದಾಗ ಬಾಲಕಿಯ ಸ್ನೇಹಿತ ಆಕೆಗೆ ಮುತ್ತು ನೀಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. 'ನನ್ನ ಸ್ನೇಹಿತ ನನ್ನನ್ನು ರಕ್ಷಿಸಲು ಪ್ರಯತ್ನಿಸಿದ. ಆತನು ತಪ್ಪು ಮಾಡಿಲ್ಲ' ಎಂದು ಬಾಲಕಿ ಹೇಳಿರುವುದಾಗಿ ಪೊಲೀಸರು ತಿಳಿಸಿದರು. 'ಆರೋಪಿಗಳ ಮೇಲೆ ಪೋಕ್ಸೊ ಅಡಿ ಪ್ರಕರಣ ದಾಖಲಾಗಿದ್ದು ವಿಚಾರಣೆ ನಡೆಯುತ್ತಿದೆ' ಎಂದು ಅವರು ಹೇಳಿದರು.

ಸಿಯುಇಟಿ: ಪರೀಕ್ಷೆ ಬರೆಯಲು ಮತ್ತೆ ಅವಕಾಶ


ನವದೆಹಲಿ (ಪಿಟಿಐ): ಪರೀಕ್ಷಾ ಕೇಂದ್ರದ ಬದಲಾವಣೆ ಕಾರಣದಿಂದ ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ–ಯುಜಿ) ಮೊದಲ ದಿನ ಗೈರಾದ ಅಭ್ಯರ್ಥಿಗಳಿಗೆ ಆಗಸ್ಟ್‌ನಲ್ಲಿ ನಡೆಯಲಿರುವ ಎರಡನೇ ಹಂತದ ಪರೀಕ್ಷೆಯಲ್ಲಿ ಮತ್ತೊಮ್ಮೆ ಅವಕಾಶ ನೀಡಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರದ (ಎನ್‌ಟಿಎ) ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ನವ ಜಲಪೈಗುರಿ ಮತ್ತು ಪಂಜಾಬಿನ ಪಠಾಣಕೋಟ್‌ನ ಎರಡು ಪರೀಕ್ಷಾ ಕೇಂದ್ರಗಳಲ್ಲಿ ತಾಂತ್ರಿಕ ಕಾರಣದಿಂದ ಪರೀಕ್ಷೆ ರದ್ದಾಗಿದೆ. 'ಇಲ್ಲಿನ ಅಭ್ಯರ್ಥಿಗಳು ಮತ್ತು ಪರೀಕ್ಷಾ ಕೇಂದ್ರಗಳ ಬದಲಾವಣೆ ಕಾರಣದಿಂದ ಪರೀಕ್ಷೆ ಬರೆಯಲು ಸಾಧ್ಯವಾಗದ ಇತರೆ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡಲಾಗುತ್ತದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಆರೋಪದಲ್ಲಿ ಹುರುಳಿಲ್ಲ: ಅನ್ಸಾರಿ

ಪಾಕ್ ಪತ್ರಕರ್ತನ ನಂಟು: ಸಮ್ಮೇಳನದ ಚಿತ್ರ ಬಿಡುಗಡೆ ಮಾಡಿದ ಬಿಜೆಪಿ



ನವದೆಹಲಿ (ಪಿಟಿಐ): ಬಿಜೆಪಿಯಿಂದ ಹೊಸದಾಗಿ ವಾಗ್ದಾಳಿ ಆರಂಭವಾದ ಬೆನ್ನಲ್ಲೇ ಮಾಜಿ ಉಪರಾಷ್ಟ್ರಪತಿ ಹಮೀದ್ ಅನ್ಸಾರಿ ಅವರು, 'ಪಾಕಿಸ್ತಾನದ ಪತ್ರಕರ್ತ ನುಸ್ರತ್ ಮಿರ್ಜಾ ಅವರನ್ನು ಯಾವುದೇ ಸಮಾವೇಶಕ್ಕೆ ಆಹ್ವಾನಿಸಿಲ್ಲ. ಆತ ತನಗೆ ಗೊತ್ತಿಲ್ಲವೆಂದು ನೀಡಿರುವ ಹೇಳಿಕೆಗೆ ಬದ್ಧವಾಗಿದ್ದೇನೆ' ಎಂದು ಶುಕ್ರವಾರ ಸ್ಪಷ್ಟಪಡಿಸಿದ್ದಾರೆ.

'ಯುಪಿಎ ಸರ್ಕಾರದ ಅವಧಿಯಲ್ಲಿ ಭಾರತಕ್ಕೆ ಐದು ಬಾರಿ ಭೇಟಿ ನೀಡಿದ್ದು, ಅಲ್ಲಿನ ಸೂಕ್ಷ್ಮ ಮಾಹಿತಿಗಳನ್ನು ಸಂಗ್ರಹಿಸಿ, ಪಾಕ್‌ನ ಬೇಹುಗಾರಿಕೆ ಸಂಸ್ಥೆ ಐಎಸ್‌ಐಗೆ ರವಾನಿಸಿದ್ದೆ. ಹಮಿದ್ ಅನ್ಸಾರಿ ಅವರ ಆಹ್ವಾನದ ಮೇರೆಗೆ ಭಾರತಕ್ಕೆ ಹೋಗಿದ್ದೆ, ಅನ್ಸಾರಿ ಅವರನ್ನೂ ಭೇಟಿಯಾಗಿದ್ದೆ' ಎನ್ನುವ ಅರ್ಥದಲ್ಲಿ ಮಿರ್ಜಾ ಇತ್ತೀಚೆಗೆ ಪಾಕ್ ಟಿ.ವಿ ಸಂದರ್ಶನದಲ್ಲಿ ಹೇಳಿಕೊಂಡಿದ್ದರು. ಈ ಆರೋಪಗಳನ್ನು ಅನ್ಸಾರಿ ಅವರು ಅಲ್ಲಗಳೆದಿದ್ದರು.

'2009ರಲ್ಲಿನ ಭಯೋತ್ಪಾದನೆ ಕುರಿತ ವಿಚಾರಗೋಷ್ಠಿ ಅಥವಾ 2010ರ ಸಮಾವೇಶ ಸೇರಿ ಯಾವುದೇ ಸಮಾವೇಶಗಳಿಗೆ ಪಾಕಿಸ್ತಾನದ ಪತ್ರಕರ್ತ ನುಸ್ರತ್ ಮಿರ್ಜಾ ಅವರನ್ನು ಆಹ್ವಾನಿಸಿಲ್ಲ. ಆ ವ್ಯಕ್ತಿಯ ಬಗ್ಗೆ ಪರಿಚಯವಿಲ್ಲವೆಂದು ನೀಡಿರುವ ಹೇಳಿಕೆಗೆ ಮಾಜಿ ಉಪರಾಷ್ಟ್ರಪತಿ ಬದ್ಧರಾಗಿದ್ದಾರೆ' ಎಂದು ಅನ್ಸಾರಿ ಅವರ ಕಚೇರಿ ಹೇಳಿಕೆ ಬಿಡುಗಡೆ ಮಾಡಿದೆ.

ಭಾರತದಲ್ಲಿ 2009ರಲ್ಲಿ ಭಯೋತ್ಪಾದನೆ ಕುರಿತು ನಡೆದ ಸಮ್ಮೇಳನದಲ್ಲಿ ಮಾಜಿ ಉಪರಾಷ್ಟ್ರಪತಿ ಹಮಿದ್ ಅನ್ಸಾರಿ ಅವರ ಜತೆ ನುಸ್ರತ್ ಮಿರ್ಜಾ ಅವರು ವೇದಿಕೆ ಹಂಚಿಕೊಂಡಿರುವ ಹಳೆಯ ಚಿತ್ರ ಮುಂದಿಟ್ಟುಕೊಂಡು ಬಿಜೆಪಿ ಶುಕ್ರವಾರ ಕಾಂಗ್ರೆಸ್ ವಿರುದ್ಧ ಹೊಸದಾಗಿ ದಾಳಿ ಆರಂಭಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಛಾಯಾಚಿತ್ರ ಪ್ರದರ್ಶಿಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ 'ಮಿರ್ಜಾ ಜತೆ ಅನ್ಸಾರಿ ಅವರು ವೇದಿಕೆ ಹಂಚಿಕೊಳ್ಳಬಾರದಿತ್ತು. ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವಾಗ, ವಿದೇಶಿ ಅತಿಥಿಗಳನ್ನು ಆಹ್ವಾನಿಸುವಾಗ ಗುಪ್ತಚರ ವಿಭಾಗದ ಅನುಮತಿ ಅಗತ್ಯವಿರುತ್ತದೆಯಲ್ಲವೇ?' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

'ಕಾಟ್ಸಾ'ದಿಂದ ಭಾರತಕ್ಕೆ ವಿನಾಯಿತಿ

ವಾಷಿಂಗ್ಟನ್ (ಪಿಟಿಐ): ರಷ್ಯಾದಿಂದ ಎಸ್‌–400 ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಖರೀದಿಸಿರುವ ಭಾರತಕ್ಕೆ, ಕಠಿಣ ಕಾಯ್ದೆ ಸಿಎಎಎಸ್‌ಎ ಅಡಿ ನಿರ್ಬಂಧ ಹೇರುವುದರಿಂದ ವಿನಾಯಿತಿ ನೀಡುವ ತಿದ್ದುಪಡಿ ಮಸೂದೆಗೆ ಅಮೆರಿಕ ಸಂಸತ್‌ನ ಕೆಳಮನೆ (ಹೌಸ್ ಆಫ್ ರೆಪ್ರಸೆಂಟೇಟಿವ್ಸ್) ಅನುಮೋದನೆ ನೀಡಿದೆ.

ಭಾರತೀಯ ಅಮೆರಿಕನ್ ಸಂಸದ ರೋ ಖನ್ನಾ ಅವರು ಈ ತಿದ್ದುಪಡಿ ಮಸೂದೆಯನ್ನು ಮಂಡಿಸಿದ್ದು, ಧ್ವನಿಮತದ ಮೂಲಕ ಅಂಗೀಕರಿಸಲಾಯಿತು. ಚೀನಾದಂತಹ ಆಕ್ರಮಣಶೀಲ ರಾಷ್ಟ್ರವನ್ನು ಎದುರಿಸಲು ಭಾರತಕ್ಕೆ ಎಸ್‌–400 ಕ್ಷಿಪಣಿ ವ್ಯವಸ್ಥೆ ನೆರವಾಗಲಿದೆ. ಹೀಗಾಗಿ ಸಿಎಟಿಎಸ್‌ಎ-ಯಿಂದ (ಕಾಟ್ಸಾ) ಭಾರತಕ್ಕೆ ವಿನಾಯಿತಿ ನೀಡಲು ಜೋ ಬೈಡನ್ ಆಡಳಿತಕ್ಕೆ ಈ ತಿದ್ದುಪಡಿ ಅನುವು ಮಾಡಿಕೊಡುತ್ತದೆ.

ಹಲ್ಲೆ ಪ್ರಕರಣ ಸಬ್‌ಇನ್ಸ್‌ಪೆಕ್ಟರ್ ವಿರುದ್ಧ ದೂರು

ಬರೇಲಿ (ಉತ್ತರ ಪ್ರದೇಶ) (ಪಿಟಿಐ): ಆರ್‌ಎಸ್‌ಎಸ್ ಕಾರ್ಯಕರ್ತರೊಬ್ಬರನ್ನು ಪೊಲೀಸ್ ಹೊರಠಾಣೆಗೆ ಕರೆದೊಯ್ದು ಹೊಡೆಯಲಾಗಿದೆ ಎಂಬ ಆರೋಪದಡಿ ಹತ್ತು ಪೊಲೀಸರ ಮೇಲೆ ಪ್ರಕರಣ ದಾಖಲಾಗಿದ್ದು, ಒಬ್ಬರನ್ನು ಅಮಾನತು ಮಾಡಲಾಗಿದೆ.

ಆರ್‌ಎಸ್‌ಎಸ್ ಕಾರ್ಯಕರ್ತರೊಬ್ಬರು ವಾಹನ ಚಲಾಯಿಸುತ್ತಿದ್ದ ವೇಳೆ ಪೊಲೀಸರೊಂದಿಗೆ ಜಗಳ ಮಾಡಿದ್ದರು. ಇದೇ ಕಾರಣಕ್ಕೆ ಅವರನ್ನು ಪೊಲೀಸರು ಠಾಣೆಗೆ ಕರೆದೊಯ್ದಿದ್ದಾರೆ ಎನ್ನಲಾಗಿದೆ. ಈ ವಿಷಯ ತಿಳಿಯುತ್ತಿದ್ದಂತೆಯೇ ಆವಲಾದ ಸಂಸದ ಧರ್ಮೇಂದ್ರ ಕಶ್ಯಪ್ ಸೇರಿದಂತೆ ಆರ್‌ಎಸ್‌ಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಬದಾಯಿಯಲ್ಲಿ ರಸ್ತೆ ತಡೆ ನಡೆಸಿದರು.

ರಸ್ತೆ ತಡೆಯು ತಡ ರಾತ್ರಿವರೆಗೂ ನಡೆಯಿತು. ಆರ್‌ಎಸ್‌ಎಸ್ ಕಾರ್ಯಕರ್ತನನ್ನು ಅಪಹರಿಸಿ, ಒತ್ತೆ ಇರಿಸಿಕೊಂಡು ಹಿಂಸೆ ನೀಡಲಾಗಿದೆ ಎಂದು ಇಬ್ಬರು ಸಬ್‌ಇನ್ಸ್‌ಪೆಕ್ಟರ್ ಮತ್ತು ಎಂಟು ಕಾನ್‌ಸ್ಟೆಬಲ್‌ಗಳ ವಿರುದ್ಧ ದೂರು ನೀಡಲಾಗಿದೆ.

ಜುಬೈರ್‌ಗೆ ಜಾಮೀನು

ನವದೆಹಲಿ (ಪಿಟಿಐ): ಹಿಂದೂ ದೇವರ ಕುರಿತು ಆಕ್ಷೇಪಾರ್ಹ ಟ್ವೀಟ್ ಮಾಡಿರುವ ಆರೋಪದಲ್ಲಿ ಬಂಧನದಲ್ಲಿರುವ 'ಆಲ್ಟ್ ನ್ಯೂಸ್' ಸಹಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರಿಗೆ ಶುಕ್ರವಾರ ದೆಹಲಿ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಆರೋಪಿಗೆ ಹೆಚ್ಚುವರಿ ಕಸ್ಟಡಿಯ ಅಗತ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ. ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ದೇವೇಂದ್ರ ಕುಮಾರ್ ಜಂಗಾಲ ಅವರು ಜುಬೈರ್ ಅವರಿಗೆ ₹50 ಸಾವಿರ ವೈಯಕ್ತಿಕ ಬಾಂಡ್ ಆಧಾರದಲ್ಲಿ ಜಾಮೀನು ಮಂಜೂರು ಮಾಡಿದ್ದಾರೆ.

ಮಂಕಿಪಾಕ್ಸ್: ಕಟ್ಟೆಚ್ಚರ

ತಿರುವನಂತಪುರ (ಪಿಟಿಐ): ದೇಶದ ಮೊದಲ ಮಂಕಿಪಾಕ್ಸ್ ವೈರಸ್ ಪ್ರಕರಣ ದಕ್ಷಿಣ ಭಾರತದಲ್ಲಿ ಪತ್ತೆಯಾಗುತ್ತಿದ್ದಂತೆಯೇ ವೈರಸ್ ಹರಡದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಲು ಕೇರಳದ ಐದು ಜಿಲ್ಲೆಗಳಲ್ಲಿ ರಾಜ್ಯ ಸರ್ಕಾರ ವಿಶೇಷ ಕಟ್ಟೆಚ್ಚರ ವಹಿಸಿದೆ.

ಶಾರ್ಜಾದಿಂದ ತಿರುವನಂತಪುರಕ್ಕೆ ಜುಲೈ 12ರಂದು ಇಂಡಿಗೊ ವಿಮಾನದಲ್ಲಿ ಬಂದ ಕೊಲ್ಲಂನ ವ್ಯಕ್ತಿಯಲ್ಲಿ ಮಂಕಿಪಾಕ್ಸ್ ಸೋಂಕು ಇರುವುದು ರಾಷ್ಟ್ರೀಯ ವೈರಾಣು ಸಂಸ್ಥೆ ದೃಢಪಡಿಸಿದ ಮರುವ ದಿನವೇ ಶುಕ್ರವಾರ ಆರೋಗ್ಯ ಸಚಿವೆ ವೀಣಾ ಜಾರ್ಜ್ ಉನ್ನತ ಸಭೆ ನಡೆಸಿದರು.

ಕೊಲ್ಲಂ, ಪತ್ತನಂತಿಟ್ಟ, ಅಲಪ್ಪುಳ ಮತ್ತು ಕೊಟ್ಟಾಯಂ ಜಿಲ್ಲೆಗಳ ಪ್ರಯಾಣಿಕರು ಸೋಂಕಿತ ವ್ಯಕ್ತಿಯ ಜತೆಗೆ ವಿಮಾನದಲ್ಲಿ ಪ್ರಯಾಣಿಸಿರುವುದರಿಂದ ಈ ಐದೂ ಜಿಲ್ಲೆಗಳಲ್ಲಿ ವೈರಸ್ ಹರಡದಂತೆ ಮುನ್ನೆಚ್ಚರಿಕೆಯಾಗಿ ವಿಶೇಷ ಕಟ್ಟೆಚ್ಚರ ವಹಿಸಲಾಗಿದೆ ಎಂದು ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

ವಿಮಾನದಲ್ಲಿ ಬಂದಿರುವ 164 ಪ್ರಯಾಣಿಕರು ಮತ್ತು ಆರು ಮಂದಿ ವಿಮಾನ ಕ್ಯಾಬಿನ್ ಸಿಬ್ಬಂದಿಯನ್ನು ಈ ಐದು ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಇರಿಸಿದ್ದು, ನಿಗಾವಹಿಸಲಾಗಿದೆ.

ಶ್ರೀಲಂಕಾ: ಹಂಗಾಮಿ ಅಧ್ಯಕ್ಷರಾಗಿ ರಾನಿಲ್ ಪ್ರಮಾಣ

20ರಂದು ನೂತನ ಅಧ್ಯಕ್ಷರ ಆಯ್ಕೆ


ರಾನಿಲ್ ವಿಕ್ರಮಸಿಂಘೆ

ಕೊಲಂಬೊ: ಶ್ರೀಲಂಕಾದ ಹಂಗಾಮಿ ಅಧ್ಯಕ್ಷರಾಗಿ ರಾನಿಲ್ ವಿಕ್ರಮಸಿಂಘೆ ಶುಕ್ರವಾರ ಪ್ರಮಾಣ ವಚನ ಸ್ವೀಕರಿಸಿದರು. ನೂತನ ಅಧ್ಯಕ್ಷರ ಆಯ್ಕೆ ಜುಲೈ 20ರಂದು ನಡೆಯಲಿದೆ.

ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಶನಿವಾರ ಸಂಸತ್ ಸಭೆ ಕರೆಯಲಾಗಿದೆ. ಜುಲೈ 19ರಂದು ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಡೆಯಲಿದೆ ಎಂದು ಸ್ಪೀಕರ್ ಮಹಿಂದ ಯಾಪಾ ಅಬೆವರ್ಧನ ಹೇಳಿದ್ದಾರೆ.

'1978ರ ನಂತರ ಮೊದಲ ಬಾರಿಗೆ ಅಧ್ಯಕ್ಷರನ್ನು 225 ಸಂಸದರು ಜುಲೈ 20ರಂದು ರಹಸ್ಯ ಮತದಾನದ ಮೂಲಕ ಆಯ್ಕೆ ಮಾಡಲಿದ್ದಾರೆ' ಎಂದು ಅವರು ತಿಳಿಸಿದ್ದಾರೆ. ಈಗ ಆಯ್ಕೆಯಾಗಲಿರುವ ನೂತನ ಅಧ್ಯಕ್ಷರು ಗೊಟಬಯ ರಾಜಪಕ್ಸ ಅವರ ಉಳಿದ ಅಧಿಕಾರವಧಿಯವರೆಗೆ (ನವೆಂಬರ್ 2024) ಸೇವೆ ಮುಂದುವರಿಸಲಿದ್ದಾರೆ.

ಶ್ರೀಲಂಕಾದ ಅನುಭವಿ ರಾಜಕಾರಣಿಗಳಾದ ರಾನಿಲ್ ವಿಕ್ರಮಸಿಂಘೆ, ಸಜಿತ್ ಪ್ರೇಮದಾಸ, ಡಲ್ಲಾಸ್ ಅಲಹಪ್ಪೆರುಮಾ, ಫೀಲ್ಡ್ ಮಾರ್ಷಲ್ ಶರತ್ ಫೋನ್ಸೆಕಾ ಅಧ್ಯಕ್ಷ ಸ್ಥಾನದ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆ.

ರಾನಿಲ್‌ಗೆ ಬೆಂಬಲ: ಅಧ್ಯಕ್ಷರ ಚುನಾವಣೆಯಲ್ಲಿ ಹಂಗಾಮಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರಿಗೇ ಬೆಂಬಲ ನೀಡಲು ಆಡಳಿತಾರೂಢ ಶ್ರೀಲಂಕಾ ಪೊದುಜನ ಪೆರಮುನ (ಎಸ್‌ಎಲ್‌ಪಿಪಿ) ಪಕ್ಷ ಶುಕ್ರವಾರ ನಿರ್ಧರಿಸಿದೆ. 'ಹಂಗಾಮಿ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರಿಗೆ ನಮ್ಮ ಬೆಂಬಲ' ಎಂದು ಎಸ್‌ಎಲ್‌ಪಿಪಿ ಪ್ರಧಾನ ಕಾರ್ಯದರ್ಶಿ ಸಾಗರ ಕರಿಯವಸಂ ತಿಳಿಸಿದ್ದಾರೆ.

ಅಧಿಕಾರ ಸ್ವೀಕರಿಸಿದ ನಂತರ ಸಂಸತ್‌ಅನ್ನು ಉದ್ದೇಶಿಸಿ ಮಾತನಾಡಿದ ರಾನಿಲ್ ಅವರು, 'ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಮರುಸ್ಥಾಪಿಸುವುದು ನನ್ನ ಆದ್ಯತೆ' ಎಂದರು.

'ನಾನು ಪ್ರತಿಭಟಿಸುವವರ ಪರ. ಪ್ರತಿಭಟನಕಾರರು ಹಾಗೂ ಗಲಭೆಕೋರರ ನಡುವೆ ವ್ಯತ್ಯಾಸವಿದೆ. ಹೀಗಾಗಿ ಹಿಂಸಾಚಾರ ಹತ್ತಿಕ್ಕುವ ಸಲುವಾಗಿ ಸಶಸ್ತ್ರ ಪಡೆಗಳಿಗೆ ಪೂರ್ಣ ಅಧಿಕಾರ ನೀಡಲಾಗಿದೆ' ಎಂದರು.

'ಹೆಚ್ಚಿನ ಅಧಿಕಾರ ನೀಡುವ, ಸಂವಿಧಾನದ 19ನೇ ತಿದ್ದುಪಡಿಯನ್ನು ಪರಾಮರ್ಶಿಸುವುದು ನನ್ನ ಮೊದಲ ಆದ್ಯತೆ. ಈ ಕುರಿತ ಕರಡು ಮಸೂದೆಯನ್ನು ಶೀಘ್ರವೇ ಸದನದಲ್ಲಿ ಮಂಡಿಸಲಾಗುವುದು' ಎಂದರು.


ಅಧ್ಯಕ್ಷರನ್ನು ಉದ್ದೇಶಿಸಿ ಮಾತನಾಡುವ ವೇಳೆ 'ಘನತೆವೆತ್ತ' ಎಂಬ ಪದ ಬಳಕೆಯನ್ನು ನಿಷೇಧಿಸಲು ಹಾಗೂ ಅಧ್ಯಕ್ಷೀಯ ಧ್ವಜ ಬಳಕೆಯನ್ನು ತೆಗೆದುಹಾಕಲು ನಿರ್ಧರಿಸಿದ್ದಾಗಿ ಹೇಳಿದ ಅವರು, 'ವ್ಯಕ್ತಿಗಳನ್ನು ರಕ್ಷಿಸುವ ಬದಲಾಗಿ ದೇಶವನ್ನು ರಕ್ಷಿಸಬೇಕಿದೆ' ಎಂದರು. ರಾನಿಲ್ ಅವರಿಗೆ ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಜಯಂತ ಜಯಸೂರ್ಯ ಪ್ರತಿಜ್ಞಾ ವಿಧಿ ಬೋಧಿಸಿದರು. ಗೊಟಬಯ ಅವರು ಇ–ಮೇಲ್ ಮೂಲಕ ಕಳುಹಿಸಿರುವ ರಾಜೀನಾಮೆಯನ್ನು ಅಂಗೀಕರಿಸಿದ್ದಾಗಿ ಸ್ಪೀಕರ್ ಶುಕ್ರವಾರ ಹೇಳಿದ್ದಾರೆ.

ಇದೇ 28ರ ವರೆಗೆ ದೇಶ ತೊರೆಯದಂತೆ ಮಹಿಂದಾ ರಾಜಪಕ್ಸಗೆ ಸೂಚನೆ

ಶ್ರೀಲಂಕಾದ ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ ಮತ್ತು ಮಾಜಿ ಹಣಕಾಸು ಸಚಿವ ಬಸಿಲ್ ರಾಜಪಕ್ಸೆ ಜುಲೈ 28 ರವರೆಗೆ ಅನುಮತಿಯಿಲ್ಲದೆ ದೇಶವನ್ನು ತೊರೆಯದಂತೆ ಶ್ರೀಲಂಕಾದ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ಬಂಧಿಸಿದೆ ಎಂದು ಅಲ್ಲಿನ ಭ್ರಷ್ಟಾಚಾರ ವಿರೋಧಿ ಗುಂಪಾದ ಟ್ರಾನ್ಸ್‌ಫರೆನ್ಸಿ ಇಂಟರ್‌ನ್ಯಾಷನಲ್ ಶ್ರೀಲಂಕಾ ಹೇಳಿದೆ.

ಇಬ್ಬರು ಮಾಜಿ ಕೇಂದ್ರ ಬ್ಯಾಂಕ್ ಗವರ್ನರ್‌ಗಳು ಸೇರಿದಂತೆ ಇತರ ಮೂವರು ಮಾಜಿ ಅಧಿಕಾರಿಗಳು ಜುಲೈ 28 ರವರೆಗೆ ನ್ಯಾಯಾಲಯದ ಅನುಮತಿಯಿಲ್ಲದೆ ದೇಶದ ಹೊರಗೆ ಪ್ರಯಾಣಿಸುವಂತಿಲ್ಲ ಎಂದು ಟ್ರಾನ್ಸ್‌ಫರೆನ್ಸಿ ಇಂಟರ್ ನ್ಯಾಷನಲ್ ಶ್ರೀಲಂಕಾ ಟ್ವೀಟ್ ಮೂಲಕ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,938
ಇಂದಿನ ಅಂತ್ಯ	16,049
▲	111
ದಿನದ ಗರಿಷ್ಠ	16,066

ವಿನಿಮಯ ದರ

$ ಡಾಲರ್	79.82
£ ಪೌಂಡ್	94.73
€ ಯುರೊ	80.06
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹440

ಪ್ಯಾಕ್ ಮಾಡಿರುವ ಆಹಾರ ಧಾನ್ಯಗಳ ಮೇಲೆ ಜಿಎಸ್‌ಟಿಗೆ ವಿರೋಧ

ಎಪಿಎಂಸಿ ಬಂದ್: ಮಿಶ್ರ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾಕ್ ಮಾಡಿರುವ, ಲೇಬಲ್ ಇರುವ ಆಹಾರ ಧಾನ್ಯಗಳ ಮೇಲೆ ಜಿಎಸ್‌ಟಿ ವಿಧಿಸುವ ಶಿಫಾರಸು ಒಪ್ಪಿಕೊಳ್ಳಬಾರದು ಎಂದು ಆಗ್ರಹಿಸಿ ಎಪಿಎಂಸಿ ವರ್ತಕರ ಸಂಘ ಕರೆ ನೀಡಿದ್ದ ಎರಡು ದಿನಗಳ ಎಪಿಎಂಸಿ ಬಂದ್‌ಗೆ ರಾಜ್ಯದಲ್ಲಿ ಶುಕ್ರವಾರ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮಂಗಳೂರು, ಉಡುಪಿ, ವಿಜಯಪುರ, ಉತ್ತರ ಕನ್ನಡ, ಹೊಸಪೇಟೆ, ಬಾಗಲಕೋಟೆ, ಹಾವೇರಿ, ಚಾಮರಾಜನಗರ ಹಾಗೂ ಹಾಸನದಲ್ಲಿ ಎಪಿಎಂಸಿಯಲ್ಲಿ ವಹಿವಾಟು ಸ್ಥಗಿತಗೊಂಡಿರಲಿಲ್ಲ. ಮಂಡ್ಯದಲ್ಲಿ ಬಂದ್ ಕರೆಗೆ ಸ್ಪಂದನ ಸಿಗಲಿಲ್ಲ. ವರ್ತಕರ ಸಂಘದವರು ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ಹುಬ್ಬಳ್ಳಿಯಲ್ಲಿ ಸಗಟು ವ್ಯಾಪಾರದ ಅಂಗಡಿಗಳು ತೆರೆದಿದ್ದವು. ಈರುಳ್ಳಿ ವ್ಯಾಪಾರ ಹಾಗೂ ಹರಾಜು ಪ್ರಕ್ರಿಯೆ ಸಹ ಮುಕ್ತವಾಗಿ ನಡೆಯಿತು. ಆದರೆ, ಅಕ್ಕಿ, ಬೇಳೆ ಕಾಳುಗಳ ವ್ಯಾಪಾರ ಮಾತ್ರ ಸಂಪೂರ್ಣ ಸ್ಥಗಿತವಾಗಿತ್ತು.

ಬೆಂಗಳೂರು ಮತ್ತು ಬೆಳಗಾವಿ ಎಪಿಎಂಸಿ ಸಂಪೂರ್ಣ ಬಂದ್ ಆಗಿತ್ತು. ಶನಿವಾರ ಕೂಡ ಎಪಿಎಂಸಿ ಬಂದ್ ಮುಂದುವರಿಯಲಿದೆ. ಶಿವಮೊಗ್ಗದಲ್ಲಿ ವರ್ತಕರು ಶನಿವಾರ ಪ್ರತಿಭಟನೆ ನಡೆಸಲು ಸಜ್ಜಾಗಿದ್ದಾರೆ. ತುಮಕೂರಿನಲ್ಲಿ ವರ್ತಕರು ಮತ್ತು ರೈತರು ಪ್ರತಿಭಟನಾ ರ‍್ಯಾಲಿ ನಡೆಸಿದರು.

ಮೈಸೂರಿನಲ್ಲಿ ಮೈಸೂರು ಧಾನ್ಯ ವರ್ತಕರ ಸಂಘದಿಂದ ಕರೆ ನೀಡಿದ್ದ ಬಂದ್ ಯಶಸ್ವಿಯಾಯಿತು. 'ಜನಸಾಮಾನ್ಯರಿಗೆ ಹೊರೆಯಾಗುವ ನಿರ್ಧಾರ ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಎಪಿಎಂಸಿಗಳು ಬಂದ್ ಇದ್ದವು. 'ಜಿಎಸ್‌ಟಿ ವಿಧಿಸಿರುವುದನ್ನು ಕೇಂದ್ರ ಸರ್ಕಾರ ಕೈಬಿಡಬೇಕು' ಎಂದು ಒತ್ತಾಯಿಸಿ ಎಪಿಎಂಸಿ ವರ್ತಕರು ಪ್ರತಿಭಟನೆ ನಡೆಸಿದರು. ನಂತರ ಜಿಲ್ಲಾಧಿಕಾರಿಗೆ ಮನವಿಪತ್ರ ಸಲ್ಲಿಸಿದರು.


ವರ್ತಕರ ಸಂಘ ಕರೆ ನೀಡಿದ್ದ ಬಂದ್‌ನಿಂದ ಮೈಸೂರು ಎಪಿಎಂಸಿ ಪ್ರಾಂಗಣ ಶುಕ್ರವಾರ ಬಿಕೋ ಎನ್ನುತ್ತಿತ್ತು – ಪ್ರಜಾವಾಣಿ ಚಿತ್ರ

ದಾವಣಗೆರೆಯಲ್ಲಿ ರೈಸ್‌ಮಿಲ್‌ಗಳು ಬಂದ್ ಆಗಿದ್ದವು. ಅಕ್ಕಿ ಮತ್ತು ರಾಗಿ ಸಗಟು ವ್ಯಾಪಾರಿಗಳು ಅಂಗಡಿಗಳನ್ನು ಬಂದ್ ಮಾಡಿದ್ದರು.

ಚಿತ್ರದುರ್ಗದಲ್ಲಿ ವರ್ತಕರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿದರು. ಕೋಲಾರ ಮತ್ತು ಬಂಗಾರಪೇಟೆಯ ಎಪಿಎಂಸಿಯಲ್ಲಿ ಕೆಲವು ವರ್ತಕರು ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನೆ ನಡೆಸಿದರು.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ಹೇಳಿಕೆ

ಸೂಕ್ತ ಸಮಯದಲ್ಲಿ ಕಾರ್ಮಿಕ ಸಂಹಿತೆ

ನವದೆಹಲಿ (ಪಿಟಿಐ): ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ಸಂಬಂಧಿಸಿದಂತೆ ಬಹುತೇಕ ರಾಜ್ಯಗಳು ಕರಡು ನಿಯಮ ರೂಪಿಸಿದ್ದು, ಸೂಕ್ತ ಸಮಯದಲ್ಲಿ ಹೊಸ ನಿಯಮಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದು ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ಶುಕ್ರವಾರ ತಿಳಿಸಿದ್ದಾರೆ.

ಕಾರ್ಮಿಕ ಸಂಹಿತೆಗಳ ಅನುಷ್ಠಾನ ಯಾವತ್ತಿನಿಂದ ಎಂಬ ವಿಚಾರವಾಗಿ ಊಹಾಪೋಹ ಎದ್ದಿರುವ ಸಂದರ್ಭದಲ್ಲಿ ಸಚಿವರು ಈ ಹೇಳಿಕೆ ನೀಡಿದ್ದಾರೆ.

ಕೆಲವು ರಾಜ್ಯಗಳು ಮಾತ್ರ ಕರಡು ನಿಯಮಗಳನ್ನು ಅಂತಿಮಗೊಳಿಸುವ ಹಂತದಲ್ಲಿವೆ ಎಂದೂ ಅವರು ಹೇಳಿದ್ದಾರೆ. ರಾಜಸ್ಥಾನವು ಎರಡು ಸಂಹಿತೆಗಳಿಗೆ ಸಂಬಂಧಿಸಿದಂತೆ ಕರಡು ನಿಯಮಗಳನ್ನು ರೂಪಿಸಿದ್ದು, ಇನ್ನೂ ಎರಡು ಸಂಹಿತೆಗಳ ಕರಡು ನಿಯಮಗಳನ್ನು ಪೂರ್ಣಗೊಳಿಸಬೇಕಿದೆ. ಪಶ್ಚಿಮ ಬಂಗಾಳವು ಕರಡು ನಿಯಮಗಳನ್ನು ಅಂತಿಮಗೊಳಿಸುವ ಹಂತದಲ್ಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಮೇಘಾಲಯ ಸೇರಿದಂತೆ ಈಶಾನ್ಯ ಭಾಗದ ಕೆಲವು ರಾಜ್ಯಗಳು ಕರಡು ನಿಯಮಗಳನ್ನು ಪೂರ್ಣಗೊಳಿಸಿಲ್ಲ.



2019 ಮತ್ತು 2020ರಲ್ಲಿ 29 ಕೇಂದ್ರ ಕಾರ್ಮಿಕ ಕಾನೂನುಗಳನ್ನು ಒಟ್ಟುಗೂಡಿಸಿ ಕೇಂದ್ರ ಸರ್ಕಾರವು ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರೂಪಿಸಿದೆ. ಮೊದಲನೆಯದು ವೇತನ ಸಂಹಿತೆ, ಎರಡನೆಯದು ಕೈಗಾರಿಕಾ ಸಂಬಂಧಗಳ ಸಂಹಿತೆ, ಮೂರನೆಯದು ಸಾಮಾಜಿಕ ಭದ್ರತಾ ಸಂಹಿತೆ, ನಾಲ್ಕನೆಯದು ಕೆಲಸದ ಸ್ಥಳದಲ್ಲಿ ಸುರಕ್ಷತೆ, ಆರೋಗ್ಯ ಮತ್ತು ಸ್ಥಿತಿಗತಿ ಸಂಹಿತೆ.

ಈ ನಾಲ್ಕು ಸಂಹಿತೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಈಗಾಗಲೇ ಕರಡು ನಿಯಮಗಳನ್ನು ಪ್ರಕಟಿಸಿದೆ. ರಾಜ್ಯಗಳು ಕರಡು ನಿಯಮಗಳನ್ನು ಪ್ರಕಟಿಸಿದ ಬಳಿಕ ಅವುಗಳಿಗೆ ಸಾರ್ವಜನಿಕರಿಂದ ಸಲಹೆಗಳನ್ನು ಪಡೆಯಲು 30ರಿಂದ 45 ದಿನ ಕಾಲಾವಕಾಶ ಇರಲಿದೆ.

ರೂಪಾಯಿ 17 ಪೈಸೆ ಚೇತರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಶುಕ್ರವಾರ 17 ಪೈಸೆ ಚೇತರಿಕೆ ಕಂಡಿದೆ. ಶುಕ್ರವಾರದ ಅಂತ್ಯಕ್ಕೆ ರೂಪಾಯಿ ಮೌಲ್ಯವು ₹ 79.82 ಆಗಿದೆ.

ಡಾಲರ್ ಮೌಲ್ಯವು ಎರಡು ದಶಕಗಳ ಗರಿಷ್ಠ ಮಟ್ಟದಿಂದ ತುಸು ಇಳಿಕೆಯಾಗಿದ್ದು ರೂಪಾಯಿಗೆ ನೆರವಾಯಿತು ಎಂದು ವರ್ತಕರು ತಿಳಿಸಿದ್ದಾರೆ.

ದಿನದ ವಹಿವಾಟಿನಲ್ಲಿ ರೂಪಾಯಿಯು ಕನಿಷ್ಠ 79.96ರ ಮಟ್ಟಕ್ಕೆ ಹಾಗೂ ಗರಿಷ್ಠ 79.82ರ ಮಟ್ಟಕ್ಕೆ ಬಂದಿತ್ತು.

4 ದಿನಗಳ ಬಳಿಕ ಷೇರುಪೇಟೆಯಲ್ಲಿ ಸಕಾರಾತ್ಮಕ ಓಟ


ವಾಹನ, ಎಫ್‌ಎಂಸಿಜಿ ಷೇರು ಗಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ನಾಲ್ಕು ದಿನಗಳ ನಕಾರಾತ್ಮಕ ವಹಿವಾಟಿನಿಂದ ಶುಕ್ರವಾರ ಹೊರಬಂದವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 344 ಅಂಶ ಹೆಚ್ಚಾಗಿ 53,761 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 111 ಅಂಶ ಏರಿಕೆ ಕಂಡು 16,049 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 721 ಅಂಶ ಮತ್ತು ನಿಫ್ಟಿ 171 ಅಂಶ ಇಳಿಕೆ ಕಂಡಿವೆ.

ವಹಿವಾಟು ಅಸ್ಥಿರವಾಗಿದ್ದರೂ ಎಫ್‌ಎಂಸಿಜಿ, ವಾಹನ ಮತ್ತು ಬಂಡವಾಳ ಸರಕು ವಲಯಗಳ ಷೇರುಗಳನ್ನು ಹೂಡಿಕೆದಾರರು ಹೆಚ್ಚು ಖರೀದಿಸಿದ್ದರಿಂದ ಅಂತಿಮವಾಗಿ ಅಲ್ಪ ಗಳಿಕೆ ಕಂಡುಕೊಳ್ಳಲು ಸಾಧ್ಯವಾಯಿತು.





ಯುರೋಪ್‌ನ ಮಾರುಕಟ್ಟೆಗಳ ವಹಿವಾಟು ಸಕಾರಾತ್ಮಕವಾಗಿ ಆರಂಭ ಆಗಿದ್ದು ಹಾಗೂ ದೇಶದ ಬಂಡವಾಳ ಮಾರುಕಟ್ಟೆಯಲ್ಲಿ ವಿದೇಶಿ ಹೂಡಿಕೆದಾರರು ಖರೀದಿಗೆ ಮುಂದಾಗಿದ್ದು ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು.

ಬ್ರೆಂಟ್ ಕಚ್ಚಾ ತೈಲ ದರವು ಶೇ 0.60ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 99.72 ಡಾಲರ್‌ಗಳಿಗೆ ತಲುಪಿತು.

'ಅಮೆರಿಕದಲ್ಲಿ ಹಣದುಬ್ಬರವು ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ. ಹೀಗಾಗಿ ಹೂಡಿಕೆದಾರರು ಅಮೆರಿಕದ ಫೆಡರಲ್ ರಿಸರ್ವ್‌ನ ಹಣಕಾಸು ನೀತಿಯ ಬಗ್ಗೆ ಗಮನ ಹರಿಸಿದ್ದಾರೆ. ಇದರಿಂದಾಗಿ ಷೇರುಪೇಟೆಗಳ ವಹಿವಾಟು ಅಸ್ಥಿರವಾಗಿತ್ತು. ಐ.ಟಿ. ವಲಯದ ಆರ್ಥಿಕ ಸಾಧನೆಯು ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದು, ರೂಪಾಯಿ ಮೌಲ್ಯ ಇಳಿಕೆ ಹಾಗೂ ಜಾಗತಿಕ ಆರ್ಥಿಕ ಹಿಂಜರಿತದ ಆತಂಕದಿಂದಾಗಿ ಸೂಚ್ಯಂಕಗಳು ಹೆಚ್ಚಿನ ಏರಿಕೆ ಕಾಣಲಿಲ್ಲ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರೂಪಾಯಿ ಇಳಿಕೆ: ಆಮದು ದುಬಾರಿ

ನವದೆಹಲಿ (ಪಿಟಿಐ): ಡಾಲರ್ ಎದುರು ರೂಪಾಯಿ ಮೌಲ್ಯವು ಕುಸಿಯುತ್ತ ಇರುವುದು ಕಚ್ಚಾ ತೈಲ ಹಾಗೂ ಹಲವು ಸರಕುಗಳ ಆಮದು, ವಿದೇಶಗಳಲ್ಲಿ ವ್ಯಾಸಂಗ ಮತ್ತು ವಿದೇಶ ಪ್ರವಾಸವನ್ನು ದುಬಾರಿಯಾಗಿಸಲಿದೆ. ಅಲ್ಲದೆ, ದೇಶದಲ್ಲಿ ಹಣದುಬ್ಬರ ಪ್ರಮಾಣವು ಇನ್ನಷ್ಟು ಹೆಚ್ಚಾಗುವ ಆತಂಕ ಇದೆ.

ರಫ್ತು ವಹಿವಾಟಿನಲ್ಲಿ ತೊಡಗಿರುವವರು ಹೆಚ್ಚಿನ ಆದಾಯ ಕಾಣಲಿದ್ದಾರೆ. ದೇಶವು ಕಚ್ಚಾ ತೈಲ, ಕಲ್ಲಿದ್ದಲು, ಪ್ಲಾಸ್ಟಿಕ್ ವಸ್ತುಗಳು, ರಾಸಾಯನಿಕಗಳು, ಎಲೆಕ್ಟ್ರಾನಿಕ್ ಸರಕುಗಳು, ಅಡುಗೆ ಎಣ್ಣೆ, ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತದೆ. 'ಅಡುಗೆ ಎಣ್ಣೆ ಸೇರಿದಂತೆ ಆಮದಾಗುವ ಎಲ್ಲ ವಸ್ತುಗಳ ಬೆಲೆ ದುಬಾರಿಯಾಗಲಿದೆ. ಆದರೆ, ಅಡುಗೆ ಎಣ್ಣೆಗಳ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಳಿಕೆಯಾಗುತ್ತಿರುವ ಕಾರಣ ರೂಪಾಯಿ ಮೌಲ್ಯ ಇಳಿಕೆಯ ಪರಿಣಾಮವು ಹೆಚ್ಚಿರಲಿಕ್ಕಿಲ್ಲ' ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ (ಎಸ್‌ಇಎ) ಕಾರ್ಯನಿರ್ವಾಹಕ ನಿರ್ದೇಶಕ ಬಿ.ವಿ. ಮೆಹ್ತಾ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಡಿಬಿಟಿ ವ್ಯಾಪ್ತಿಗೆ ಕಲ್ಯಾಣ ಯೋಜನೆ

ನವದೆಹಲಿ: ಕೇಂದ್ರದ ಎಲ್ಲ ಕಲ್ಯಾಣ ಯೋಜನೆಗಳನ್ನೂ ಆಧಾರ್ ಸಂಖ್ಯೆ ಆಧರಿತ ನೇರ ಲಾಭ ವರ್ಗಾವಣೆ (ಡಿಬಿಟಿ) ವ್ಯಾಪ್ತಿಗೆ ಸೇರಿಸಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರ ತನ್ನೆಲ್ಲ ಸಚಿವಾಲಯಗಳಿಗೆ ಸೂಚನೆ ಹೊರಡಿಸಿದೆ.

ಈ ಬಗ್ಗೆ ಪರಿಶೀಲನೆ ನಡೆಸುವಂತೆ ಎಲ್ಲ ಸಚಿವಾಲಯಗಳಿಗೆ ಕಚೇರಿ ಜ್ಞಾಪನಾ ಪತ್ರದ ಆದೇಶವನ್ನು ಸಂಪುಟ ಸಚಿವಾಲಯ ಬಿಡುಗಡೆ ಮಾಡಿದೆ. ಅರ್ಹ ಫಲಾನುಭವಿಗಳಿಗೆ ಯೋಜನೆಗಳ ಪ್ರಯೋಜನ ತಲುಪಿಸುವಲ್ಲಿ ಪಾರದರ್ಶಕತೆ ತರಲು, ದತ್ತಾಂಶದ ಪುನರಾವರ್ತನೆ ಹಾಗೂ ನಕಲಿ ಫಲಾನುಭವಿಗಳ ಹಾವಳಿ ತಪ್ಪಿಸಲು ಸರ್ಕಾರ ಈ ಕ್ರಮ ಕೈಗೊಂಡಿದೆ.

ಏರ್ ಅರೇಬಿಯಾ ತುರ್ತು ಭೂಸ್ಪರ್ಶ

ಕೊಚ್ಚಿ (ಪಿಟಿಐ): ಶಾರ್ಜಾದಿಂದ ಬರುತ್ತಿದ್ದ ಏರ್ ಅರೇಬಿಯಾ ವಿಮಾನದಲ್ಲಿ ಹೈಡ್ರಾಲಿಕ್ ವೈಫಲ್ಯದ ಬಗ್ಗೆ ಮಾಹಿತಿ ಸಿಕ್ಕಿದ ತಕ್ಷಣ ಶುಕ್ರವಾರ ಕೊಚ್ಚಿ ವಿಮಾನ ನಿಲ್ದಾಣದಲ್ಲಿ ಸಂಪೂರ್ಣ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು. ಕೊನೆಗೂ ವಿಮಾನ ಸುರಕ್ಷಿತವಾಗಿ ಭೂಸ್ಪರ್ಶ ಮಾಡಿದ್ದು, ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಕೊಚ್ಚಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಸಿಐಎಎಲ್) ತಿಳಿಸಿದೆ.

ಗೋಡೆ ಕುಸಿದು 5 ಕಾರ್ಮಿಕರ ಸಾವು

ನವದೆಹಲಿ: ನವದೆಹಲಿಯ ಅಲಿಪುರ್ ಪ್ರದೇಶದಲ್ಲಿ ನಿರ್ಮಾಣ ಹಂತದ ಗೋದಾಮಿನ ಗೋಡೆ ಕುಸಿದು ಶುಕ್ರವಾರ ಐವರು ಕಾರ್ಮಿಕರು ಮೃತಪಟ್ಟಿದ್ದಾರೆ.

ಮಧ್ಯಾಹ್ನ ಸುಮಾರು 12.40ರ ವೇಳೆಗೆ ಘಟನೆ ಸಂಭವಿಸಿದೆ. ಸ್ಥಳದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಆರಂಭದಲ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಸುಮಾರು 20 ಕಾರ್ಮಿಕರು ಅವಶೇಷಗಳಡಿ ಸಿಲುಕಿದ್ದಾರೆ ಎಂದು ತಿಳಿಸಿದ್ದಾರೆ.

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಸಾಲದ ಬಡ್ಡಿ ಹೆಚ್ಚಿಸಿದ ಎಸ್‌ಬಿಐ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಶುಕ್ರವಾರದಿಂದ ಜಾರಿಗೆ ಬರುವಂತೆ ಎಂಸಿಎಲ್‌ಆರ್ ಆಧರಿಸಿದ ಸಾಲಗಳ ಮೇಲಿನ ಬಡ್ಡಿ ದರವನ್ನು ಶೇಕಡ 0.10ರಷ್ಟು ಹೆಚ್ಚಿಸಿದೆ.

ಬ್ಯಾಂಕ್‌ನ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಆರು ತಿಂಗಳ ಅವಧಿಯ ಸಾಲದ ಬಡ್ಡಿದರವು ಶೇ7.35ರಿಂದ ಶೇ 7.45ಕ್ಕೆ ಏರಿಕೆ ಆಗಿದೆ. ವಾಹನ, ಗೃಹ ಮತ್ತು ವೈಯಕ್ತಿಕ ಉದ್ದೇಶಕ್ಕೆ ಪಡೆಯುವ ಒಂದು ವರ್ಷದ ಅವಧಿಯ ಸಾಲದ ಬಡ್ಡಿದರವು ಶೇ 7.40ರಿಂದ ಶೇ 7.50ಕ್ಕೆ ಏರಿಕೆ ಆಗಿದೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹222-460
ದ್ವಿತಳಿ (ಬಿ.ವಿ)	₹222-799

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1635 (1605)
ಸೋಯಾ (ರಿಫೈನ್ಡ್)	₹1230 (1245)
ಸೂರ್ಯಕಾಂತಿ (ರಿಫೈನ್ಡ್)	₹1580 (1590)
ಪಾಮೋಲಿನ್	₹1157 (1167)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಚಿತ್ರದುರ್ಗ	
ಬೆಟ್ಟೆ	39149-39589
ಕೆಂಪುಗೋಟು	29309-29710
ರಾಶಿ	48219-48669
ಕುಮಟ	
ಚಿಪ್ಪು	27109-31599
ಕೋಕ	18169-30099
ಹಳೆಚಾಲಿ	42869-43509
ಹೊಸಚಾಲಿ	35699-39199
ಪುತ್ತೂರು	
ಕೋಕ	11000-26000
ಹೊಸತು	30500-43500
ಶಿವಮೊಗ್ಗ	
ರಾಶಿ	46099-49699
ಸಿದ್ದಾಪುರ	
ಬಿಳಿಗೋಟು	23699-32000
ಚಾಲಿ	36099-38599
ಕೋಕ	20199-32919
ಕೆಂಪುಗೋಟು	31209-32299
ರಾಶಿ	46599-48199
ತಟ್ಟಿಬೆಟ್ಟೆ	46099-46099
ಶಿರಸಿ	
ಬೆಟ್ಟೆ	28099-46591
ಬಿಳಿಗೋಟು	22199-33099
ಚಾಲಿ	33329-39299
ರಾಶಿ	46989-48919
ಯಲ್ಲಾಪುರ	
ಬಿಳಿಗೋಟು	26899-33199
ಚಾಲಿ	35369-38720
ಕೋಕ	18812-30812
ಕೆಂಪುಗೋಟು	30519-34969
ರಾಶಿ	46060-53199
ತಟ್ಟಿಬೆಟ್ಟೆ	41399-45569

ಮೂಡಿಗೆರೆ ಕಾಫಿ (50.ಕೆಜಿಗೆ)

	ಮುದ್ರೆಮನೆ
ಎಪಿ	15650
ಎಸಿ	8680
ಆರ್‌ಪಿ	9400
ಆರ್‌ಸಿ	4700

ಮುಂಬೈ ಧಾರಣೆ

ಶೇಂಗಾ

15-7-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1645 (1615)
ಒಂದು ವಾರದ ಡೆಲಿವರಿ	1640 (1610)
ಸೋಯಾ ಕಚ್ಚಾ	1135 (1610)
ಪಾಮ್ ವಾರದ ಡೆಲಿವರಿ	1155 (1163)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,200 (50,300)
ಬೆಳ್ಳಿ ಕೆ.ಜಿ 54,750 (55,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಅಡಿಗಾಸ್: ಪ್ರವಾಸಕ್ಕೆ ಇಎಂಐ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡಿಗಾಸ್ ಯಾತ್ರಾ ಕಂಪನಿಯು ಪ್ರವಾಸ ಪ್ರಿಯರಿಗಾಗಿ ಹೊಸ ಯೋಜನೆಗಳನ್ನು ರೂಪಿಸಿದೆ. ಮೊದಲು ಪ್ರವಾಸ ಕೈಗೊಂಡು, ಅದರ ಶುಲ್ಕವನ್ನು ನಂತರ ಇಎಂಐ ರೂಪದಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

'ಈಸಿ ಪೇ' ಹೆಸರಿನ ಇನ್ನೊಂದು ಯೋಜನೆಯನ್ನು ಮತ್ತೆ ಆರಂಭಿಸಲಾಗಿದ್ದು, ಇದರ ಅಡಿಯಲ್ಲಿ ಪ್ರವಾಸಿಗರು ಪ್ರವಾಸ ಶುಲ್ಕವನ್ನು 12 ತಿಂಗಳ ಕಂತುಗಳಲ್ಲಿ ಪಾವತಿಸಬಹುದು. 11 ತಿಂಗಳು ಪಾವತಿಸಿದ ನಂತರ, ಇನ್ನೊಂದು ತಿಂಗಳ ಕಂತು ಉಚಿತವಾಗಲಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ. ವಿದೇಶ ಪ್ರವಾಸವನ್ನೂ ಈ ಯೋಜನೆಯ ಅಡಿಯಲ್ಲಿ ಕೈಗೊಳ್ಳಬಹುದು.

ಮಳೆಗಾಲದ ಸೊಬಗನ್ನು ಸವಿಯಲು ವಿಶೇಷ ಪ್ರವಾಸಗಳನ್ನು ಆಯೋಜಿಸಲಾಗಿದೆ. ಕೋವಿಡ್‌ನಿಂದಾಗಿ ಸ್ಥಗಿತಗೊಂಡಿದ್ದ ವಿದೇಶ ಪ್ರವಾಸವನ್ನು ಕಂಪನಿ ಮತ್ತೆ ಆರಂಭಿಸಿದೆ. ಹೆಚ್ಚಿನ ವಿವರಗಳಿಗಾಗಿ ಕಂಪನಿಯ ವೆಬ್‌ಸೈಟ್‌ಗೆ (www.adigasyatra.com) ಭೇಟಿ ನೀಡಬಹುದು ಎಂದು ಪ್ರಕಟಣೆ ಹೇಳಿದೆ.

ಸಂಪರ್ಕ ಸಂಖ್ಯೆ: ಬೆಂಗಳೂರು – 080-26616678, 9449478944, ಹುಬ್ಬಳ್ಳಿ – 0836-2256678, 9611600810

ಎಲ್ ಆ್ಯಂಡ್ ಟಿ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಎಲ್ ಆ್ಯಂಡ್ ಟಿ ಟೆಕ್ನಾಲಜಿ ಸರ್ವಿಸಸ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 274 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 216 ಕೋಟಿ ಲಾಭ ಗಳಿಸಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ಲಾಭದ ಪ್ರಮಾಣವು ಶೇಕಡ 27ರಷ್ಟು ಹೆಚ್ಚಾಗಿದೆ.


ಕುದುರೆ ರೇಸ್ ಕ್ರೀಡೆಯಲ್ಲಿ ಬದಲಾವಣೆಯ ನಿರೀಕ್ಷೆ ಮೂಡಿಸಿರುವ ಪದ್ಧತಿ

ಆ.1ರಿಂದ ಎನ್‌ಸಿಟಿ ವ್ಯವಸ್ಥೆ ಜಾರಿ

ಬೆಂಗಳೂರು: ಕುದುರೆ ರೇಸ್ ಕ್ರೀಡೆಯಲ್ಲಿ ಮಹತ್ವದ ಬದಲಾವಣೆ ತರಲಿದೆ ಎನ್ನಲಾಗಿರುವ ನ್ಯಾಷನಲ್ ಕಂಬೈನ್ಡ್ ಟೊಟಲೈಸೆಟರ್ ಸಿಸ್ಟಮ್ (ಎನ್‌ಸಿಟಿಎಸ್) ಆಗಸ್ಟ್ 1ರಿಂದ ಏಳು ಟರ್ಫ್ ಕ್ಲಬ್‌ಗಳಲ್ಲಿ ಜಾರಿಯಾಗಲಿದೆ.

'ದೇಶದ ಎಲ್ಲ ಪಂಟರ್ಸ್, ಹೂಡಿಕೆದಾರರು ಮತ್ತು ಟರ್ಫ್ ಕ್ಲಬ್‌ಗಳ ಪದಾಧಿಕಾರಿಗಳು ಹೊಸ ಪದ್ಧತಿಯ ಜಾರಿಗೆ ಉತ್ಸುಕರಾಗಿದ್ದಾರೆ. ಆಗಸ್ಟ್ ಒಂದರಂದು ಹೈದರಾಬಾದ್ ರೇಸ್‌ನೊಂದಿಗೆ ಈ ಪದ್ಧತಿಯು ಜಾರಿಯಾಗುತ್ತಿರುವುದು ಸಂತಸ ತಂದಿದೆ' ಎಂದು ಬೆಂಗಳೂರು ಟರ್ಫ್ ಕ್ಲಬ್ ಅಧ್ಯಕ್ಷ ಕೆ. ಉದಯ್ ಈಶ್ವರನ್ ಹೇಳಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೆಂಗಳೂರು ಟರ್ಫ್ ಕ್ಲಬ್, ಮದ್ರಾಸ್ ರೇಸ್ ಕ್ಲಬ್, ರಾಯಲ್ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ ಲಿಮಿಟೆಡ್, ಹೈದರಾಬಾದ್ ರೇಸ್ ಕ್ಲಬ್, ಮೈಸೂರು ರೇಸ್ ಕ್ಲಬ್, ಡೆಲ್ಲಿ ರೇಸ್ ಕ್ಲಬ್, ರಾಯಲ್ ಕಲ್ಕತ್ತಾ ಟರ್ಫ್ ಕ್ಲಬ್‌ಗಳು ಎನ್‌ಸಿಟಿಎಸ್ ಒಪ್ಪಂದಕ್ಕೆ ಸಹಿ ಹಾಕಿವೆ' ಎಂದರು.


ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಬೆಟ್‌ವೇ ಕಂಪೆನಿಯ ಸಿಇಒ ರೋಹನ್ ಗುಪ್ತಾ ಮತ್ತು ಬಿಟಿಸಿ ಅಧ್ಯಕ್ಷ ಉದಯ್ ಈಶ್ವರನ್ ಅವರು ಬೆಂಗಳೂರು ಬೇಸಿಗೆ ಡರ್ಬಿ ಕಪ್ ಅನಾವರಣಗೊಳಿಸಿದರು –ಪ್ರಜಾವಾಣಿ ಚಿತ್ರ

'ಒಂದು ದೇಶ, ಒಂದು ಟೋಟ್ ಆಶಯದಂತೆ ಕೊಮ್ಮಿಂಗ್ಲಿಂಗ್ ಟೋಟ್ ಇದಾಗಲಿದೆ. ಇದರಡಿಯಲ್ಲಿ ದೇಶದ ಎಲ್ಲಾ ರೇಸ್ ಕ್ಲಬ್‌ಗಳ ವಿನ್, ಪ್ಲೇಸ್, ಸೆಕೆಂಡ್ ಹಾರ್ಸ್ ಪೂಲ್, ಜಾಕ್‌ಪಾಟ್, ಮಿನಿ ಜಾಕ್‌ಪಾಟ್ ಇತ್ಯಾದಿ ಟೋಟ್‌ಗಳನ್ನು ಒಂದುಗೂಡಿಸಿ ಒಂದೇ ತೆರನಾದ ಡಿವಿಡೆಂಡ್ ಗಳನ್ನು ನೀಡಲಾಗುವುದು. ಈ ವಿಧಾನದಿಂದ ಬೆಟ್ಟಿಂಗ್ ಮಾಡುವವರಿಗೆ ಹೆಚ್ಚಿನ ಡಿವಿಡೆಂಡ್ ಸಿಗಲಿದೆ. ರೇಸ್ ಕ್ಲಬ್‌ಗಳು ತಮ್ಮ ವಹಿವಾಟು ಹೆಚ್ಚಿಸಿಕೊಳ್ಳಲು ಇದು ಸಹಕಾರಿಯಾಗಲಿದೆ' ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಟರ್ಫ್ ಅಥಾರಿಟಿ ಆಫ್ ಇಂಡಿಯಾದ ಜಿಎಸ್‌ಟಿ ಸುಧಾರಣ ಘಟಕದ ಮುಖ್ಯಸ್ಥ ಜವಾರೆ ಎಸ್ ಪೂನಾವಾಲಾ, 'ಉದಯ್ ಈಶ್ವರನ್ ಅವರು ಅಭಿನಂದನಾರ್ಹರು. ದೇಶದ ರೇಸಿಂಗ್ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ತರಲಿರುವ ಈ ಪದ್ಧತಿಯನ್ನು ಜಾರಿಗೊಳಿಸಲು ಏಳು ಕೇಂದ್ರಗಳನ್ನು ಸಿದ್ಧಗೊಳಿಸಿದ್ದಾರೆ. ಉದಯ್, ಹರಿಮೋಹನ್ ನಾಯ್ಡು ಮತ್ತು ರಮೇಶ್ ರಂಗರಾಜನ್ ಅವರ ಪ್ರಯತ್ನದಿಂದ ಎನ್‌ಸಿಟಿಸಿ ಜಾರಿಯಾಗುತ್ತಿದೆ' ಎಂದರು.

ಭಾನುವಾರ ನಡೆಯಲಿರುವ ಬೆಟ್‌ವೇ ಬೆಂಗಳೂರು ಬೇಸಿಗೆ ಡರ್ಬಿಯ ಟ್ರೋಫಿಯನ್ನು ಉದಯ್ ಈಶ್ವರನ್ ಮತ್ತು ಬೆಟ್‌ವೇ ಕಂಪೆನಿಯ ಸಿಇಒ ರೋಹನ್ ಗುಪ್ತಾ ಅನಾವರಣಗೊಳಿಸಿದರು. ಬೆಟ್‌ವೇ ಇದೇ ಮೊದಲ ಬಾರಿಗೆ ಭಾರತದಲ್ಲಿ ಕುದುರೆ ರೇಸ್‌ಗೆ ಪ್ರಾಯೋಜಕತ್ವ ನೀಡುತ್ತಿದೆ. ಈ ರೇಸ್‌ನಲ್ಲಿ ಸ್ಪರ್ಧಿಸುವ 13 ಕುದುರೆಗಳ ಕ್ರಮಸಂಖ್ಯೆಗಳ ಡ್ರಾ ನಡೆಯಿತು.


ಸಚಿನ್ ತೆಂಡೂಲ್ಕರ್ ಮತ್ತು ಗ್ಯಾರಿಫೀಲ್ಡ್ ಸೋಬರ್ಸ್ – ಇನ್ಸ್ಟಾಗ್ರಾಮ್ ಚಿತ್ರ


ಸರ್ ಗ್ಯಾರಿ ಸೋಬರ್ಸ್ ಫೌಂಡೇಷನ್ ಕಾರ್ಯಕ್ರಮದಲ್ಲಿ ಕ್ರಿಕೆಟ್ ದಿಗ್ಗಜರಾದ ಜೊಯೆಲ್ ಗಾರ್ನರ್, ಮೈಕ್ ಪ್ರಾಕ್ಟರ್, ಬ್ರಯನ್ ಲಾರಾ, ಫಾರೂಕ್ ಎಂಜಿನಿಯರ್, ಅಲನ್ ಲ್ಯಾಂಬ್, ಗಾರ್ಡನ್ ಗ್ರಿನೀಜ್ ಭಾಗವಹಿಸಿದ್ದರು

ಸಚಿನ್ 'ಸಾವಿರ' ನೆನಪಿಗೆ ಸೋಬರ್ಸ್ ಜೊತೆ

ಬೆಂಗಳೂರು: ಕ್ರಿಕೆಟ್‌ನಲ್ಲಿ ಶತಕಗಳ ಶತಕದ ದಾಖಲೆ ಮಾಡಿರುವ ಸಚಿನ್ ತೆಂಡೂಲ್ಕರ್ ಈಗ ಇನ್ಸ್ಟಾಗ್ರಾಮ್‌ನಲ್ಲಿ ಸಾವಿರ ಪೋಸ್ಟ್‌ಗಳ ಮೈಲುಗಲ್ಲು ತಲುಪಿದ್ದಾರೆ.

ಲಾರ್ಡ್ಸ್‌ನಲ್ಲಿ ಗುರುವಾರ ನಡೆದ ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವಣ ಎರಡನೇ ಏಕದಿನ ಪಂದ್ಯದ ಸಂದರ್ಭದಲ್ಲಿ ದಿಗ್ಗಜ ಕ್ರಿಕೆಟಿಗ, ವೆಸ್ಟ್ ಇಂಡೀಸ್‌ನ ಸರ್ ಗ್ಯಾರಿಫೀಲ್ಡ್ ಸೋಬರ್ಸ್ ಅವರೊಂದಿಗೆ ತಾವಿರುವ ಚಿತ್ರವನ್ನು ಇನ್ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಇನ್ಸ್ಟಾದಲ್ಲಿ 1000ನೇ ಪೋಸ್ಟ್‌ಗೆ ಇದಕ್ಕಿಂತ ಉತ್ತಮ ಚಿತ್ರ ಯಾವುದೂ ಇಲ್ಲ' ಎಂದು ಸಚಿನ್ ಬರೆದಿದ್ದಾರೆ.

ದಿಗ್ಗಜರ ಮಿಲನ: ಕ್ರಿಕೆಟ್ ಕಾಶಿ ಲಾರ್ಡ್ಸ್‌ನಲ್ಲಿ ಪಂದ್ಯದ ಸಂದರ್ಭದಲ್ಲಿ ಹಲವು ದಿಗ್ಗಜರು ಸೇರಿದ್ದರು. ಸರ್ ಗ್ಯಾರಿ ಸೋಬರ್ಸ್ ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ವೆಸ್ಟ್ ಇಂಡೀಸ್, ಇಂಗ್ಲೆಂಡ್ ಮತ್ತು ಭಾರತದ ಮಾಜಿ ಕ್ರಿಕೆಟಿಗರು ಸೇರಿದ್ದರು.

ವೆಸ್ಟ್ ಇಂಡೀಸ್‌ನ ಗೊರ್ಡನ್ ಗ್ರಿನಿಜ್, ಬ್ರಯನ್ ಲಾರಾ, ಜೊಯಲ್ ಗಾರ್ನರ್, ಇಂಗ್ಲೆಂಡ್‌ನ ಅಲನ್ ಲ್ಯಾಂಬ್, ಜಾನ್ ಲೆವರ್ ಮತ್ತು ಭಾರತದ ಫಾರೂಕ್ ಎಂಜಿನಿಯರ್ ಭಾಗವಹಿಸಿದ್ದರು.

ಶೂಟಿಂಗ್: ಫೈನಲ್‌ಗೆ ಐಶ್ವರಿ

ನವದೆಹಲಿ (ಪಿಟಿಐ): ಯುವಪ್ರತಿಭೆ ಐಶ್ವರಿ ಪ್ರತಾಪ್ ಸಿಂಗ್ ತೋಮರ್ ದಕ್ಷಿಣ ಕೊರಿಯಾದ ಚಾಂಗ್‌ವಾನ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಚಾಂಪಿಯನ್‌ಷಿಪ್ ಕ್ವಾಲಿಫೈಯರ್‌ನಲ್ಲಿ ಅಗ್ರಸ್ಥಾನ ಗಳಿಸಿದರು.

ಶುಕ್ರವಾರ ನಡೆದ ಪುರುಷರ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್ (3ಪಿ) ವಿಭಾಗದಲ್ಲಿ ಅವರು ಮೊದಲಿಗರಾಗಿದ್ದಾರೆ. ತೋಮರ್ ಮತ್ತು ಚೈನ್ ಸಿಂಗ್ ಅವರು ಫೈನಲ್‌ಗೆ ತಲುಪಿದ್ದು ಪದಕ ಗೆಲುವಿನ ಭರವಸೆ ಮೂಡಿಸಿದ್ದಾರೆ.

ತೋಮರ್ 600ರ ಪೈಕಿ 593 ಅಂಕಗಳನ್ನು ಗಳಿಸಿ ಮೊದಲಿಗರಾದರು. ನೀಲಿಂಗ್ ಮತ್ತು ಪ್ರೋನ್ ಪೊಸಿಷನ್‌ಗಳಲ್ಲಿ ಅವರು ಕರಾರುವಾಕ್ ಆಗಿ ಗುರಿ ಸಾಧಿಸಿದರು. ಇದೇ ವಿಭಾಗದಲ್ಲಿ ಭಾರತೀಯ ಸೇನೆಯ ಯೋಧ ಚೈನ್ ಸಿಂಗ್ ಏಳನೇ ಸ್ಥಾನ ಪಡೆದರು. 586 ಅಂಕಗಳನ್ನು ಗಳಿಸಿದರು. ಅನುಭವಿ ಸಂಜೀವ್ ರಜಪೂತ್ 577 ಅಂಕ ಗಳಿಸಿ 40ನೇ ಸ್ಥಾನ ಪಡೆದರು.

₹23 ಸಾವಿರ ಕೋಟಿ ಬಂಡವಾಳ ಪ್ರಸ್ತಾವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಕೃಷಿ ಮೂಲಸೌಕರ್ಯ ನಿಧಿಗೆ ₹23,000 ಕೋಟಿಯಷ್ಟು ಬಂಡವಾಳ ಹೂಡುವ ಪ್ರಸ್ತಾವಗಳು ಬಂದಿದ್ದು, ಆ ಪೈಕಿ ₹9,000ಕೋಟಿ ಈಗಾಗಲೇ ರೈತರಿಗೆ ಬ್ಯಾಂಕ್‌ಗಳಿಂದ ಸಾಲದ ರೂಪದಲ್ಲಿ ವಿತರಣೆಯಾಗಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ತಿಳಿಸಿದರು. ನಗರದಲ್ಲಿ ನಡೆದ ರಾಜ್ಯ ಕೃಷಿ ಮತ್ತು ತೋಟಗಾರಿಕಾ ಸಚಿವರ ರಾಷ್ಟ್ರೀಯ ಸಮ್ಮೇಳನದ ಕೊನೆಯ ದಿನವಾದ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

2025–26ರ ಹೊತ್ತಿಗೆ ₹1 ಲಕ್ಷ ಕೋಟಿಯನ್ನು ಕೃಷಿ ಮೂಲಸೌಕರ್ಯ ಅಭಿವೃದ್ಧಿಗಾಗಿ ಸಾಲದ ರೂಪದಲ್ಲಿ ವಿತರಿಸುವ ಉದ್ದೇಶ ಕೇಂದ್ರ ಸರ್ಕಾರದ್ದಾಗಿದೆ. ಸಹಕಾರ, ಖಾಸಗಿ ಸಂಸ್ಥೆಗಳು, ಸ್ವಯಂ ರೈತ ಸಂಘಟನೆಗಳು ಯಾರೇ ಈ ಸಾಲ ಪೂರೈಕೆ ನಿಧಿಗೆ ಬಂಡವಾಳ ಒದಗಿಸಲು ಪ್ರಸ್ತಾವ ಸಲ್ಲಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

ಪತ್ರ ಬರೆದು ಉಭಯ ಕುಶಲೋಪರಿ ನಡೆಸುತ್ತಿದ್ದೀರಾ?: ಹೈಕೋರ್ಟ್ ಚಾಟಿ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳು ಮತ್ತೊಬ್ಬ ಅಧಿಕಾರಿಗೆ ಪತ್ರ ಬರೆದು ಉಭಯ ಕುಶಲೋಪರಿ ವಿಚಾರಿಸಿದ ಮಾತ್ರಕ್ಕೆ ಬಿಬಿಎಂಪಿ ವ್ಯಾಪ್ತಿಯಲ್ಲಿನ ಕೆರೆಗಳ ಒತ್ತುವರಿ ತೆರವು ಮಾಡಿದಂತಾಗುತ್ತದೆಯೇ' ಎಂದು ಹೈಕೋರ್ಟ್, ಬಿಬಿಎಂಪಿ ಕಾರ್ಯವೈಖರಿಗೆ ವ್ಯಂಗ್ಯವಾಡಿದೆ.

ಕೆರೆಗಳ ಒತ್ತುವರಿ ತೆರವು ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ 2014ರಿಂದ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, 'ಸುಬ್ರಹ್ಮಣ್ಯಪುರ ಕೆರೆ ಪ್ರದೇಶದ 3.39 ಎಕರೆ ಪ್ರದೇಶದಲ್ಲಿ ಕೊಳೆಗೇರಿ ನಿವಾಸಿಗಳಿದ್ದು, ಅವರನ್ನು ತೆರವುಗೊಳಿಸುವುದು ಕೊಳೆಗೇರಿ ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಒಳಪಟ್ಟಿದೆ. ಅವರಿಗೆ ಈ ವಿಚಾರ ತಿಳಿಸಲಾಗಿದೆ. ಅದೇ ರೀತಿ ಬೇಗೂರು ಕೆರೆ ಒತ್ತುವರಿ ತೆರವು ಬಗ್ಗೆಯೂ ಸಂಬಂಧಿಸಿದ ತಹಶೀಲ್ದಾರ್‌ಗೆ ಬಿಬಿಎಂಪಿ ಅಧಿಕಾರಿಗಳು ಪತ್ರ ಬರೆದಿದ್ದಾರೆ' ಎಂದರು.

ಈ ಮಾತಿಗೆ ಆಕ್ರೋಶ ವ್ಯಕ್ತಪಡಿಸಿದ ನ್ಯಾಯಪೀಠ, 'ಕೋರ್ಟ್ ಆದೇಶ ಪಾಲನೆ ಮಾಡುವುದು ಎಂದರೆ ಕಚೇರಿಗಳಲ್ಲಿ ಕುಳಿತು ಅಧಿಕಾರಿಗಳು ಪತ್ರ ಬರೆಯುವುದಾ' ಎಂದು ಪ್ರಶ್ನಿಸಿತು.

'ಒತ್ತುವರಿ ತೆರವುಗೊಳಿಸಲು ನಿಮಗೆ ನಿರ್ದೇಶನ ನೀಡಲಾಗಿತ್ತು. ಆದರೆ, ಈಗ ಬಂದು ಒತ್ತುವರಿ ತೆರವು ನಮಗೆ ಸಂಬಂಧಿಸಿದ್ದಲ್ಲ. ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗಿದೆ ಎಂದು ಹೇಳುತ್ತಿದ್ದೀರಿ. ಅಧಿಕಾರಿಗಳು ಕಚೇರಿಗಳಲ್ಲಿ ಕೂತು ಐಷಾರಾಮಿ ಜೀವನ ನಡೆಸುತ್ತಿದ್ದರೆ, ನೀವು ನ್ಯಾಯಾಲಯದಲ್ಲಿ ಅಂತಹ ಅಧಿಕಾರಿಗಳನ್ನು ಸಮರ್ಥಿಸಿಕೊಳ್ಳುತ್ತಿದ್ದೀರಾ' ಎಂದು ತರಾಟೆಗೆ ತೆಗೆದುಕೊಂಡಿತು.

'ಈತನಕ ಕೋರ್ಟ್‌ಗೆ ನೀವು ಕೊಟ್ಟಿರುವ ನೆರವು ಸಾಕು. ಅಧಿಕಾರಿಗಳಿಂದ ಹೇಗೆ ಕೆಲಸ ಮಾಡಿಸಬೇಕು ಎಂಬುದು ನಮಗೆ ಗೊತ್ತಿದೆ' ಎಂದು ಚಾಟಿ ಬೀಸಿದ ನ್ಯಾಯಪೀಠ, ' ಮುಂದಿನ ವಿಚಾರಣೆಗೆ ಬಿಬಿಎಂಪಿ ವಲಯದ ಎಕ್ಸಿಕ್ಯೂಟಿವ್ ಎಂಜಿನಿಯರ್‌ಗಳು ಖುದ್ದು ಹಾಜರಿರಬೇಕು' ಎಂದು ತಾಕೀತು ಮಾಡಿತು.

ಜೆಪಿ ನಗರದ ಪುಟ್ಟೇನಹಳ್ಳಿ ಕೆರೆ ಒತ್ತುವರಿ ತೆರವಿಗೆ ಕೈಗೊಳ್ಳುವ ಕುರಿತಂತೆ ಬೊಮ್ಮನಹಳ್ಳಿ ಉಪ ವಲಯದ ಎಕ್ಸಿಕ್ಯೂಟಿವ್ ಎಂಜಿನಿಯರ್ ಕೂಡಾ ಖುದ್ದು ವಿಚಾರಣೆಗೆ ಹಾಜರಾಗಬೇಕು ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿದೆ.

ರಾಜ್ಯ ಅಕ್ಕಿ ಗಿರಣಿದಾರರ ಸಂಘದಿಂದ ಪ್ರತಿಭಟನೆ ಎಚ್ಚರಿಕೆ

ಆಹಾರ ಧಾನ್ಯಗಳಿಗೆ ಜಿಎಸ್‌ಟಿ ವಿನಾಯ್ತಿ: ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಹಾರ ಧಾನ್ಯ, ಬೇಳೆ ಕಾಳು ಸೇರಿದಂತೆ ವಿವಿಧ ಹಿಟ್ಟಿನ ಪದಾರ್ಥಗಳ ಮೇಲೆ ಜಿಎಸ್‌ಟಿ ತೆರಿಗೆ ವಿಧಿಸುವ ಆದೇಶವನ್ನು ಕೇಂದ್ರ ಸರ್ಕಾರ ಹಿಂಪಡೆಯಬೇಕು' ಎಂದು ಕರ್ನಾಟಕ ರಾಜ್ಯ ಅಕ್ಕಿ ಗಿರಣಿದಾರರ ಸಂಘ ಆಗ್ರಹಿಸಿದೆ.

'ಈಗಾಗಲೇ ದಿನಬಳಕೆ ವಸ್ತುಗಳು ಸೇರಿದಂತೆ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರಿದೆ. ಜುಲೈ 18ರಿಂದ ಜಾರಿಯಾಗುವ ಜಿಎಸ್‌ಟಿ ಕೌನ್ಸಿಲ್ ಆದೇಶದ ಪ್ರಕಾರ ಶೇಕಡಾ 5ರಷ್ಟು ಜಿಎಸ್‌ಟಿ ತೆರಿಗೆ ವಿಧಿಸುತ್ತಿರುವುದು ಅಸಮಂಜಸ ನಡೆ. ಅಕ್ಕಿ ಅಗತ್ಯ ವಸ್ತುವಾಗಿದ್ದು, ಇದುವರೆಗೂ ತೆರಿಗೆಗೆ ಒಳಪಟ್ಟಿರಲಿಲ್ಲ. ಈಗ ತೆರಿಗೆ ವ್ಯಾಪ್ತಿಯೊಳಗೆ ಬರುವುದರಿಂದ ಜನಸಾಮಾನ್ಯರಿಗೆ ಹೆಚ್ಚಿನ ಹೊರೆಯಾಗಲಿದೆ' ಎಂದು ಸಂಘದ ಕಾರ್ಯದರ್ಶಿ ಎಸ್.ಶಿವಕುಮಾರ್ ಮಾಹಿತಿ ನೀಡಿದರು.

'ಕೇಂದ್ರ ಸರ್ಕಾರದ ಆಹಾರ ಸುರಕ್ಷತಾ ಮತ್ತು ಗುಣಮಟ್ಟದ ಪ್ರಾಧಿಕಾರದ (ಎಫ್‌ಎಸ್‌ಎಸ್‌ಐ) ಮಾನದಂಡಗಳ ಪ್ರಕಾರ ಗುಣಮಟ್ಟದ ಅಕ್ಕಿಯನ್ನು ಮಾರುಕಟ್ಟೆಗೆ ಪೂರೈಕೆ ಮಾಡಬೇಕಾಗಿದೆ. ಅಕ್ಕಿಯ ಮೇಲೆ ತೆರಿಗೆ ವಿಧಿಸಿದರೆ ರೈತರಿಂದ ಖರೀದಿಸುವ ಕಚ್ಚಾ ವಸ್ತುಗಳ ಬೆಲೆಗಳ ಮೇಲೆ ಪರಿಣಾಮ ಬೀರಿ, ಭತ್ತಕ್ಕೆ ಕಡಿಮೆ ಬೆಲೆ ನಿಗದಿ ಮಾಡುವ ಪರಿಸ್ಥಿತಿ ಎದುರಾಗಬಹುದು' ಎಂದರು.

'ಪ್ರಧಾನಿ ನರೇಂದ್ರ ಮೋದಿಯವರ ರೈತರ ಆದಾಯ ದ್ವಿಗುಣಗೊಳಿಸುವ ಆಶಯಕ್ಕೆ ಪೆಟ್ಟು ಬೀಳುವ ಸಾಧ್ಯತೆಯಿದೆ. ಈಗಾಗಲೇ ರೈತರು ಪರ್ಯಾಯ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದರಿಂದ ದೇಶದ ಆಹಾರ ಧಾನ್ಯ ಉತ್ಪಾದನೆ ಕುಂಠಿತಗೊಂಡು, ರಾಷ್ಟ್ರದ ಆಹಾರ ಭದ್ರತೆ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆಯಿದೆ' ಎಂದು ಎಚ್ಚರಿಸಿದರು.


ಆಹಾರ ಪದಾರ್ಥಗಳ ಮೇಲೆ ಶೇಕಡಾ 5ರಷ್ಟು ಜಿಎಸ್‌ಟಿ ತೆರಿಗೆ ವಿಧಿಸುವ ಆದೇಶವನ್ನು ಕೇಂದ್ರ ಸರ್ಕಾರ ಹಿಂಪಡೆಯಬೇಕು ಎಂದು ಕರ್ನಾಟಕ ರಾಜ್ಯ ಅಕ್ಕಿ ಗಿರಣಿದಾರರ ಸಂಘದ ಸದಸ್ಯರು ಶುಕ್ರವಾರ ಪ್ರೆಸ್ ಕ್ಲಬ್ ಮುಂಭಾಗದಲ್ಲಿ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು

'ಎಲ್ಲಾ ಆಹಾರ ಧಾನ್ಯಗಳು ಜಿಎಸ್‌ಟಿ ವ್ಯಾಪ್ತಿಗೆ ಬರುವುದರಿಂದ ಪ್ರತಿಯೊಬ್ಬರ ಮನೆಯ ಸರಾಸರಿ ಖರ್ಚು ತಿಂಗಳಿಗೆ ₹500ರಷ್ಟು ಹೆಚ್ಚಾಗುತ್ತದೆ. ಹೋಟೆಲ್‌ನವರು ಈಗಾಗಲೇ ಶೇಕಡಾ 5ರಷ್ಟು ಜಿಎಸ್‌ಟಿ ತೆರಿಗೆ ಭರಿಸುತ್ತಿದ್ದಾರೆ' ಎಂದು ಸದಸ್ಯ ಪ್ರಸನ್ನಕುಮಾರ್ ತಿಳಿಸಿದರು.

ಸೂಪರ್ 500 ಬ್ಯಾಡ್ಮಿಂಟನ್: ಸೈನಾ ನೆಹ್ವಾಲ್, ಪ್ರಣಯ್‌ಗೆ ನಿರಾಸೆ

ಸಿಂಗಪುರದಲ್ಲಿ ಸಿಂಧು ಸೆಮಿಗೆ



ಸೆಮಿಫೈನಲ್ ಪ್ರವೇಶಿಸಿದ ಭಾರತದ ಪಿ. ವಿ. ಸಿಂಧು

ಮುಖ್ಯಾಂಶಗಳು

- ಚೀನಾ ಎದುರಾಳಿ ಮಣಿಸಿದ ಹೈದರಾಬಾದ್ ಆಟಗಾರ್ತಿ
- ಸೆಮಿಯಲ್ಲಿ ಸಿನಾ ಕವಾಕಮಿ ಜತೆ ಪೈಪೋಟಿ
- ಎಂ.ಆರ್.ಅರ್ಜುನ್– ಧ್ರುವ್ ಕಪಿಲ ಜೋಡಿಗೆ ಸೋಲು

ಸಿಂಗಪುರ (ಪಿಟಿಐ): ಒಲಿಂಪಿಯನ್ ಪಿ.ವಿ. ಸಿಂಧು ಸಿಂಗಪುರ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಸಿಂಧು 17-21, 21-11, 21-19 ರಿಂದ ಚೀನಾದ ಹ್ಯಾನ್ ಯೀ ವಿರುದ್ಧ ರೋಚಕ ಜಯ ಗಳಿಸಿದರು. ನಾಲ್ಕರ ಘಟ್ಟದಲ್ಲಿ ಸಿಂಧು ಅವರು ಜಪಾನಿನ ಸಿನಾ ಕವಾಕಮಿ ವಿರುದ್ಧ ಸೆಣಸುವರು. ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಸಿನಾ ಅವರು 21-17, 21-19ರಿಂದ ನೇರ ಗೇಮ್‌ಗಳಲ್ಲಿ ಥಾಯ್ಲೆಂಡ್‌ನ ಪಾರ್ನ್‌ಪಾವಿ ಚೊಚುವಾಂಗ್ ವಿರುದ್ಧ ಜಯಿಸಿದರು.

ಇದೇ ತಿಂಗಳು ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೂ ಮುನ್ನ ಬ್ಯಾಡ್ಮಿಂಟನ್ ಆಟಗಾರರಿಗೆ ಸಿಂಗಪುರ ಟೂರ್ನಿಯು ಪೂರ್ವಾಭ್ಯಾಸದ ವೇದಿಕೆಯಾಗಿದೆ.

62 ನಿಮಿಷಗಳವರೆಗೆ ನಡೆದ ಮಹಿಳೆಯರ ಸಿಂಗಲ್ಸ್‌ನ ಎಂಟರ ಘಟ್ಟದ ಪಂದ್ಯದ ಆರಂಭಿಕ ಗೇಮ್‌ನಲ್ಲಿ ವಿಶ್ವ ಶ್ರೇಯಾಂಕದಲ್ಲಿ 19ನೇ ಸ್ಥಾನದಲ್ಲಿರುವ ಹ್ಯಾನ್ ಮುಂದೆ ಸಿಂಧು ಹಿನ್ನಡೆ ಅನುಭವಿಸಿದರು. ಶಕ್ತಿಯುತ ಸ್ಮ್ಯಾಷ್, ಚುರುಕಾದ ರಿಟರ್ನ್‌ಗಳ ಮೂಲಕ ಚೀನಾ ಆಟಗಾರ್ತಿ ಮಿಂಚಿದರು.

ಆದರೆ ಅನುಭವಿ ಆಟಗಾರ್ತಿ ಸಿಂಧು ನಂತರದ ಗೇಮ್‌ನಲ್ಲಿ ತಿರುಗೇಟು ನೀಡಿದರು. ಹತ್ತು ಅಂಕಗಳ ಅಂತರದಿಂದ ಜಯಿಸಿದರು. ಆದರೆ ನಿರ್ಣಾಯಕವಾದ ಮೂರನೇ ಗೇಮ್ ಕುತೂಹಲದ ಕಣಜವಾಯಿತು. ಉಭಯ ಆಟಗಾರ್ತಿಯರೂ ಜಿದ್ದಾಜಿದ್ದಿನ ಪೈಪೋಟಿ ನಡೆಸಿದರು. ಗೇಮ್ ಕೊನೆಯ ಹಂತದಲ್ಲಿ ಸಿಂಧು ಚುರುಕಾದ ಹೊಡೆತಗಳನ್ನು ಪ್ರಯೋಗಿಸಿ ಗೆದ್ದರು. ಇದರೊಂದಿಗೆ ಸಿಂಧು ಹ್ಯಾನ್ ವಿರುದ್ಧ ಜಯಿಸಿದ ಒಟ್ಟಾರೆ ಮೂರನೇ ಪಂದ್ಯ ಇದಾಗಿದೆ. ಒಂದೂ ಬಾರಿಯೂ ಸೋತಿಲ್ಲ.

ಸೈನಾ, ಪ್ರಣಯ್‌ಗೆ ಸೋಲು: ಸೈನಾ ನೆಹ್ವಾಲ್ ಮತ್ತು ಎಚ್.ಎಸ್.ಪ್ರಣಯ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಆಘಾತ ಅನುಭವಿಸಿದರು.

ಲಂಡನ್ ಒಲಿಂಪಿಕ್ ಕಂಚಿನ ಪದಕ ವಿಜೇತೆ ಸೈನಾ, 13-21, 21-15, 20-21 ರಲ್ಲಿ ಜಪಾನ್‌ನ ಅಯಾ ಒಹೊರಿ ಕೈಯಲ್ಲಿ ಪರಾಭವಗೊಂಡರು. ಪ್ರೀ ಕ್ವಾರ್ಟರ್‌ನಲ್ಲಿ ವಿಶ್ವದ 9ನೇ ರ್‍ಯಾಂಕ್‌ನ ಆಟಗಾರ್ತಿ ಬಿಂಗ್ ಜಿಯಾಗೊ ಅವರನ್ನು ಮಣಿಸಿದ್ದ ಸೈನಾ, ಅದೇ ಆಟ ಪುನರಾವರ್ತಿಸಲು ವಿಫಲರಾದರು. ತಮಗೆ ಲಭಿಸಿದ್ದ ಎರಡು ಮ್ಯಾಚ್ ಪಾಯಿಂಟ್ ಅವಕಾಶಗಳನ್ನು ಕೈಚೆಲ್ಲಿ ಪಂದ್ಯವನ್ನು ಎದುರಾಳಿಗೆ ಒಪ್ಪಿಸಿದರು.

ಪ್ರಣಯ್ ಅವರು ಮೊದಲ ಗೇಮ್ ಗೆದ್ದರೂ ಬಳಿಕ ಆಟದ ಮೇಲಿನ ಲಯ ಕಳೆದುಕೊಂಡು 12-21, 21-14, 21-18 ರಲ್ಲಿ ಜಪಾನ್‌ನ ಕೊದೈ ನರವೊಕ ಎದುರು ಸೋತರು.

ಪುರುಷರ ಡಬಲ್ಸ್‌ನಲ್ಲಿ ಭಾರತದ ಎಂ.ಆರ್.ಅರ್ಜುನ್– ಧ್ರುವ್ ಕಪಿಲ ಜೋಡಿ 10-21, 21-18, 21-17 ರಲ್ಲಿ ಇಂಡೊನೇಷ್ಯದ ಮೊಹಮ್ಮದ್ ಅಹ್ಸನ್– ಹೆಂಡ್ರಾ ಸೆತಿಯವನ್ ಎದುರು ಸೋತರು.

ಕುಸ್ತಿ: ಅರ್ಜುನ್ ಹಲಕುರ್ಕಿಗೆ ಬೆಳ್ಳಿ

ಪ್ರಜಾವಾಣಿ ವಾರ್ತೆ



ಅರ್ಜುನ್ ಹಲಕುರ್ಕಿ

ದಾವಣಗೆರೆ: ಉತ್ತರ ಆಫ್ರಿಕಾದ ಟುನಿಷಿಯಾದಲ್ಲಿ ಗುರುವಾರ ಮುಕ್ತಾಯಗೊಂಡ ಸೀನಿಯರ್ ವಿಶ್ವ ರ್‍ಯಾಂಕಿಂಗ್ ಸರಣಿಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾರತೀಯ ಸೇನೆಯ ಅರ್ಜುನ್ ಹಲಕುರ್ಕಿ ಬೆಳ್ಳಿ ಪದಕ ಗಳಿಸಿದರು.

60 ಕೆ.ಜಿ ವಿಭಾಗದ ಗ್ರಿಕೊ ರೋಮನ್ ಕುಸ್ತಿಯ ಫೈನಲ್ ಬೌಟ್‌ನಲ್ಲಿ ಅರ್ಜುನ್ ಹಲಕುರ್ಕಿ ಅವರು 2–8ರಿಂದ ಟರ್ಕಿಯ ಅಯಾನ್ ಕರಕುಶ್ ವಿರುದ್ಧ ಪರಾಭವಗೊಂಡರು.

ಬಾಗಲಕೋಟೆ ಜಿಲ್ಲೆಯ ಬೇವಿನಹಳ್ಳಿಯ ಅರ್ಜುನ್, ದಾವಣಗೆರೆಯ ಕ್ರೀಡಾ ವಸತಿನಿಲಯದಲ್ಲಿ ಅಂತರರಾಷ್ಟ್ರೀಯ ಕುಸ್ತಿಪಟು ಆರ್.ಶಿವಾನಂದ ಹಾಗೂ ಭಾರತೀಯ ಸೇನೆಯ ವಿನಾಯಕ ದಳವಿ ಅವರಿಂದ ತರಬೇತಿ ಪಡೆದುಕೊಂಡಿದ್ದರು.

ನಿಯಮ ತಿದ್ದುಪಡಿ: ಕೆಬಿಎ ಚಿಂತನೆ

ಪ್ರಜಾವಾಣಿ ವಾರ್ತೆ

ಅಡ್‌ಹಾಕ್ ಸಮಿತಿ ನೇಮಕ ಸಾಧ್ಯತೆ

ಮಾನ್ಯತೆ ರದ್ದುಗೊಳಿಸಿರುವುದು ವಿರುದ್ಧ ಕೆಬಿಎ ನ್ಯಾಯಾಲಯದ ಮೆಟ್ಟಿಲೇರಿದರೆ, ವಿವಾದ ಇತ್ಯರ್ಥವಾಗಲು ಹೆಚ್ಚಿನ ಸಮಯ ಬೇಕಾಗಬಹುದು. ಆದ್ದರಿಂದ ಕೆಬಿಎ ಆಡಳಿತ ನೋಡಿಕೊಳ್ಳಲು, ಬಿಎಐ ಅಡ್‌ಹಾಕ್ ಸಮಿತಿಯನ್ನು ನೇಮಿಸುವ ಸಾಧ್ಯತೆಯೂ ಇದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು: ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ (ಬಿಎಐ) ಮಾನ್ಯತೆಯನ್ನು ಮರಳಿ ಪಡೆಯುವ ಪ್ರಯತ್ನ ಆರಂಭಿಸಿರುವ ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ), ನಿಯಮಗಳಿಗೆ ತಿದ್ದುಪಡಿ ತರುವ ಚಿಂತನೆ ಮಾಡಿದೆ.

ನಿಯಮಗಳ ತಿದ್ದುಪಡಿಗೆ ನೀಡಿದ್ದ ಗಡುವು ಮೀರಿದ ಕಾರಣ ಬಿಎಐ, ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಯ ಮಾನ್ಯತೆಯನ್ನು ರದ್ದುಗೊಳಿಸಿತ್ತು.

ಮಾನ್ಯತೆ ಮರಳಿ ಪಡೆಯಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲು ಶುಕ್ರವಾರ ಕಾರ್ಯಕಾರಿ ಸಮಿತಿಯ ತುರ್ತು ಸಭೆ ಆಯೋಜಿಸಲಾಗಿತ್ತು. ಬಿಕ್ಕಟ್ಟು ಬಗೆಹರಿಸಲು ತಮ್ಮ ಮುಂದಿರುವ ಆಯ್ಕೆಗಳ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು. ಸಮಿತಿಯ 19 ಸದಸ್ಯರಲ್ಲಿ 15 ಮಂದಿ ಸಭೆಯಲ್ಲಿ ಪಾಲ್ಗೊಂಡಿದ್ದರು.


‘ನಿಯಮಗಳಲ್ಲಿ ತಿದ್ದುಪಡಿ ಮಾಡುವಂತೆ ಬಿಎಐ ಸೂಚಿಸಿದೆ. ಅಂತಹ ಸಾಧ್ಯತೆಯ ಬಗ್ಗೆ ಚರ್ಚಿಸಿದ್ದೇವೆ. ಅದರ ಜತೆಯಲ್ಲಿ ಕಾನೂನು ಹೋರಾಟಕ್ಕಿಳಿಯುವ ಆಯ್ಕೆಯನ್ನೂ ಮುಕ್ತವಾಗಿಡಲಾಗಿದೆ. ವಕೀಲರ ಸಲಹೆ ಪಡೆದು ಮುಂದಿನ ಹೆಜ್ಜೆಯಿಡಲಾಗುವುದು’ ಎಂದು ಕೆಬಿಎ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಎಲ್ಲ ಜಿಲ್ಲೆಗಳ ಪ್ರತಿನಿಧಿಗಳ ಜತೆ ಚರ್ಚಿಸಿದ್ದೇವೆ. ಬಿಎಐ ನಿಯಮಗಳು ಮತ್ತು ರಾಜ್ಯದ ಆಟಗಾರರು, ನಮ್ಮ ಸದಸ್ಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಿಯಮಗಳಿಗೆ ತಿದ್ದುಪಡಿ ತರಬೇಕೆಂಬ ಸಲಹೆಗಳು ಬಂದವು’ ಎಂದು ಹೇಳಿದರು.

19 ಸದಸ್ಯರನ್ನೊಳಗೊಂಡ ಕೆಬಿಎ ಕಾರ್ಯಕಾರಿ ಸಮಿತಿಯಲ್ಲಿ ಈಗ ಜಿಲ್ಲೆಗಳನ್ನು ಪ್ರತಿನಿಧಿಸುವ 9 ಮಂದಿ ಮತ್ತು 10 ಆಜೀವ ಸದಸ್ಯರು ಇದ್ದಾರೆ. ಇದಕ್ಕೆ ಅಸಮಾಧಾನ ಸೂಚಿಸಿರುವ ಬಿಎಐ, ಜಿಲ್ಲೆಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವಂತೆ ಸೂಚಿಸಿತ್ತು.

ಯಾರ ವಿರುದ್ಧವೂ ಇಲ್ಲ: ‘ನಾವು ಯಾರ ವಿರುದ್ಧವೂ ಇಲ್ಲ. ಈಗ ತಲೆದೋರಿರುವ ಬಿಕ್ಕಟ್ಟು ಶೀಘ್ರದಲ್ಲೇ ಬಗೆಹರಿಯಬೇಕು ಎಂಬುದೇ ಬಯಕೆ. ಜಿಲ್ಲಾ ಸಂಸ್ಥೆಗಳಿಗೆ ಪ್ರಾತಿನಿಧ್ಯ ನೀಡುವುದರ ಜತೆಯಲ್ಲೇ ರಾಜ್ಯದಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯನ್ನು ಪೋಷಿಸುವ ನಮ್ಮ ಸದಸ್ಯರ ಹಿತಾಸಕ್ತಿ ಕಾಪಾಡಬೇಕಿದೆ’ ಎಂದು ಕೆಬಿಎ ಅಧ್ಯಕ್ಷ ಮನೋಜ್‌ಕುಮಾರ್ ಜಿ.ಎಚ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕೆಂಟ್ ಪರ ಆಡಲಿರುವ ಸೈನಿ



ನವದೀಪ್ ಸೈನಿ

ಕೆಂಟ್ (ಪಿಟಿಐ): ಭಾರತದ ವೇಗದ ಬೌಲರ್ ನವದೀಪ್ ಸೈನಿ ಅವರು ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನ ಈ ಋತುವಿನಲ್ಲಿ ಕೆಂಟ್ ತಂಡದ ಪರ ಎಂಟು ಪಂದ್ಯಗಳನ್ನುಆಡಲಿದ್ದಾರೆ.

29 ವರ್ಷದ ಸೈನಿ 2019ರ ಆಗಸ್ಟ್‌ನಲ್ಲಿ ಟಿ20 ಪಂದ್ಯದ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಅವರು ಮೂರೂ ಮಾದರಿಗಳಲ್ಲಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದಾರೆ. ಆದರೆ ತಂಡದಲ್ಲಿ ಸ್ಥಾನವನ್ನು ಖಚಿತಪಡಿಸಲು ವಿಫಲರಾಗಿದ್ದರು.

‘ಸೈನಿ ಅವರೊಂದಿಗೆ ಒಪ್ಪಂದ ಮಾಡಿಕೊಂಡಿರುವುದು ಸಂತಸದ ವಿಷಯ. ಅವರು ಈ ಋತುವಿನಲ್ಲಿ ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ಮೂರು ಪಂದ್ಯಗಳು ಹಾಗೂ ರಾಯಲ್ ಲಂಡನ್ ಕಪ್‌ನಲ್ಲಿ ಐದು ಪಂದ್ಯಗಳನ್ನು ಆಡಲಿದ್ದಾರೆ’ ಎಂದು ಕೆಂಟ್ ತಂಡದ ಪ್ರಕಟಣೆ ತಿಳಿಸಿದೆ.

ಗಾಲ್ಫ್: ಪ್ರಣವಿ ಚಾಂಪಿಯನ್

ಪ್ರಜಾವಾಣಿ ವಾರ್ತೆ



ಪ್ರಣವಿ ಅರಸ್ –ಪ್ರಜಾವಾಣಿ ಚಿತ್ರ

ಬೆಂಗಳೂರು: ಉತ್ತಮ ಪ್ರದರ್ಶನ ಮುಂದುವರಿಸಿದ ಪ್ರಣವಿ ಅರಸ್ ಅವರು ಶುಕ್ರವಾರ ಇಲ್ಲಿ ಕೊನೆಗೊಂಡ ಮಹಿಳಾ ಹೀರೊ ಪ್ರೊ ಗಾಲ್ಫ್ ಟೂರ್‌ನ ಒಂಬತ್ತನೇ ಲೆಗ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಮೈಸೂರಿನ ಯುವ ಗಾಲ್ಫರ್ ಈ ಋತುವಿನಲ್ಲಿ ಪಡೆದ ನಾಲ್ಕನೇ ಪ್ರಶಸ್ತಿ ಇದಾಗಿದೆ. ಈ ಗೆಲುವಿನ ಮೂಲಕ ‘ಆರ್ಡ್ಸ್ ಆಫ್ ಮೆರಿಟ್’ನಲ್ಲಿ ಅವರು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಬೆಂಗಳೂರು ಗಾಲ್ಫ್ ಕೋರ್ಸ್‌ನಲ್ಲಿ ಶುಕ್ರವಾರವೂ ನಿಖರ ಪ್ರದರ್ಶನ ಮುಂದುವರಿಸಿದ ಪ್ರಣವಿ 71 ಅವಕಾಶಗಳಲ್ಲಿ ಸ್ಪರ್ಧೆ ಕೊನೆಗೊಳಿಸಿದರು. ಮೂರು ಸುತ್ತುಗಳಲ್ಲಿ ಒಟ್ಟಾರೆ 209 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನ ಪಡೆದರು.

ಪ್ರಣವಿ ಅವರಿಗೆ ಪ್ರಬಲ ಪೈಪೋಟಿ ನೀಡಿದ ದೆಹಲಿಯ ಸೆಹೆರ್ ಅತ್ವಾಲ್ (212) ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು.

ಹಿತಾಶ್ರೀ ಬಕ್ಷಿ (215) ಮೂರನೇ ಸ್ಥಾನ ಪಡೆದುಕೊಂಡರೆ, ವೃತ್ತಿಪರ ಆಟಗಾರ್ತಿಯಾಗಿ ಬದಲಾದ ಬಳಿಕ ಇದೇ ಮೊದಲ ಟೂರ್ನಿಯಲ್ಲಿ ಆಡಿದ ಸ್ನೇಹಾ ಸಿಂಗ್ (216) ನಾಲ್ಕನೇ ಸ್ಥಾನ ಗಳಿಸಿದರು. ಒವಿಯಾ ರೆಡ್ಡಿ, ಗೌರಿಕಾ ಬಿಷ್ಣೋಯ್ ಜಂಟಿ ಐದನೇ ಸ್ಥಾನ, ಅಫ್ಶಾನ್ ಫಾತಿಮಾ ಹಾಗೂ ನಯನಿಕಾ ಸಂಗಾ ಜಂಟಿ ಏಳನೇ ಸ್ಥಾನ ತಮ್ಮದಾಗಿಸಿಕೊಂಡರು.

ಟಿ20 ವಿಶ್ವಕಪ್ ಟೂರ್ನಿಗೆ ಜಿಂಬಾಬ್ವೆ, ನೆದರ್ಲೆಂಡ್ಸ್



ಜಿಂಬಾಬ್ವೆಯ ವೆಸ್ಲಿ ಮೆಡೆವೆರಾ – ಎಎಫ್‌ಪಿ ಚಿತ್ರ

ದುಬೈ/ಬುಲವಾಯೊ (ಪಿಟಿಐ): ನೆದರ್ಲೆಂಡ್ಸ್ ಮತ್ತು ಜಿಂಬಾಬ್ವೆ ತಂಡಗಳು ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಅರ್ಹತೆ ಗಳಿಸಿವೆ.

ಟಿ20 ವಿಶ್ವಕಪ್ ಕ್ವಾಲಿಫೈಯರ್ ಬಿ ಗುಂಪಿನ ನಾಲ್ಕರ ಘಟ್ಟದಲ್ಲಿ ನೆದರ್ಲೆಂಡ್ಸ್ ಏಳು ವಿಕೆಟ್‌ಗಳಿಂದ ಅಮೆರಿಕ ತಂಡವನ್ನು ಸೋಲಿಸಿತು. ಇನ್ನೊಂದು ಸೆಮಿಫೈನಲ್‌ನಲ್ಲಿ ಜಿಂಬಾಬ್ವೆ ತಂಡವು 27 ರನ್‌ಗಳಿಂದ ಪಪುವಾ ನ್ಯೂ ಗಿನಿ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ: 20 ಓವರ್‌ಗಳಲ್ಲಿ 5ಕ್ಕೆ199 (ಚಕಬ್ವಾ 30, ಕ್ರೇಗ್ ಎರ್ವಿನ್ 38, ಮ್ಯಾಡೆವರ್ 42, ರಝಾ 22, ಮಿಲ್ಟನ್ ಶುಂಭಾ ಔಟಾಗದೆ 29, ಸೆಸೆ ಬಾವು 32ಕ್ಕೆ2, ಚಾರ್ಲ್ಸ್ ಅಮಿನಿ 28ಕ್ಕೆ2), ಪಪುವಾ ನ್ಯೂಗಿನಿ: 20 ಓವರ್‌ಗಳಲ್ಲಿ 8ಕ್ಕೆ 172 (ಚಾರ್ಲ್ಸ್ ಅಮಿನಿ 31, ಟೋನಿ ಉರಾ 66, ಬ್ಲೆಸಿಂಗ್ ಮುಜರ್ಬಾನಿ 24ಕ್ಕೆ2) ಫಲಿತಾಂಶ: ಜಿಂಬಾಬ್ವೆಗೆ 27 ರನ್‌ಗಳ ಜಯ

ಅಮೆರಿಕ: 19.4 ಓವರ್‌ಗಳಲ್ಲಿ 138 (ಸ್ಟೀವನ್ ಟೇಲರ್ 26, ಮೊನಾಂಕ್ ಪಟೇಲ್ 32, ನಿಸರ್ಗ್ ಪಟೇಲ್ 28, ಬ್ಯಾಸ್ ಡೆ ಲೀಡ್ 23ಕ್ಕೆ2, ವ್ಯಾನ್ ಮೀಕೆರೆನ್ 22ಕ್ಕೆ2) ನೆದರ್ಲೆಂಡ್ಸ್: 19 ಓವರ್‌ಗಳಲ್ಲಿ 3ಕ್ಕೆ139 (ಬ್ಯಾಸ್ ಡಿ ಲೀಡ್ ಔಟಾಗದೆ 91, ಸ್ಕಾಟ್ ಎಡ್ವರ್ಡ್ಸ್ ಔಟಾಗದೆ 26) ಫಲಿತಾಂಶ: ನೆದರ್ಲೆಂಡ್ಸ್ ತಂಡಕ್ಕೆ 7 ವಿಕೆಟ್‌ಗಳ ಜಯ.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಬಿಎಸ್‌ಎನ್‌ಎಲ್, ಭಾರತ್

ಬೆಂಗಳೂರು: ಬಿಎಸ್‌ಎನ್‌ಎಲ್ ಮತ್ತು ಭಾರತ್ ಸ್ಪೋರ್ಟ್ಸ್ ಯೂನಿಯನ್ ತಂಡಗಳು ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಆಶ್ರಯದ, ಎಂ.ಸಿ.ಶ್ರೀನಿವಾಸ ಸ್ಮಾರಕ ಟ್ರೋಫಿ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಬಿಎಸ್‌ಎನ್‌ಎಲ್ 81–74 ರಲ್ಲಿ ಕೆಎಸ್‌ಪಿ ತಂಡವನ್ನು ಮಣಿಸಿತು. ವಿರಾಮದ ವೇಳೆಗೆ ವಿಜಯಿ ತಂಡದವರು 47–43 ರಲ್ಲಿ ಮುನ್ನಡೆಯಲ್ಲಿದ್ದರು. ಉತ್ತಮ ಆಟವಾಡಿದ ಹರೀಶ್ 19 ಹಾಗೂ ನಿಖಿಲೇಶ್ 11 ಪಾಯಿಂಟ್ಸ್ ಕಲೆಹಾಕಿದರು. ಕೆಎಸ್‌ಪಿ ತಂಡದ ಮನೋಜ್ (25 ಪಾಯಿಂಟ್) ಸೋಲಿನ ನಡುವೆಯೂ ಮಿಂಚಿದರು.

ಇನ್ನೊಂದು ಸೆಮಿಫೈನಲ್‌ನಲ್ಲಿ ಭಾರತ್ ತಂಡ 75–55 ರಲ್ಲಿ ಮೈಸೂರಿನ ರೈಸಿಂಗ್ ಸ್ಟಾರ್ ಬ್ಯಾಸ್ಕೆಟ್‌ಬಾಲ್ ತಂಡವನ್ನು ಸೋಲಿಸಿತು. ಅಕ್ಷಯ್ (27) ಮತ್ತು ನಕುಲ್ (19) ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಜುಲೈ 18 ರಂದು ಸಂಜೆ 4ಕ್ಕೆ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಭಾರತ್‌–ಬಿಎಸ್‌ಎನ್‌ಎಲ್ ತಂಡಗಳು ಪೈಪೋಟಿ ನಡೆಸಲಿವೆ. ಅದೇ ದಿನ ಮಧ್ಯಾಹ್ನ 3ಕ್ಕೆ ‘ಸಿ’ ಡಿವಿಷನ್ ಲೀಗ್ ಫೈನಲ್ ನಡೆಯಲಿದ್ದು, ವಿಮಾನಪುರ ಕ್ಲಬ್‌–ವಿವೇಕ್ಸ್ ಕ್ಲಬ್ ಎದುರಾಗಲಿವೆ.

ಬೆಂಗಳೂರು ರೇಸ್

ಕ್ರೌನ್ ಕನ್ಸಾರ್ಟ್‌ ಗೆಲ್ಲುವ ನಿರೀಕ್ಷೆ

ಆರ್.ಆರ್.ಬೈರಾಮ್ಜಿ ಮೆಮೋರಿಯಲ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ರೌನ್ ಕನ್ಸಾರ್ಟ್‌ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ವಿನ್‌ಮೈಲವ್ 2, ಡಿವೈನ್‌ರೇ 1, ಬೆಲ್ವೆಡಿರ್ 8
2ನೇ ರೇಸ್: ಸ್ಟಾರ್‌ಕಾಮೆಟ್ 4, ಕೊನಬಾಸ್ 3, ಮೆಷರ್ ಆಫ್ ಟೈಮ್ 1
3ನೇ ರೇಸ್: ಕೆಪ್ರಿಯಾಟಿ 6, ಮಾಂಟೆಲಿನಾ 10, ಸ್ಟಾರ್ ಅಡ್ಮಿರಲ್ 4
4ನೇ ರೇಸ್: ಫಾರೆಸ್ಟಿ 5, ಮೂನ್ಸ್ ಬ್ಲೆಸಿಂಗ್ಸ್ 7, ಇಂಪೀರಿಯಲ್ ಬ್ಲೂ 4
5ನೇ ರೇಸ್: ಸ್ಟಾರ್ ಗ್ಲೋರಿ 6, ಪ್ರೈಡ್ಸ್ ಏಂಜೆಲ್ 4, ಕೆನ್ಸಿಂಗ್ಟನ್ ಕೋರ್ಟ್ 8
6ನೇ ರೇಸ್: ಕ್ರೌನ್ ಕನ್ಸಾರ್ಟ್ 5, ಫಾರ್ಚುನೇಟಸ್ 3, ಯೂಕಾನ್ 4
7ನೇ ರೇಸ್: ಮಿಟ್ಸುರೊ 3, ಲಾಟರ್‌ಬ್ರನೆನ್ 1, ಏರ್‌ಡಿಸ್ಪ್ಲೇ 11
8ನೇ ರೇಸ್: ಎಕೋ ಫ್ರೆಂಡ್ಲಿ 1, ಸ್ಪೀಡ್ ಸೆವೆನ್ 3, ರಷ್ಯನ್ ರೊಮಾನ್ಸ್ 12
9ನೇ ರೇಸ್: ಟೊರೊನೆರೊ 7, ಸ್ಟ್ರೈಕಿಂಗ್ ಮೆಮೋರಿ 2, ಅನ್ಸಾಲ್ಡೊ 8

ಉತ್ತಮ ಬೆಟ್: ಸ್ಟಾರ್ ಗ್ಲೋರಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9